Swabhimani Sahakari

Pages : 36 / 12₹

Volume - 16
Issue - 12
December - 2019

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ




ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಮೈಸೂರಿನಲ್ಲಿ ನಡೆದ
66ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಕಾರ್ಯಕ್ರಮ







ಕ್ರಿಸ್‌ಮಸ್
ಹಬ್ಬದ
ಶುಭಾಶಯಗಳು

ಜನವರಿ 1
ಸೌಹಾರ್ದ ಸಹಕಾರಿ
ದಿನಾಚರಣೆ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4867

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1304

# ಸೌಹಾರ್ದ ಸಹಕಾರಿಗಳ ವ್ಯಾಜ್ಯಗಳ ಶೀಘ್ರ ವಿಲೇವಾರಿಗೆ ಸಹಕಾರಿಗಳ ನಿಬಂಧಕರಿಂದ ಮಧ್ಯಸ್ಥದಾರರ (Arbitrators) ನೇಮಕಕ್ಕೆ ಕೃತಜ್ಞತೆಗಳು



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

> ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರ ಚಳುವಳ ಸರಕಾರದ, ಸಹಕಾರಿಗಳ ಹಾಗೂ ಸಹಕಾರಿ ಇಲಾಖೆಯ ಪ್ರೋತ್ಸಾಹದಿಂದ ತನ್ನ ಕಾರ್ಯಚಟುವಟಿಕೆಗಳ ಗುಣಮಟ್ಟ ಹೆಚ್ಚಿಸುವಲ್ಲಿ ಕಾರ್ಯನಿರತವಾಗಿದೆ. ಸಂಯುಕ್ತ ಸಹಕಾರಿಯ ದಾವಾ ನ್ಯಾಯಾಲಯದಲ್ಲಿ ವ್ಯಾಜ್ಯಗಳ ವಿಲೇವಾರಿ ವಿಳಂಬವಾಗುತ್ತಿರುವ ಬಗ್ಗೆ ಹಾಗೂ ಪರ್ಯಾಯವಾಗಿ ವ್ಯಾಜ್ಯಗಳ ಮಧ್ಯಸ್ಥದಾರರ ನೇಮಕಾತಿ ಮಾಡಿಕೊಡಬೇಕೆಂದು ವಿನಂತಿಸಿಕೊಂಡಾಗ ಸಹಕಾರಿಗಳ ನಿಬಂಧಕರು ನಮ್ಮ ವಿನಂತಿಗೆ ಸ್ಪಂದಿಸಿದರು.

**ರಾಜ್ಯದ ಎಲ್ಲ ಸಹಕಾರಿಗಳಿಗೆ ಆತ್ಮೀಯ ಶುಭಾಶಯಗಳು.**

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭವಾಗಿ 2 ದಶಕಗಳನ್ನು ಪೂರ್ತಿಗೊಳಿಸುವತ್ತ ದಾಪುಗಾಲು ಹಾಕಲಿದೆ. ರಾಜ್ಯದ ಸೌಹಾರ್ದ ಸಹಕಾರ ಚಳುವಳಿ ರಾಷ್ಟ್ರದಲ್ಲಿಯೇ ಮಾದರಿಯಾಗಿ ಬೆಳೆಯುವುದರ ಜೊತೆಗೆ ತನ್ನ ಉತ್ತಮ ಕಾರ್ಯಚಟುವಟಿಕೆಗಳಿಂದ ಬೇರೆ ರಾಜ್ಯಗಳಲ್ಲೂ ಅಳವಡಿಸಿಕೊಳ್ಳುವ ಬಗ್ಗೆ ರಾಷ್ಟ್ರದಾದ್ಯಂತ ಚಿಂತನೆ ನಡೆಯುತ್ತಿರುವುದು ಸಹಕಾರಿಗಳು ಹೆಮ್ಮೆಪಡುವ ವಿಷಯವೆಂದು ನಾನು ಭಾವಿಸಿದ್ದೇನೆ.

ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರ ಚಳುವಳಿ ಸರಕಾರದ, ಸಹಕಾರಿಗಳ ಹಾಗೂ ಸಹಕಾರಿ ಇಲಾಖೆಯ ಪ್ರೋತ್ಸಾಹದಿಂದ ತನ್ನ ಕಾರ್ಯಚಟುವಟಿಕೆಗಳ ಗುಣಮಟ್ಟ ಹೆಚ್ಚಿಸುವಲ್ಲಿ ಕಾರ್ಯನಿರತವಾಗಿದೆ. ಸಂಯುಕ್ತ ಸಹಕಾರಿಯ ದಾವಾ ನ್ಯಾಯಾಲಯದಲ್ಲಿ ವ್ಯಾಜ್ಯಗಳ ವಿಲೇವಾರಿ ವಿಳಂಬವಾಗುತ್ತಿರುವ ಬಗ್ಗೆ ಹಾಗೂ ಪರ್ಯಾಯವಾಗಿ ವ್ಯಾಜ್ಯಗಳ ಮಧ್ಯಸ್ಥದಾರರ ನೇಮಕಾತಿ ಮಾಡಿಕೊಡಬೇಕೆಂದು ವಿನಂತಿಸಿಕೊಂಡಾಗ ಸಹಕಾರಿಗಳ ನಿಬಂಧಕರು ನಮ್ಮ ವಿನಂತಿಗೆ ಸ್ಪಂದಿಸಿದರು. ರಾಜ್ಯದಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ವಕೀಲರನ್ನು ಸಂಪರ್ಕಿಸಿ ಅವರುಗಳ ಕನಿಷ್ಠ 5 ವರ್ಷಗಳ ಅನುಭವದ ಆಧಾರದ ಮೇಲೆ ರಾಜ್ಯದಾದ್ಯಂತ 202 ವಕೀಲರುಗಳನ್ನು ವ್ಯಾಜ್ಯಗಳ ಮಧ್ಯಸ್ಥರುಗಳನ್ನಾಗಿ ನೇಮಿಸಿ ಆದೇಶ ಹೊರಡಿಸಿರುವುದಕ್ಕಾಗಿ ರಾಜ್ಯದ ಎಲ್ಲ ಸಹಕಾರಿಗಳ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಕಾರ್ಯ ತ್ವರಿತವಾಗಿ ಸಾಗಲು ಮಾನ್ಯ ಸಹಕಾರ ಮಂತ್ರಿಗಳು ಪೂರ್ಣ ಸಹಕಾರ ನೀಡಿರುವುದಕ್ಕೆ ಸಂಯುಕ್ತ ಸಹಕಾರಿಯ ವತಿಯಿಂದ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಮಾನ್ಯ ಸಹಕಾರ ಸಂಘಗಳ ನಿಬಂಧಕರು ಹೊರಡಿಸಿದ ಆದೇಶದ ಪ್ರಕಾರ ರೂ 3.00 ಲಕ್ಷಗಳ ವರೆಗಿನ ವಿವಾದಗಳನ್ನು ಇತ್ಯರ್ಥಪಡಿಸಲು ಆಯಾ ಜಿಲ್ಲೆಗಳಲ್ಲಿನ ಮಧ್ಯಸ್ಥದಾರರಿಗೆ ವ್ಯಾಜ್ಯಗಳನ್ನು ವಹಿಸಿಕೊಡುವ ಅಧಿಕಾರವನ್ನು ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿಗಳು ಹೊಂದಿದ್ದಾರೆ.

ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಇದುವರೆಗೆ ಬಾಕಿ ಇರುವ 10926 ಪ್ರಕರಣಗಳ ಪೈಕಿ 3888 ಪ್ರಕರಣಗಳು ರೂ 3.00 ಲಕ್ಷದ ಒಳಗಡೆ ಇರುವ ಪ್ರಕರಣಗಳಾಗಿರುವುದರಿಂದ ಪ್ರಸ್ತುತ ಮಧ್ಯಸ್ತದಾರರ ನೇಮಕದಿಂದಾಗಿ ಇವುಗಳ ವಿಲೇವಾರಿ ಬೇಗನೆ ಆಗುತ್ತದೆ. ಈ ಆದೇಶದಿಂದಾಗಿ ಸೌಹಾರ್ದ ಸಹಕಾರಿಗಳಿಗೆ ಅವರು ಸಲ್ಲಿಸಿರುವ ವ್ಯಾಜ್ಯಗಳ ಇತ್ಯಾರ್ಥಪಡಿಸಲು ಆಯಾ ಜಿಲ್ಲೆಗಳ ಮಧ್ಯಸ್ಥದಾರರಿಗೆ ವಹಿಸಿಕೊಡುವುದರಿಂದ ಸೌಹಾರ್ದ ಸಹಕಾರಿಗಳಿಗೆ ಅನುಕೂಲವಾಗುತ್ತದೆ ಎಂದು ಸಂಯುಕ್ತ ಸಹಕಾರಿಯು ಭಾವಿಸಿದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ಬಗ್ಗೆ ಗಮನಹರಿಸಿ ಕಾರ್ಯಪ್ರವೃತ್ತರಾಗಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**
ಗೌರವ ಅಧ್ಯಕ್ಷರು

**ಶ್ರೀ ಜಗದೀಶ ಕವಟಗಿಮಠ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ ಪಾಟೀಲ**
ಸಂಪಾದಕರು

**ಶ್ರೀ ವಿ.ಜೆ. ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್: souharda@souharda.coop
swabhimani@souharda.coop
ವೆಬ್‌ಸೈಟ್: www.souharda.coop

## ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 5–21
ಸಹಕಾರಿಗಳ ನಿಬಂಧಕರ ಸುತ್ತೋಲೆ ..... ........................................ 22–33
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ........................................ 24–30
ಲೇಖನ........................................ 31–36

# ಸಂಪಾದಕೀಯ

## ಸಹಕಾರಿ ಸಪ್ತಾಹ ಸಹಕಾರಿಗಳಿಗೆ ವಾರ್ಷಿಕೋತ್ಸವ, ಆತ್ಮಾವಲೋಕನ, ಸಮಸ್ಯೆಗಳ ಪರಿಹಾರೋಪಾಯಗಳ ಜೊತೆಗೆ ಅಭಿವೃದ್ಧಿಗೆ ಮುನ್ನುಡಿ ಹಾಗೂ ಪ್ರಗತಿಗೆ ಕಾರ್ಯಸೂಚಿ.

66ನೇ ಅಖಿಲ ಭಾರತ ಸಹಕಾರ ಸಪ್ತಾಹ 20ನೇ ನವೆಂಬರ್ 2019ರಂದು ಮೈಸೂರಿನಲ್ಲಿ ಸಹಕಾರಿ ಹಬ್ಬವಾಗಿ ಅತ್ಯಂತ ಉತ್ಸಾಹ ಹಾಗೂ ಸಡಗರ ಸಂಭ್ರಮಗಳಿಂದ ಅರ್ಥಪೂರ್ಣವಾಗಿ ಆಚರಿಸಿರುವುದರೊಂದಿಗೆ ಮುಕ್ತಾಯವಾಗಿರುವುದು ಸರಿ. ವರ್ಷದಿಂದ ವರ್ಷಕ್ಕೆ ಈ ಸಪ್ತಾಹದ ಆಚರಣೆಯಲ್ಲಿ ಸಹಕಾರಿ ಕ್ಷೇತ್ರದ ರಾಷ್ಟ್ರಮಟ್ಟದಿಂದ ಗ್ರಾಮ ಮಟ್ಟದ ವರೆಗಿನ ಪ್ರಗತಿಯ ಹಾಗೂ ಕಾರ್ಯಚಟುವಟಿಕೆಗಳ ಆತ್ಮಾವಲೋಕನವು ನಡೆದಿರುವುದು ಸಹಕಾರಿಗಳಿಗೆ ಹೊಸ ಚೈತನ್ಯವನ್ನು ತಂದುಕೊಟ್ಟಿದೆ. ಸಹಕಾರಿ ತತ್ವಗಳ ಆಧಾರದ ಮೇಲೆ ಅತ್ಯಂತ ಪಾರದರ್ಶಕವಾಗಿ ಮತ್ತು ವೃತ್ತಿಪರರಾಗಿ ಸಹಕಾರಿಗಳು ಕಾರ್ಯನಿರ್ವಹಿಸಬೇಕು ಎಂಬ ಸಂದೇಶವನ್ನು ಸಹ ಈ ಸಹಕಾರ ಸಪ್ತಾಹ ಸಹಕಾರಿಗಳಿಗೆ ನೀಡಿದೆ. ಹೊಸ ಹೊಸ ಯೋಜನೆಗಳನ್ನು ಜಾರಿ ಮಾಡುವುದಾಗಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಾನ್ಯ ಮುಖ್ಯ ಮಂತ್ರಿಗಳು, ಸಹಕಾರ ಮಂತ್ರಿಗಳು ಹಾಗೂ ಅನೇಕ ಸಚಿವರು ಹೇಳಿದ್ದಾರೆ. ಈ ಯೋಜನೆಗಳೆಲ್ಲ ಪ್ರಸಕ್ತ ಸಾಲಿನಲ್ಲಿ ಜಾರಿಗೆ ಬರುವಂತೆ ಕ್ರಮವಿಡುವುದು ಸಹಕಾರಿಗಳ ಕಾರ್ಯಚಟುವಟಿಕೆಗಳ ಆದ್ಯತಾವಲಯವಾಗಲಿ.

66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಂದರ್ಭದಲ್ಲಿ ಗಮನಿಸಬಹುದಾದ ಮಹತ್ವದ ಅಂಶವೆಂದರೆ ಸಹಕಾರ ಸಚಿವರು ಗಣ್ಯರು ಸಹಕಾರಿ ಮುಖಂಡರು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಕೆಲವು ಸಲಹೆಗಳನ್ನು ನೀಡಿರುವುದು. ವಿಶೇಷವಾಗಿ ದುಡಿಯುವ ವರ್ಗವನ್ನು ಮಹಿಳೆಯರನ್ನು ಸಹಕಾರ ಕ್ಷೇತ್ರದ ವ್ಯಾಪ್ತಿಗೆ ತನ್ನಿ. ಸಹಕಾರ ಕ್ಷೇತ್ರ ರಕ್ಷಣಾರಹಿತ ಕ್ಷೇತ್ರವಾಗಬಾರದು. ಇದು ಸುರಕ್ಷಿತ ಕ್ಷೇತ್ರವೆಂಬ ಭಾವನೆ ಸಹಕಾರಿಗಳಲ್ಲಿ ಮೂಡುವಂತಹ ವಿಶ್ವಾಸಾರ್ಹ ಕ್ಷೇತ್ರವಾಗಿ ಕಾರ್ಯನಿರ್ವಹಿಸುವುದು ಅಗತ್ಯ. ಸಹಕಾರ ಕ್ಷೇತ್ರದ ಬೆಳವಣಿಗೆಯನ್ನು ಗಮನಿಸಿದ ಗಣ್ಯರು ಸಹಕಾರ ಕ್ಷೇತ್ರದ ಸಾಧನೆಯನ್ನು ಹಾಗೂ ಅದು ದೇಶಕ್ಕೆ ನೀಡಿದ ಮಹತ್ವದ ಕಾಣಿಕೆಯನ್ನು ಮೆಲಕುಹಾಕುವುದರೊಂದಿಗೆ ಈ ದೇಶದಲ್ಲಿ ಸಹಕಾರ ಚಳುವಳಿಯ ಅಗತ್ಯತೆಯನ್ನು ಒತ್ತಿಹೇಳಿರುವುದು ಸ್ವಾಗತಾರ್ಹ.

ಸಹಕಾರ ಸಪ್ತಾಹದ ಆಚರಣೆ ಮುಂಬರುವ ದಿನಗಳಲ್ಲಿ ಸಹಕಾರ ಚಳುವಳಿಯ ಪ್ರಗತಿಗೆ ಮುನ್ನುಡಿ. ಸಹಕಾರಿಗಳು ಕಳೆದ 7 ದಿನಗಳಲ್ಲಿ ರಾಷ್ಟ್ರದಾದ್ಯಂತ ಆಚರಿಸಿದ ಸಂಭ್ರಮದ ಸಪ್ತಾಹದ ಆಚರಣೆಯಲ್ಲಿ ಅನೇಕ ವಿಷಯಗಳ ಬಗ್ಗೆ ಚಿಂತನೆ ನಡೆದಿದೆ. ಅನೇಕ ಸಹಕಾರಿ ಪರಿಣಿತರು ಸಹಕಾರಿ ಚಿಂತಕರು ಈ ಬಗ್ಗೆ ವಿಷಯ ಮಂಡನೆ ಮಾಡಿದ್ದಾರೆ. ಲೇಖನಗಳನ್ನು ನೀಡಿದ್ದಾರೆ. ಅನೇಕ ವಿಶೇಷ ಸಂಚಿಕೆಗಳನ್ನು ಈ ಸಂದರ್ಭದಲ್ಲಿ ಹೊರತರಲಾಗಿದೆ. ಸಹಕಾರಿಗಳ ಭಾಗವಹಿಸುವಿಕೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ, ಉತ್ಸಾಹ ಇಮ್ಮಡಿಯಾಗಿದೆ. ಇವುಗಳ ಸದುಪಯೋಗ, ಅವರುಗಳ ಚಿಂತನೆ, ಅವರುಗಳು ನೀಡಿರುವ ಮಾರ್ಗದರ್ಶನ ಹಾಗೂ ಸಲಹೆ ಸೂಚನೆಗಳನ್ನು ಸಹಕಾರಿಗಳು ಸಹಕಾರಿ ಕಾರ್ಯಕರ್ತರುಗಳು ಗಮನಿಸಿ ಕಾರ್ಯೋನ್ಮುಖರಾದಲ್ಲಿ ಸಹಕಾರಿ ಕ್ಷೇತ್ರ ಪ್ರಗತಿ ಸಾಧ್ಯ. ಸಹಕಾರಿಗಳು ಸಪ್ತಾಹದ ಸಂದರ್ಭದಲ್ಲಿ ನಡೆದ ಸಮಗ್ರ ಚಟುವಟಿಕೆಗಳನ್ನು ಮುನ್ನುಡಿಯಂತೆ ಹಾಗೂ ಪ್ರಗತಿಗೆ ಕಾರ್ಯಸೂಚಿಯೆಂದು ಅರ್ಥೈಸಿ ಕಾರ್ಯಪ್ರವೃತ್ತರಾಗುವುದು ಸಂಯುಕ್ತ ಸಹಕಾರಿಯ ಆಪೇಕ್ಷೆ.

## ಜ್ಞಾನ ಜ್ಯೋತಿ



ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

### "ಅಧಿಕಾರ ತಾತ್ಕಲಿಕ ಪ್ರೇಮ ಶಾಶ್ವತ"

ಕಾಲಚಕ್ರದ ಉರುಳುವಿಕೆಯಿಂದ ಸಂವತ್ಸರಗಳ ಆಗಮನ ಮತ್ತು ನಿರ್ಗಮನವೆಂಬ ನಿರಂತರ ಪ್ರಕ್ರಿಯೆ. ಇಂದಿನ ಕಾಲಘಟ್ಟದಲ್ಲಿ ಪಕ್ಷಾಂತರ ವೆಂಬುದೊಂದು ದೊಡ್ಡ ಸುದ್ದಿ ಮಾಡುತ್ತಿದ್ದು, ಈ ಪಿಡುಗು ನೆನ್ನೆ ಮೊನ್ನೆಯದಲ್ಲ ಇದಕ್ಕೆ ಹಲವು ದಶಕಗಳ ಇತಿಹಾಸವು ಇದೆಯೆಂದರೆ ಒಪ್ಪತಕ್ಕ ವಿಷಯ. ಸರ್ಕಾರಗಳನ್ನು ರಚಿಸಲು ಅವಶ್ಯಕವಿರುವಷ್ಟು ಸಂಖ್ಯಾಬಲವಿಲ್ಲದಿದ್ದಾಗ ಇತರ ಪಕ್ಷಗಳ ಕೆಲವು ಶಾಸಕರುಗಳಿಂದ ಪಕ್ಷಾಂತರ ಮಾಡಿಸಿಯೋ ರಾಜೀನಾಮೆ ನೀಡಿಸಿಯೋ ಸರ್ಕಾರ ರಚನೆ ವಿಷಯ ನಮ್ಮೆಲ್ಲರ ಕಣ್ಮುಂದೆ ಚಿತ್ರಿತವಾಗಿದೆ ಇದೆಲ್ಲದರ ಮೂಲ ಅಧಿಕಾರದ ಗದ್ದುಗೆಯ ಹಂಬಲ ಸೆಳೆತವೆಂಬುದು ಸರ್ವ ವಿಧಿತ.

ಅಂದಿನ ರಾಮಾಯಣ ಜನಿತ ಉತ್ಕೃಷ್ಟ ಉದಾಹರಣೆಯಾಗಿ ತನಗೆ ಅನಾಯಸವಾಗಿ ಒಲಿದು ಬಂದ ರಾಜ್ಯಾಭಿಷೇಕ ಪಟ್ಟವನ್ನು ತ್ಯಜಿಸಲು ಸಿದ್ದನಾಗಿದ್ದ ಭರತನ ಹಾಗು ಪಿತೃವಾಕ್ಯ ಪಾಲನೆಯನ್ನೇ ತತ್ವ ಸಿದ್ದಾಂತವನ್ನಾಗಿಟ್ಟುಕೊಂಡು ರಾಜ್ಯಭಾರವನ್ನು ಕೈಕೇಯಿಯ ನಿರ್ದೇಶನದಂತೆ ಭರತನಿಗೆ ವಹಿಸಬೇಕೆಂಬ ದೃಢನಿರ್ಧಾರದ ರಾಮನಲ್ಲಿ? ಆದರೆ ಇಂದಿನ ದಶಮಾನದಲ್ಲಿನ ಅಧಿಕಾರಕ್ಕಾಗಿ ಕಿತ್ತಾಟ ರಂಪಾಟ ನಡೆಯುತ್ತಿರುವ ದುರ್ದಿನಗಳೆಲ್ಲಿ ? ಎಂಬ ಮಹಾವೈಪರೀತ್ಯದ ಭರಸಿಡಿಲು ನಮ್ಮ ಮುಂದೆ ನಿಲ್ಲುತ್ತದೆ. ಈ ಅಂಶವನ್ನು ಅಭಿವ್ಯಕ್ತಪಡಿಸುವ ಈ ಕೆಳಗಿನ ಆಧ್ಯಾತ್ಮ ಕವಿ ಡಿ.ವಿ.ಜಿ ಯವರ ಪದ್ಯವನ್ನು ಪಠಿಸಿರಿ.

ರಾಮನುಂ ಭರತನುಂ ತಬ್ಬಿಕೊಂಡತ್ತಂದು
ಪ್ರೇಮಾಶ್ರುವುಕ್ಕಿ ನದಿಯಾಗಿ ಪರಿದಂದು
ಸೀಮೆಯಂ ಮುಟ್ಟಿತಲ ಭಾಂಧ್ಯವ್ಯ ಸೌಂಧರ್ಯ
ಕ್ಷೇಮವದು ಜೀವಕ್ಕೆ ;; ಮಂಕುತಿಮ್ಮ ::

ವಾಸ್ತವದಲ್ಲಿ ಒಂದೇ ತಾಯಿಯ ಮಕ್ಕಳಾದವರಲ್ಲಿ ಅಭಿಪ್ರಾಯ ಭೇದಗಳಲ್ಲಿರುವುದಿಲ್ಲ. ಎಲ್ಲವನ್ನೂ ಸಹಿಸಿಕೊಂಡು ನಿಭಾಯಿಸುತ್ತಾರೆ ಆದರೆ ಮಲತಾಯಿಯ ಮಕ್ಕಳುಗಳು ಸಣ್ಣ ಸಣ್ಣದರಲ್ಲಿಯೂ ಕ್ಲೇಷ ದೋಷಗಳನ್ನು ಕಾಣುವುದು ಸ್ವಾಭಾವಿಕ. ಆದರೆ ರಾಮ ಭರತರ ಆದರ್ಶ ನಡೆನುಡಿಗಳು ಉದಾರಣಾರ್ಥ ಘಟನೆಗಳಾಗಿ ನಿಲ್ಲುತ್ತವೆ.

ಈ ಪದ್ಯದಿಂದ ನಾವು ಕಲಿಯ ಬೇಕಾದ ಪಾಠವೆಂದರೆ ನಮ್ಮ ಅಣ್ಣತಮ್ಮಂದಿರು ಮಾತ್ರವಲ್ಲ ಸಮಾಜದ ಎಲ್ಲಾ ಸಹೋದರ ಸಹೋದರಿಯರನ್ನು ಸರ್ವೋತ್ಕೃಷ್ಟ ಭಗವಂತನ ಪುತ್ರರೆಂದು ತನ್ಮೂಲಕ ನಮ್ಮಗಳ ಸಹೋದರ ಸಹೋದರಿಯರೆಂದು ಭಾವಿಸಿ ಉತ್ಕೃಷ್ಟ ಸಮಾಜದ ಬೆಳವಣಿಗೆಗೆ ದಾರಿ ಮಾಡೋಣವೆಂಬುದೇ ಆಗಿದೆ. ಸಹಕಾರ ಕ್ಷೇತ್ರ ಅಂತಹ ಒಂದು ವಿಸ್ತೃತ ಭಾವವನ್ನು ಹೊಂದಿರುವ ಕ್ಷೇತ್ರವಾಗಿದ್ದು ಇದರಲ್ಲಿರುವ ನಾವೆಲ್ಲರೂ ಸಮೃದ್ಧ ಸಹಕಾರದ ಬೆಳವಣಿಗೆಗೆ ಕಾರಣೀಭೂತವಾಗುತ್ತಾ ರಾಮರಾಜ್ಯವನ್ನು ತರೋಣವೆಂಬುದೇ ಈ ಪ್ರೇರಣಾ ಪದ್ಯದ ಸಾರಾಂಶವಾಗಿದೆ.

## ಜನವರಿ 01 ರಂದು ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲು ಸೌಹಾರ್ದ ಸಹಕಾರಿಗಳಿಗೆ ಕರೆ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜನವರಿ 01, 2001ರಂದು ಜಾರಿಗೆ ಬಂದ ಹಿನ್ನೆಲೆಯಲ್ಲಿ ಪ್ರತಿ ವರ್ಷ ಜನವರಿ 01ರಂದು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ದಿನಾಚರಣೆಯನ್ನಾಗಿ ಆಚರಿಸುತ್ತಾ ಬರಲಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ದಿನದ ಜ್ಞಾಪಕಾರ್ಥ ಮತ್ತು ಸೌಹಾರ್ದ ಸಹಕಾರಿಗಳ ಅಸ್ತಿತ್ವಕ್ಕೆ ಕಾರಣವಾದ ದಿನವೆಂದು ಆಚರಿಸಲಾಗುತ್ತಿದೆ. ಸೌಹಾರ್ದ ಸಹಕಾರಿ ದಿನವನ್ನು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ಸೌಹಾರ್ದ ಸಹಕಾರಿಗಳಲ್ಲಿ ಸಹಕಾರಿ ಸಪ್ತ ವರ್ಣದ ಧ್ವಜಾರೋಹಣ ಮಾಡುವುದರ ಮೂಲಕ ಉತ್ತಮ ರೀತಿಯಲ್ಲಿ ಆಚರಿಸಲು ಕೋರಿದೆ. ಈ ದಿನದಂದು ಸೌಹಾರ್ದ ಸಹಕಾರಿಗಳ ಅಸ್ತಿತ್ವವನ್ನು ಭದ್ರಗೊಳಿಸುವ ನಿಟ್ಟಿನಲ್ಲಿ ಅವಶ್ಯಕವಾದ ಪ್ರಚಾರ ಕಾರ್ಯಗಳನ್ನು ಹಮ್ಮಿಕೊಳ್ಳುವುದು ಅವಶ್ಯಕವೆನಿಸುತ್ತದೆ.

ಸದರಿ ದಿನದಂದು ಸಭೆ, ಸಮಾರಂಭಗಳನ್ನು ಏರ್ಪಡಿಸಿ, ಹಿರಿಯ ಸಹಕಾರಿ ಗಣ್ಯರನ್ನು ಗೌರವಿಸುವುದು, ಸಹಕಾರಿಯ ವ್ಯಾಪ್ತಿಯ ಶಾಲಾ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳುವುದು, ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪರಿಣಿತರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಹಾಗೂ ಚರ್ಚಾಗೋಷ್ಠಿಗಳನ್ನು ಏರ್ಪಡಿಸುವುದು, ವಿವಿಧ ಕ್ರೀಡೆಗಳನ್ನು ಏರ್ಪಡಿಸುವುದು, ಸಹಕಾರ ಕುರಿತಾದ ಜಾಗೃತಿಯನ್ನು ಮೂಡಿಸುವ ಜಾಥಾ ನಡೆಸುವುದು, ಪರಿಸರ ಜಾಗೃತಿ ಮೂಡಿಸುವುದು, ರಕ್ತದಾನ ಶಿಬಿರಗಳನ್ನು ಏರ್ಪಡಿಸುವುದು, ವ್ಯಾಪ್ತಿಯ ಆಸ್ಪತ್ರೆಗಳಲ್ಲಿನ ರೋಗಿಗಳ ಆರೋಗ್ಯ ಸುಧಾರಣೆಗೆ ಹಣ್ಣು ಹಂಪಲುಗಳನ್ನು ವಿತರಿಸುವುದು, ಠೇವಣಿ ಸಂಗ್ರಹ ಯೋಜನೆ, ಸಾಲ ವಸೂಲಾತಿ ಕ್ರಮಗಳು, ಸೌಹಾರ್ದ ಸಹಕಾರಿ ಚಳುವಳಿಯ ಬಗ್ಗೆ ಜಾಗೃತಿ ಮೂಡಿಸುವಂತಹ ಸಭೆ ಸಮಾರಂಭಗಳನ್ನು ಏರ್ಪಡಿಸುವುದು ಸೇರಿದಂತೆ ಇತ್ಯಾದಿ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಹಾಗೂ ವಿಶ್ವಾಸಾರ್ಹತೆಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮವಿಡಲು ತಿಳಿಸಿದೆ. ಸೌಹಾರ್ದ ಸಹಕಾರಿ ದಿನಾಚರಣೆಯ ವರದಿ ಹಾಗೂ ಛಾಯಾಚಿತ್ರಗಳನ್ನು ಸಂಯುಕ್ತ ಸಹಕಾರಿಗೆ ಪತ್ರದ / souharda@souharda.coop ಗೆ ಇ-ಮೇಲ್ ಮೂಲಕ ಕಳುಹಿಸಲು ಕೋರಿದೆ.

# 66ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭ

## ವೈಭವೋಪೇತ ಮೆರವಣಿಗೆ, ಸಹಕಾರ ಧ್ವಜಾರೋಹಣ, ಅರ್ಥಪೂರ್ಣ ಉಪನ್ಯಾಸ, ಹಿರಿಯ ಸಹಕಾರಿಗಳ ಮಾರ್ಗದರ್ಶನ, ವಸ್ತುಪ್ರದರ್ಶನ ಸಹಕಾರಿಗಳಿಗೆ ಸನ್ಮಾನ

**ಮೈಸೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಮೀನುಗಾರರ ಮಹಾಮಂಡಳ, ಕರ್ನಾಟಕ ರಾಜ್ಯ ಲ್ಯಾಂಪ್ಸ್ ಸಹಕಾರ ಸಂಘಗಳ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಯೂನಿಯನ್, ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಮೈಸೂರು ಹಾಗು ಚಾಮರಾಜನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಮೈಸೂರು ಜಿಲ್ಲೆಯ ಎಲ್ಲ ಸಹಕಾರ ಬ್ಯಾಂಕುಗಳು ಹಾಗೂ ಎಲ್ಲ ವಿಧವಾದ ಸಹಕಾರ ಸಂಘಗಳ ಸಹಯೋಗದೊಂದಿಗೆ ಮೈಸೂರಿನ ಮುಕ್ತ ವಿಶ್ವ ವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಹಾಗೂ ವಿಜೃಂಭಣೆಯಿಂದ ಜರುಗಿತು.

### ಸಹಕಾರಿ ಜಾತಾ

ಸಮಾರೋಪ ಸಮಾರಂಭವನ್ನು ಬೆಳಿಗ್ಗೆ 10:00 ಘಂಟೆಗೆ ಮೈಸೂರು ನಗರದ ಜಲದರ್ಶಿನಿಯಿಂದ ಸಭಾಭವನದ ವರೆಗೆ ಅತ್ಯಂತ ವೈಭವದಿಂದ ಸಾವಿರಾರು ಸಹಕಾರಿಗಳು ವಿವಿಧ ಜಾನಪದ ತಂಡಗಳ ವಿವಿಧ ಸಹಕಾರ ಸಂಘಗಳ ಬ್ಯಾನರ್‌ಗಳೊಂದಿಗೆ ಸಹಕಾರದ ವಿರಾಟ ಸ್ವರೂಪವನ್ನು ಪ್ರದರ್ಶಿಸುತ್ತ ಜಾತಾದಲ್ಲಿ ಸಭಾಭವನದ ವರೆಗೆ ಆಗಮಿಸಿದರು. ಜಾತಾವನ್ನು ಮಾಜಿ ಸಹಕಾರ ಸಚಿವರು ಹಿರಿಯ ಸಹಕಾರಿ ಹಾಗೂ ಶಾಸಕ ಶ್ರೀ ಜಿ.ಟಿ. ದೇವೇಗೌಡರವರು ಸಹಕಾರಿ ಧ್ವಜವನ್ನು ಎತ್ತಿಹಿಡಿಯುವದರೊಂದಿಗೆ ಉದ್ಘಾಟಿಸಿದರು. ಜಾತಾದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ಹೆಚ್.ವಿ.ರಾಜೀವ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ಅಧ್ಯಕ್ಷ ಶ್ರೀ ಜಿ.ಡಿ. ಹರೀಶಗೌಡ, ಜಿಲ್ಲಾ ಹಾಲು ಉತ್ಪಾದಕ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷ ಶ್ರೀ ಸಿದ್ದೇಗೌಡ, ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಶ್ರೀ ಗಂಗಣ್ಣ ಹಾಗೂ ಅನೇಕ ಹಿರಿಯ ಸಹಕಾರಿಗಳು, ಸಹಕಾರಿ ಅಧಿಕಾರಿಗಳು ಸಹಕಾರ ಸಂಸ್ಥೆಗಳ ಸಿಬ್ಬಂದಿಯವರು ಭಾಗವಹಿಸಿದ್ದರು.



ಸಹಕಾರಿ ಜಾತಾ



ಸಂಯುಕ್ತ ಸಹಕಾರಿಯ ಸ್ತಬ್ಧಚಿತ್ರ



ಮೈಸೂರು ಹಾಲು ಒಕ್ಕೂಟದ ಸ್ತಬ್ಧಚಿತ್ರ

### ಸಹಕಾರಿ ಉಪನ್ಯಾಸ ಕಾರ್ಯಕ್ರಮ

ಸಪ್ತಾಹದ ಅಂಗವಾಗಿ ಬೆಳಿಗ್ಗೆ 10:00 ಘಂಟೆಗೆ ಸದರಿ ದಿನದ ವಿಷಯ "ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ, ತಂತ್ರಜ್ಞಾನ ಬಳಕೆ, ಮತ್ತು ಗಣಕೀಕರಣ" ವಿಷಯವಾಗಿ ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು ಹಾಗೂ ಸಂಯುಕ್ತ ಸಹಕಾರಿಯ ಮಾರ್ಗದರ್ಶಕರು ಆದ ಶ್ರೀ ಯಶವಂತ ಡೋಂಗ್ರೆಯವರಿಂದ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.





## ಧ್ವಜಾರೋಹಣ

ಸಹಕಾರಿ ಜಾತಾ ಘಟಿಕೋತ್ಸವ ಭವನ ಪ್ರವೇಶಿಸಿದ ನಂತರ ಸಹಕಾರ ಸಚಿವ ಶ್ರೀ ಬಸವರಾಜು ಬೊಮ್ಮಾಯಿ ಯವರು ಸಹಕಾರ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ಶ್ರೀ ಜಿ.ಟಿ. ದೇವೆಗೌಡ, ಶ್ರೀ ರಾಮದಾಸ್, ಶ್ರೀ ನಾಗೇಂದ್ರ, ಶ್ರೀ ಹರ್ಷವರ್ಧನ ಹಾಗು ಸಹಕಾರ ಮುಖಂಡರುಗಳಾದ ಶ್ರೀಮತಿ ಲಲಿತಾ ಜಿ.ಟಿ. ದೇವೆಗೌಡ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀ ಗಂಗಣ್ಣ, ಶ್ರೀ ಹೆಚ್.ವಿ. ರಾಜೀವ, ಶ್ರೀ ಸಿದ್ದೇಗೌಡ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಗಂಗಾಧರಯ್ಯ, ಶ್ರೀ ಬಿ.ಎಸ್.ಗುಂಡೂರಾವ, ಶ್ರೀ ಸಂಜೀವ ಮಹಾಜನ ಶ್ರೀ ವೈ.ಟಿ. ಪಾಟೀಲ್ ರಾಜ್ಯದ ಹಾಗೂ ಜಿಲ್ಲೆಯ ಅನೇಕ ಸಹಕಾರಿ ಸಂಸ್ಥೆಗಳ ಸಹಕಾರಿಗಳು ಭಾಗವಹಿಸಿದ್ದರು.

## ವಸ್ತು ಪ್ರದರ್ಶನದ ಉದ್ಘಾಟನೆ

ಇದೇ ಸಂದರ್ಭದಲ್ಲಿ ರಾಜ್ಯದ ವಿವಿಧ ಸಹಕಾರಿ ಸಂಸ್ಥೆಗಳು ತಮ್ಮ ತಮ್ಮ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಬಿಂಬಿಸುವ ವಸ್ತು ಪ್ರದರ್ಶನವನ್ನು ಮಾನ್ಯ ಸಹಕಾರ ಸಚಿವರಾದ ಶ್ರೀ ಬಸವರಾಜು ಬೊಮ್ಮಾಯಿಯವರು ಉದ್ಘಾಟಿಸಿದರು.

## ಸ್ವಾಗತ ಹಾಗೂ ಪ್ರಾಸ್ತಾವಿಕ



ಸಭಾ ಕಾರ್ಯಕ್ರಮವನ್ನು ಶ್ರೀ ಸೋಮಶೇಖರ ಹುಣಸೂರು ಇವರ ಹಾಡಿದ ರೈತಗೀತೆ ಹಾಗೂ ನಾಡಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಬಿ..ಹೆಚ್. ಕೃಷ್ಣಾರೆಡ್ಡಿಯವರು ಅತಿಥಿ ಗಣ್ಯರಿಗೆ ಹಾಗೂ ಎಲ್ಲ ಸಹಕಾರಿಗಳಿಗೆ ಸ್ವಾಗತ ಮಾಡಿ ಪ್ರಾಸ್ತಾವಿಕ ಮಾತುಗಳನ್ನು ಹೇಳಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ಸರಕಾರದ ಗೃಹ ಹಾಗು ಸಹಕಾರ ಸಚಿವ ಶ್ರೀ ಬಸವರಾಜು ಬೊಮ್ಮಾಯಿಯವರು ದೀಪಬೆಳಗಿಸುವುದರೊಂದಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ವೇದಿಕೆಯಲ್ಲಿದ್ದ ಎಲ್ಲ ಸಹಕಾರಿ ಗಣ್ಯರು ಅವರಿಗೆ ಸಹಕರಿಸಿದರು.



ಮಾನ್ಯ ಗೃಹ ಹಾಗೂ ಸಹಕಾರ ಸಚಿವರ ಆಗಮನ



ಮಾನ್ಯ ಗೃಹ ಹಾಗೂ ಸಹಕಾರ ಸಚಿವರಿಗೆ ಸನ್ಮಾನ



ಮಾನ್ಯ ಶಾಸಕರಾದ ಜಿ.ಟಿ. ದೇವೇಗೌಡರಿಗೆ ಸನ್ಮಾನ



ಕಾರ್ಯಕ್ರಮಕ್ಕೆ ಭಾಗವಹಿಸಿದ ಸಹಕಾರಿಗಳು



ಮಾನ್ಯ ಶಾಸಕರಾದ ಎಲ್ ನಾಗೇಂದ್ರ ಇವರಿಗೆ ಸನ್ಮಾನ

## ಉದ್ಘಾಟನೆ



## ಸಹಕಾರ ರಂಗಕ್ಕೆ ದುಡಿಯುವ ವರ್ಗದವರನ್ನು ಹಾಗೂ ಮಹಿಳೆಯರನ್ನು ಕರೆ ತನ್ನಿ - ಶ್ರೀ ಬಸವರಾಜು ಬೊಮ್ಮಾಯಿ

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಬಸವರಾಜು ಬೊಮ್ಮಾಯಿಯವರು ಸಹಕಾರ ಕ್ಷೇತ್ರವನ್ನು ಬಲಪಡಿಸಲು ಪ್ರತಿ ವರ್ಷ ಸಹಕಾರ ವರ್ಷವನ್ನು ಆಚರಿಸುವುದರ ಮೂಲಕ ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಮೆಲಕು ಹಾಕುವುದರೊಂದಿಗೆ ಮುಂಬರುವ ವರ್ಷದ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸುವುದಾಗಬೇಕು. ಇದರ ಜೊತೆಗೆ ಈ ಕ್ಷೇತ್ರದಲ್ಲಿ ಶ್ರಮಿಕ ವರ್ಗವನ್ನು ಹಾಗೂ ಮಹಿಳೆಯರನ್ನು ಹೆಚ್ಚಿಗೆ ಬರಮಾಡಿಕೊಳ್ಳುವುದರಿಂದ ಹೆಚ್ಚಿನ ಬಲಬರುತ್ತದೆ. ಸಹಕಾರಿ ರಂದ ಹೆಚ್ಚಿನ ಜನರನ್ನು ತಲುಪಿದಂತಾಗುತ್ತದೆ ದೇಶದಲ್ಲಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳು ಬಂದು ಅಂತಃಕರಣವನ್ನು ಮಾಯಮಾಡಿಬಿಟ್ಟಿವೆ. ಸಹಕಾರಿ ರಂಗ ಅಂತಃಕರಣವನ್ನು ಬೆಳೆಸುವಲ್ಲಿ ಕ್ರಿಯಾಶೀಲವಾಗಬೇಕು ಮತ್ತು ಸಹಕಾರಿ ಒಕ್ಕೂಟಗಳು ಬಲವಾಗಿ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

## ಸಹಕಾರಿ ರಂಗದಲ್ಲಿ ಪ್ರಾಮಾಣಿಕತೆ ಅಗತ್ಯ - ಶ್ರೀ ಜಿ. ಟಿ. ದೇವೇಗೌಡ



ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಹಕಾರಿ ಧುರೀಣ ಮಾಜಿ ಸಚಿವ ಹಾಗು ಶಾಸಕ ಶ್ರೀ ಜಿ.ಟಿ ದೇವೇಗೌಡರವರು ಸಹಕಾರಿ ಕ್ಷೇತ್ರದಲ್ಲಿ ನಿಷ್ಠಾವಂತ ಪ್ರಾಮಾಣಿಕರು ಇರುವುದರಿಂದ ಸಹಕಾರಿ ಕ್ಷೇತ್ರ ಉಳಿದಿದೆ. ಸಹಕಾರ ಕ್ಷೇತ್ರ ಸಾಕಷ್ಟು ಸಾಧನೆ ಮಾಡಿದೆ. ಸಾಧಿಸಬೇಕಾದುದು ಇನ್ನೂ ಇದೆ. ಯುವಕರು, ಮಹಿಳೆಯರು, ಹಿಂದುಳಿದ ವರ್ಗದವರು ಈ ಕ್ಷೇತ್ರದಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು ಈ ಕ್ಷೇತ್ರದ ಸದುಪಯೋಗಮಾಡಿಕೊಳ್ಳಲು ಕರೆ ನೀಡಿದರು.

## ವಿಶೇಷ ಪ್ರಕಟಣೆಗಳ ಬಿಡುಗಡೆ




ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವಿಶೇಷ ಪ್ರಕಟಣೆ "ಸಹಕಾರ ಸಪ್ತಾಹದ ಧ್ಯೇಯಗಳ ಆಶಯ ಸಹಕಾರ ಕ್ಷೇತ್ರದ ಪ್ರಗತಿ" ಸಹಕಾರ ಮಹಾಮಂಡಳದ ಸಹಕಾರ ವಾರಪತ್ರಿಕೆಗಳನ್ನು ಮಾನ್ಯ ಸಹಕಾರ ಸಚಿವ ಶ್ರೀ ಬಸವರಾಜ ಬೊಮ್ಮಾಯಿ, ಶಾಸಕ ಶ್ರೀ ಜಿ.ಟಿ. ದೇವೇಗೌಡ, ಹಾಗೂ ವೇದಿಕೆಯಲ್ಲಿದ್ದ ಗಣ್ಯಮಾನ್ಯರೆಲ್ಲ ಬಿಡುಗಡೆಮಾಡಿದರು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಾಸಕ ಶ್ರೀ ರಾಮದಾಸ್, ಶ್ರೀ ನಾಗೇಂದ್ರ ಸಹಕಾರಿ ಮಹಾಮಂಡಳದ ಅಧ್ಯಕ್ಷ ಶ್ರೀ ಗಂಗಣ್ಣ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಜಿ.ಡಿ.ಹರೀಶಗೌಡ ಇವರುಗಳು ಮಾತನಾಡಿದರು.

## ಶ್ರೇಷ್ಠ ಸಹಕಾರಿಗಳಿಗೆ ಹಾಗೂ ಉತ್ತಮ ಸಹಕಾರಿ ಸಂಸ್ಥೆಗಳಿಗೆ ಸನ್ಮಾನ





ಸಪ್ತಾಹದ ಸಮಾರೋಪ ಕಾರ್ಯಕ್ರಮದ ಅಂಗವಾಗಿ ರಾಜ್ಯದ 6 ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಹಾಗೂ 5 ಶ್ರೇಷ್ಠ ಸಹಕಾರಿಗಳನ್ನು ಮೈಸೂರು ಜಿಲ್ಲೆಯ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಿಗೆ ತಾಲ್ಲೂಕಿಗೆ ಒಂದರಂತೆ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ತಾಲ್ಲೂಕಿಗೆ ಒಬ್ಬರಂತೆ ಉಳಿದ ಎಲ್ಲ ಕ್ಷೇತ್ರಗಳಲ್ಲಿ ಜಿಲ್ಲೆಗೆ ಒಂದರಂತೆ ಒಟ್ಟು 39 ಸಹಕಾರಿ ಸಂಸ್ಥೆಗಳಿಗೆ ಸನ್ಮಾನ ಮಾಡಲಾಯಿತು.

### ಉತ್ತಮ ಸೌಹಾರ್ದ ಸಹಕಾರಿಗಳು

1. ಸಪ್ತರ್ಷಿ ಪತ್ತಿನ ಸೌಹಾರ್ದ ಸಹಕಾರಿ ನಿ., ಮೈಸೂರು.
2. ಶ್ರೀ ಕನ್ಯಕಾ ಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ.
3. ಶ್ರೀ ಶ್ರೀಧರಸ್ವಾಮಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಳಗಾವಿ.
4. ಶ್ರೀ ಶರಣಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬಾಗಲಕೋಟ.
5. ಶ್ರೀ ನಂದೀಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕಲಬುರಗಿ.
6. ಶ್ರೀ ಸೀತಾರಾಮ ಮಂದಿರಂ ಸೌಹಾರ್ದ ಸಹಕಾರಿ ನಿ., ಬೆಂಗಳೂರು.

### ಶ್ರೇಷ್ಠ ಸೌಹಾರ್ದ ಸಹಕಾರಿಗಳು

1. ಶ್ರೀ ರಾಜು ಎಸ್. ಪೂಜಾರಿ, ಅಧ್ಯಕ್ಷರು, ಶ್ರೀ ರಾಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿ., ಉಡುಪಿ.
2. ಶ್ರೀ ಎಸ್.ಎನ್. ಶಂಕರಮೂರ್ತಿ, ಅಧ್ಯಕ್ಷರು, ಶ್ರೀ ವರುಣ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು.
3. ಶ್ರೀ ರಾಘವೇಂದ್ರ ಪಾಟೀಲ, ಅಧ್ಯಕ್ಷರು, ಶ್ರೀ ಸಿದ್ಧೇಶ್ವರ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬೆಳಗಾವಿ.
4. ಶ್ರೀ ಅಂಬಾಸಾ ಆರ್. ಕಬಾಡಿ, ಅಧ್ಯಕ್ಷರು, ಶ್ರೀ ಜಗದಂಬಾ ಸೌಹಾರ್ದ ಪತ್ತಿನ ಸಹಕಾರಿ ನಿ. ಗದಗ.
5. ಶ್ರೀ ವೀರಭದ್ರಪ್ಪ ಕುರುಕುಂದಿ, ಅಧ್ಯಕ್ಷರು, ಮುಕ್ತ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಯಚೂರು.

### ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು

1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಜಯಪುರ, ಮೈಸೂರು ತಾಲ್ಲೂಕು, ಮೈಸೂರು.
2. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಅಂತರಸಂತೆ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು.
3. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹುಸೇನ್‌ಪುರ, ಹುಣಸೂರು ತಾಲ್ಲೂಕು, ಮೈಸೂರು.
4. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕಂಪಲಾಪುರ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು.
5. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹದಿನಾರು, ನಂಜನಗೂಡು ತಾಲ್ಲೂಕು, ಮೈಸೂರು.
6. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹೆಮ್ಮಿಗೆ, ಟಿ.ನರಸೀಪುರ ತಾಲ್ಲೂಕು, ಮೈಸೂರು.
7. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಗಳಿಗೆಕೆರೆ, ಕೆ.ಆರ್.ನಗರ ತಾಲ್ಲೂಕು, ಮೈಸೂರು.
8. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ನಾಗವಳ್ಳಿ ಚಾಮರಾಜನಗರ
9. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಯಳಂದೂರು, ಚಾಮರಾಜನಗರ.
10. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹನೂರು, ಕೊಳ್ಳೇಗಾಲ ತಾ, ಚಾಮರಾಜನಗರ.
11. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹಂಗಳ, ಗುಂಡ್ಲುಪೇಟೆ ತಾ, ಚಾಮರಾಜನಗರ.

### ಹಾಲು ಉತ್ಪಾದಕರ ಸಹಕಾರ ಸಂಘಗಳು

1. ಬಂಡಿಪಾಳ್ಯ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಮೈಸೂರು ತಾಲ್ಲೂಕು, ಮೈಸೂರು
2. ಮಡುವಿನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ., ನಂಜನಗೂಡು ತಾಲ್ಲೂಕು, ಮೈಸೂರು.
3. ಬೆನಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಟಿ.ನರಸೀಪುರ ತಾಲ್ಲೂಕು, ಮೈಸೂರು.
4. ಟಿ.ಕೆ.ಎಸ್.ಕೋಡಿ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಹುಣಸೂರು ತಾಲ್ಲೂಕು, ಮೈಸೂರು.
5. ಕಾಟ್ನಾಳು ಹಾಲು ಉತ್ಪಾದಕರ ಸಹಕಾರ ಸಂಘ ನಿ., ಕೆ.ಆರ್.ನಗರ ತಾಲ್ಲೂಕು, ಮೈಸೂರು.
6. ಇಂದಿರಾನಗರ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು.
7. ಮಂಚದೇವನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು.

### ಗೃಹ ನಿರ್ಮಾಣ ಸಹಕಾರ ಸಂಘ

1. ದೀಪಾ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು.

### ಮೀನುಗಾರಿಕಾ ಸಹಕಾರ ಸಂಘ

1. ಕಲ್ಪತರು ಮಹಿಳಾ ಮೀನುಗಾರರ ಸಹಕಾರ ಸಂಘ ನಿ., ಮಂಡ್ಯ.

### ಪಟ್ಟಣ ಸಹಕಾರ ಬ್ಯಾಂಕ್

1. ರೈಲ್ವೆ ಕೋ– ಆಪರೇಟಿವ್ ಬ್ಯಾಂಕ್ ನಿ., ಮೈಸೂರು.

### ವ್ಯವಸಾಯ ಉತ್ಪನ್ನ ಮಾರಟ ಸಹಕಾರ ಸಂಘ

1. ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಪಿರಿಯಾಪಟ್ಟಣ. ಮೈಸೂರು.

**ಗ್ರಾಮೀಣ ಅಭಿವೃದ್ಧಿ ಬ್ಯಾಂಕ್**

1. ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಹಕಾರ ಬ್ಯಾಂಕ್ ನಿ., ಕೆ.ಆರ್.ನಗರ. ಮೈಸೂರು.

**ಮಹಿಳಾ ಸಹಕಾರ ಸಂಘ**

1. ಲಕ್ಷ್ಮೀ ಮಹಿಳಾ ವಿವಿದ್ಧೋದೇಶ ಸಹಕಾರ ಸಂಘ ನಿ., ಹುಣಸೂರು.

**ವಿವಿದೊದ್ದೇಶ ಸಹಕಾರಿ ಸಂಘ**

1. ಲಕ್ಷ್ಮೀ ಮಹಿಳಾ ವಿವಿದ್ಧೋದೇಶ ಸಹಕಾರ ಸಂಘ ನಿ., ಮೈಸೂರು.

**ಗ್ರಾಹಕರ ಸಹಕಾರ ಸಂಘ**

1. ಬೆಮಲ್ ನೌಕರರ ಗ್ರಾಹಕರ ಸಹಕಾರ ಸಂಘ ನಿ., ಮೈಸೂರು.

**ನೌಕರರ ಪತ್ತಿನ ಸಹಕಾರ ಸಂಘ**

1. ನಂಜನಗೂಡು ಶಿಕ್ಷಕರ ಪತ್ತಿನ ಸಹಕಾರ ಸಂಘ ನಿ., ಮೈಸೂರು.

**ಇತರೆ ಸಹಕಾರ ಸಂಘ**

1. ಮೈಸೂರು ನಗರ ವಕೀಲರ ವಿವಿದ್ಧೋದೇಶ ಸಹಕಾರ ಸಂಘ ನಿ., ಮೈಸೂರು.

**ಶ್ರೇಷ್ಠ ಸಹಕಾರಿಗಳು**

1. ಶ್ರೀ ಶಂಕರನಾರಾಯಣ ಶಾಸ್ತ್ರಿ, ಹಿರಿಯ ಸಹಕಾರಿಗಳು, ಮೈಸೂರು.
2. ಶ್ರೀಮತಿ ಉಮಾ, ಸಹಕಾರಿ ಸಂಘದ ಉತ್ತಮ ನೌಕರ ಪ್ರಶಸ್ತಿ



## ವಂದನಾರ್ಪಣೆ

ಸಭೆ ಪ್ರಾರಂಭದಲ್ಲಿ ಶ್ರೀಮತಿ ಸುನಿತಾ ರಾಮಚಂದ್ರರವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಕೊನೆಯಲ್ಲಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹಾಗೂ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಹೆಚ್.ವಿ. ರಾಜೀವ್ ರವರು ವಂದನಾರ್ಪಣೆಯನ್ನು ನೆರವೇರಿಸಿದರು.

## ಸಹಕಾರ ರತ್ನ ಪುರಸ್ಕೃತ ಶ್ರೀ ಹೆಚ್.ವಿ. ರಾಜೀವ ಹಾಗೂ ಡಾ. ರಂಗನಾಥಯ್ಯ ಮತ್ತು ಶ್ರೀ ಸಿ.ಎನ್. ಪರಶಿವಮೂರ್ತಿ ಇವರಿಗೆ ಅಭಿನಂದನೆ.

ಇದೇ ಸಂದರ್ಭದಲ್ಲಿ 2019ನೇ ಸಾಲಿನ ಕರ್ನಾಟಕ ಸರಕಾರದ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಹೆಚ್.ವಿ.ರಾಜೀವ್ ಮೈಸೂರಿನ ಡಾ. ರಂಗನಾಥಯ್ಯ ಅವರೊಂದಿಗೆ ಈ ಹಿಂದೆಯೇ ಈ ಪ್ರಶಸ್ತಿ ಲಭ್ಯರಾದ ಶ್ರೀ ಸಿ.ಎನ್.ಪರಶಿವಮೂರ್ತಿಯವರಿಗೂ ಸಹ ಮೈಸೂರು ಜಿಲ್ಲೆಯ ಸಹಕಾರಿಗಳ ಪರವಾಗಿ ಅಭಿನಂದಿಸಲಾಯಿತು.



## ಸಹಕಾರಿ ಸಪ್ತಾಹದ ಬಗ್ಗೆ ಪ್ರಕಟವಾದ ಪತ್ರಿಕಾ ವರದಿಗಳು

ಸಪ್ತಾಹದ ಕಾರ್ಯಕ್ರಮ ಅತ್ಯಂತ ವೈಭವೋಪೇತವಾಗಿತ್ತು. ಅರ್ಥಪೂರ್ಣವಾಗಿತ್ತು ಎಂಬುದರ ಬಗ್ಗೆ ವಿವಿಧ ಪತ್ರಿಕೆಗಳಲ್ಲಿ ಈ ಕೆಳಗಿನ ವರದಿಗಳು ಪ್ರಕಟವಾಗಿವೆ.

- ಸಹಕಾರ ರಂಗಕ್ಕೆ ಶ್ರಮಿಕ ವರ್ಗ ಕರೆ ತನ್ನಿ – ವಿಜಯ ಕರ್ನಾಟಕ
- ಸಹಕಾರಿ ಸಂಘಗಳ ಪುನಶ್ಚೇತನಕ್ಕೆ ಸರಕಾರ ಕ್ರಮ – ವಿಶ್ವವಾಣಿ
- ಸಹಕಾರಿ ರಂಗಕ್ಕೆ ದುಡಿಯುವ ವರ್ಗ ಬರಲಿ – ಹೊಸ ದಿಗಂತ
- ಸಹಕಾರಿ ಒಕ್ಕೂಟಗಳಿಗೆ ಪ್ರೋತ್ಸಾಹ ಅಗತ್ಯ – ಕನ್ನಡಪ್ರಭ
- ಕೃಷಿ ಸಹಕಾರಕ್ಕೆ ಬಜೆಟ್‌ನಲ್ಲಿ ಒತ್ತು – ಸಂಯುಕ್ತ ಕರ್ನಾಟಕ
- ಸರ್ಕಾರದ ಹಸ್ತಕ್ಷೇಪ ನಿಲ್ಲಲಿ – ವಿಜಯವಾಣಿ
- ಸಹಕಾರಿ ಕ್ಷೇತ್ರ, ಕೃಷಿ ವಲಯಕ್ಕೆ ಬಜೆಟ್‌ನಲ್ಲಿ ಪ್ರೋತ್ಸಾಹ, ರೈತರು ಶ್ರಮಿಕರಿಂದ ಆರ್ಥಿಕ ಬಲ – ಪ್ರಜಾವಾಣಿ
- ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆಯಿಂದ ಮುಕ್ತಿ ಕಲ್ಪಿಸಬೇಕಿದೆ – ಮೈಸೂರು ಮಿತ್ರ
- ಸಹಕಾರ ಕ್ಷೇತ್ರದಲ್ಲಿ ಕಾರ್ಮಿಕರು, ಮಹಿಳೆಯರು ಇರಲಿ – ಆಂದೋಲನ

**ಸಹಕಾರ ಸಪ್ತಾಹದ ಯಶಸ್ವಿ ಆಚರಣೆಗೆ ಸಹಕರಿಸಿದ ಎಲ್ಲಾ ಸಹಕಾರಿಗಳಿಗೆ, ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳು.**

# 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮದ ಪೂರ್ವಭಾವಿ ಸಿದ್ದತಾ ಸಭೆ



**ಮೈಸೂರು:** ದಿನಾಂಕ 20.11.2019 ರಂದು ನಡೆಯುವ ಸಹಕಾರ ಸಪ್ತಾಹ ಸಮಾರೋಪ ಸಮಾರಂಭದ ಆಚರಣೆ ಅಂಗವಾಗಿ ದಿನಾಂಕ 12.11.2019 ರಂದು ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ಇವರ ಅಧ್ಯಕ್ಷತೆಯಲ್ಲಿ ಪೂರ್ವ ಸಿದ್ದತಾ ಸಭೆಯನ್ನು ಕರೆಯಲಾಗಿತು. ಸದರಿ ಸಭೆಯಲ್ಲಿ ಉಪಸಮಿತಿಗಳನ್ನು ರಚಿಸಲಾಯಿತು. ಸದರಿ ಸಭೆಯಲ್ಲಿ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು, ಜಂಟಿ ನಿಬಂಧಕರು, ಸಹಕಾರ ಇಲಾಖೆ ಮೈಸೂರು ಪ್ರಾಂತ ಮೈಸೂರು, ಉಪನಿಬಂಧಕರು, ಸಹಕಾರ ಇಲಾಖೆ, ಮೈಸೂರು ಪ್ರಾಂತ, ಮೈಸೂರು, ಸಹಾಯಕ ನಿಬಂಧಕರು ಮೈಸೂರು, ಶ್ರೀ ಸಿದ್ದೇಗೌಡ ಅಧ್ಯಕ್ಷರು, ಮೈಮೂಲ್, ಮೈಸೂರು, ಶ್ರೀ ಮುದ್ದಯ್ಯ, ಅಧ್ಯಕ್ಷರು ಲ್ಯಾಂಪ್ಸ್, ಹಾಗೂ ಶ್ರೀ ಶರಣಗೌಡ ಜಿ ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರುಗಳು ಉಪಸ್ಥಿತರಿದ್ದರು ಹಾಗೂ ಸದರಿ ಸಭೆಯಲ್ಲಿ ಸಹಕಾರಿ ಸಂಸ್ಥೆಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

## ಪತ್ರಿಕಾ ಗೋಷ್ಠಿ




**ಮೈಸೂರು:** 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ 20 ನವೆಂಬರ್ 2019ರಂದು ಮೈಸೂರಿನಲ್ಲಿ "ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ, ತಂತ್ರಜ್ಞಾನ ಅಳವಡಿಕೆ ಮತ್ತು ಗಣಕೀಕರಣ" ದಿನಾಚರಣೆಯ ಅಂಗವಾಗಿ ದಿನಾಂಕ: 18.11.2019ರಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯನ್ನು ಆಯೋಜನೆ ಮಾಡಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಉಪಸ್ಥಿತರಾಗಿ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಶ್ರೀ ಹೆಚ್.ವಿ. ರಾಜೀವ್, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಅಧ್ಯಕ್ಷರು, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ ನಿ., ಮೈಸೂರು. ಶ್ರೀ ಎಸ್. ಸಿದ್ದೇಗೌಡ, ಮಾನ್ಯ ಅಧ್ಯಕ್ಷರು, ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮೈಸೂರು. ಶ್ರೀ ಜಿ.ಡಿ. ಹರೀಶ್ ಗೌಡ, ಮಾನ್ಯ ಅಧ್ಯಕ್ಷರು, ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮೈಸೂರು. ಶ್ರೀ ಪ್ರಕಾಶ್ ರಾವ್, ಸಹಕಾರ ಸಂಘಗಳ ಜಂಟಿ ನಿಬಂಧಕರು ಮೈಸೂರು ಪ್ರಾಂತ, ಮೈಸೂರು. ಶ್ರೀ ಜಿ.ಆರ್. ವಿಜಯಕುಮಾರ್, ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು ಜಿಲ್ಲೆ ಮೈಸೂರು. ಶ್ರೀ ಶರಣಗೌಡ ಜಿ ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಹಾಗೂ ಸಹಕಾರಿ ಗಣ್ಯರು ಮತ್ತು ಅಧಿಕಾರಿಗಳು ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ:–7,396, ಬೆಂಗಳೂರು:–1,696, ಮೈಸೂರು:–810 ಹಾಗೂ ಕಲಬುರಗಿ:–1852 ವಿಭಾಗಗಳಿಂದ ದಾಖಲಾದ ದಾವಾ ಪ್ರಕರಣಗಳ ಒಟ್ಟು 11,754 ಆಗಿರುತ್ತದೆ. ಇವುಗಳ ಪೈಕಿ 5,584 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 6,170.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,120 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 210 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 146 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 1764 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 981 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 82 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 80 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 819 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

## 66ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟನಾ ಕಾರ್ಯಕ್ರಮದ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು - ತುಮಕೂರು



**ತುಮಕೂರು:** ದಿನಾಂಕ 14.11.2019 ರಂದು ತುಮಕೂರು ಜಿಲ್ಲೆಯಲ್ಲಿ ನಡೆದ 66ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್ ಯಡಿಯೂರಪ್ಪನವರು ನೆರವೇರಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಗೃಹ ಸಚಿವರು ಹಾಗೂ ಸಹಕಾರ ಸಚಿವರು ಆದ ಶ್ರೀ ಬಸವರಾಜು ಬೊಮ್ಮಾಯಿ ರವರು ವಹಿಸಿದ್ದರು, ಧ್ವಜಾರೋಹಣವನ್ನು ಶ್ರೀ ವಿ. ಸೋಮಣ್ಣನವರು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಜೆ,ಸಿ ಮಾಧುಸ್ವಾಮಿ ರವರು ಹಾಗೂ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರು ಮತ್ತು ತುಮಕೂರು ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಮಾನ್ಯ ಶ್ರೀ ಕೆ,ಎನ್ ರಾಜಣ್ಣನವರು ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ,ಎಚ್ ಕೃಷ್ಣಾರೆಡ್ಡಿರವರು ನೇರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ,ಗಂಗಾಧರಯ್ಯನವರು, ಹೆಚ್,ವಿ ರಾಜೀವ್ ರವರು ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ಹಾಗೂ ಸಹಕಾರ ಮಹಾಮಂಡಲದ ಅಧ್ಯಕ್ಷರಾದ ಮಾನ್ಯ ಶ್ರೀ ಎನ್. ಗಂಗಣ್ಣ ನವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಹೆಚ್. ವಿ ರಾಜೀವ್ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಎಂ. ಜಿ ಪಾಟೀಲ್ ರವರಿಗೆ ಸಹಕಾರ ರತ್ನ ಪ್ರಶಸ್ತಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್ ಯಡಿಯೂರಪ್ಪನವರು ನೀಡಿ ಗೌರವಿಸಿದರು.

## 66ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ - ಚಿತ್ರದುರ್ಗ



**ಚಿತ್ರದುರ್ಗ:** ದಿನಾಂಕ 19.11.2019 ರಂದು ಚಿತ್ರದುರ್ಗ ನಗರದ ಶ್ರೀ ಮುರುಘಾಮಠದ ಆವರಣದಲ್ಲಿರುವ ಅನುಭವ ಮಂಟಪದ ಸಭಾಭವನದಲ್ಲಿ 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ರಾಜ್ಯ ಮಟ್ಟದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಸದರಿ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪರಮ ಪೂಜ್ಯ ಡಾ, ಶ್ರೀ ಶಿವಮೂರ್ತಿ ಮುರುಘಾ ಶರಣರು ವಹಿಸಿದ್ದರು, ಉದ್ಘಾಟನೆಯನ್ನು ಚಿತ್ರದುರ್ಗ ನಗರದ ಜನಪ್ರಿಯ ಶಾಸಕರಾದ ಶ್ರೀ ಜಿ,ಹೆಚ್ ತಿಪ್ಪಾರೆಡ್ಡಿ ರವರು ನೆರವೇರಿಸಿದರು, ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್,ಆರ್ ಲಕ್ಷ್ಮೀಕಾಂತ ರೆಡ್ಡಿ ರವರು, ಚಳ್ಳಕೆರೆ ನಗರದ ಶಾಸಕರಾದ ಶ್ರೀ ಟಿ,ರಘುಮೂರ್ತಿರವರು, ಮಾಜಿ ಮಂತ್ರಿಗಳು ಹಾಗೂ ಚಿತ್ರದುರ್ಗ ಜಿಲ್ಲೆಯ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಡಿ,ಸುಧಾಕರ್ ರವರು, ಕರ್ನಾಡಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎನ್,ಗಂಗಣ್ಣ ನವರು, ಬೆಂಗಳೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಎಂ,ಡಿ ನರಸಿಂಹ ಮೂರ್ತಿರವರು, ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ವೈ,ಹೆಚ್ ಗೋಪಾಲ ಕೃಷ್ಣ ರವರು, ಕರ್ನಾಟಕ ರಾಜ್ಯ ಮಹಿಳಾ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಶ್ರೀ ಶಕುಂತಲಾ ಕೆ ಬೆಳ್ಳಾಳೆ ರವರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅರುಣ್ ಕುಮಾರ್ ರವರು, ಚಿತ್ರದುರ್ಗ ಡಿಸಿಸಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಇಲ್ಯಾಸ್ ಉಲ್ಲಾ ಷರೀಫ್ ರವರು ಹಾಗೂ ಜಿಲ್ಲಾ ಸಹಕಾರ ಯೂನಿಯನ್‌ನ ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳು, ಸಹಕಾರ ಇಲಾಖೆಯ ಸಿಬ್ಬಂದಿಗಳು ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ ಜಿಲ್ಲಾ ಹಾಲು ಒಕ್ಕೂಟದ ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳು, ಸಿಬ್ಬಂದಿ ವರ್ಗದವರು ಮತ್ತು ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಸುತ್ತೋಲೆಗಳ ಪರಿಷ್ಕರಣಾ ಸಭೆ

## ಸೌಹಾರ್ದ ಸಹಕಾರಿಗಳ ಬೆಳವಣಿಗೆ ಆರೋಗ್ಯಕರವಾಗಿ ಬೆಳೆಯುವುದಕ್ಕಾಗಿ ಸುತ್ತೋಲೆ ಪರಿಷ್ಕರಣಾ ಸಭೆ ಅಗತ್ಯ – ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ



**ಬೆಂಗಳೂರು :** ದಿನಾಂಕ 04.12.2019 ರಂದು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ ಬೆಂಗಳೂರು ಸಭಾಂಗಣದಲ್ಲಿ ನಡೆದ ಸಂಯುಕ್ತ ಸಹಕಾರಿಯ ಸುತ್ತೋಲೆಗಳ ಪರಿಷ್ಕರಣಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ರಚಿತಗೊಂಡಿರುವ ಸಂಯುಕ್ತ ಸಹಕಾರಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಾಗಿ ಶಾಸನಾತ್ಮಕ ಜವಾಬ್ದಾರಿಯನ್ನು ನೀಡಲಾಗಿದೆ. ಈ ಜವಾಬ್ದಾರಿಯ ನಿರ್ವಹಣೆಗಾಗಿ ಈ ಕ್ಷೇತ್ರ ಪ್ರಾರಂಭವಾಗಿನಿಂದ ಇದುವರೆಗೆ ಹಲವಾರು ಸುತ್ತೋಲೆಗಳನ್ನು ನೀಡಲಾಗಿದೆ. ವಿಶೇಷವಾಗಿ ಹಣಕಾಸಿನ ಶಿಸ್ತು ನಿರ್ವಹಣೆಗಾಗಿ, ಶಾಖೆಗಳನ್ನು ತೆರೆಯುವುದು ಇಂತಹ ಈ ವಿಷಯಗಳಲ್ಲಿ ಸಂಯುಕ್ತ ಸಹಕಾರಿ ನೀಡಿರುವ ಮಾರ್ಗಸೂಚಿ ಅನುಸರಿಸಿ ಸೌಹಾರ್ದ ಸಹಕಾರಿಗಳು ಕೆಲಸ ನಿರ್ವಹಿಸುವುದು ಅಗತ್ಯವಾಗಿರುತ್ತದೆ. ಇಂತಹ ಸುತ್ತೋಲೆಗಳನ್ನು ಆಗಿಂದ ಹಾಗೇಯೇ ಪರಿಷ್ಕರಿಸುವ ಅಗತ್ಯವೂ ಇದೆ. ಸರ್ಕಾರಗಳ ಬದಲಾವಣೆ, ಧ್ಯೇಯ ಧೋರಣೆಗಳ ಹಿನ್ನಲೆಯಲ್ಲಿ ಕೆಲವು ಹೊಸ ವಿಷಯಗಳನ್ನು ಸೇರಿಸುವುದು ಅಗತ್ಯವಾಗುತ್ತದೆ. ಒಟ್ಟಾರೆ ಈ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗಾಗಿ ಸಂಯುಕ್ತ ಸಹಕಾರಿಯ ನಡೆ ಗುಣಮಟ್ಟದ ಕಡೆಗೆ ಎಂಬ ಧ್ಯೇಯ ವಾಕ್ಯದ ಸಾರ್ಥಕ ಮಾಡುವ ನಿಟ್ಟಿನಲ್ಲಿ ಈ ಸಭೆವಾಗಿದೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಸ್ವಾಗತ ಮಾಡಿದರು. ನಂತರ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಮುಖ್ಯ ಅತಿಥಿಗಳಾಗಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಶ್ರೀ ಇಳಂಗೋವನ್ ಇವರು ಮಾತನಾಡಿ ಸಹಕಾರ ಕ್ಷೇತ್ರದಲ್ಲಿ ಸಹಕಾರಿ ಸಂಸ್ಥೆಯ ಪ್ರಯೋಜನ ಪಡೆದುಕೊಳ್ಳುವವರು ಮತ್ತು ಮಾಲಿಕರು ಇಬ್ಬರೂ ಒಬ್ಬರೇ ಅದಾಗಿಯೂ ಸಹ ಸಂದರ್ಭನೂಸಾರ ವೇದವಾಗುವುದು ಸಾಮಾನ್ಯವಾಗಿದೆ. ಈ ಅಭಿಪ್ರಾಯಗಳ ಸಹಮತದಲ್ಲಿ ಸಹಕಾರ ಕ್ಷೇತ್ರಕ್ಕೆ ಉಜ್ವಲ ಭವಿಷ್ಯ ಕಾಣಬಹುದಾಗಿ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್ ಗುಂಡೂರಾವ್ ಇವರು ಸೌಹಾರ್ದ ಸಹಕಾರಿಗಳು ಆರ್ಥಿಕ ಶಿಸ್ತು ನಿರ್ವಹಣೆಯಲ್ಲಿ ಹಿಂದೆ ನೀಲ್ಲಬಾರದು. ಆರ್ಥಿಕ ಶಿಸ್ತು ಇರದಿದ್ದಲ್ಲಿ ಸಂಸ್ಥೆಗಳು ಹಾಳಾಗಿ ಹೋಗುತ್ತವೆ. ಸದಸ್ಯರು, ಗ್ರಾಹಕರು ತಮ್ಮ ಠೇವಣಿ ವಾಪಸ್ಸು ಪಡೆಯಲು ಸಾಧ್ಯವಾಗದೆ ಕಷ್ಟ ಪಡುತ್ತಾರೆ. ಈ ನಿಟ್ಟಿಯಲ್ಲಿ ಈ ಕಾರ್ಯಗಾರವನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಇವರು ವಂದನಾರ್ಪಣೆ ಸಲ್ಲಿಸಿದರು. ನಂತರ ನಡೆದ ಸುತ್ತೋಲೆ ಪರಿಷ್ಕರಣಾ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಇದುವರೆಗೂ ನೀಡಿದ 14 ಸುತ್ತೋಲೆಗಳ ಪೈಕಿ 4 ಸುತ್ತೋಲೆಗಳನ್ನು ಪರಿಷ್ಕರಣೆಗಾಗಿ ಮಂಡಿಸಲಾಯಿತು. 2 ಹೊಸದಾಗಿ ನೀಡಿರುವ ಸುತ್ತೋಲೆಗಳು ಕುರಿತು ಅನುಮೋದಿಸಲಾಯಿತು ಹಾಗೂ 3 ಸುತ್ತೋಲೆಗಳನ್ನು ಅವಲೋಖನೆ ಮಾಡಲಾಯಿತು. ಮತ್ತು 3 ಸುತ್ತೋಲೆಗಳನ್ನು ಒಂದರಲ್ಲಿ ಒಂದನ್ನು ಸೇರಿಸಲು ಚರ್ಚಿಸಲಾಯಿತು. ಹಾಗೂ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಈ ಸುತ್ತೋಲೆಗಳ ಕರಡು ಪ್ರತಿಯನ್ನು ಕಳುಹಿಸಿ ಅವರ ಸಲಹೆಗಳನ್ನು ಸಂಗ್ರಹಿಸಿ ನಂತರ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಅನುಮೋದನೆ ಪಡೆದು ಜಾರಿಗೊಳಿಸುವುದೆಂದು ತೀರ್ಮಾನಿಸಲಾಯಿತು.

# ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ವೃತ್ತಿಪರ ನಿರ್ದೇಶಕರುಗಳಿಗಾಗಿ "ಆಡಳಿತ ಪರಿಣಿತಿ ಅಭಿವೃದ್ಧಿ" ತರಬೇತಿ ಕಾರ್ಯಕ್ರಮ



**ಬೆಂಗಳೂರು:** ಪಟ್ಟಣ ಸೌಹಾರ್ದ ಬ್ಯಾಂಕುಗಳ ಅಧ್ಯಕ್ಷರು/ವೃತ್ತಿಪರ ನಿರ್ದೇಶಕರುಗಳಿಗಾಗಿ 6 ಹಾಗೂ 7ನೇ ನವೆಂಬರ್ 2019ರಂದು "ಆಡಳಿತ ಪರಿಣಿತಿ ಅಭಿವೃದ್ಧಿ" ತರಬೇತಿ ಕಾರ್ಯಕ್ರಮವನ್ನು ಅಂಕಿತ ವಿಸ್ತಾ, ಗ್ರೀನ್ ವಿಲೇಜ್, ನೆಲಮಂಗಲ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

**ಸಹಕಾರಿ ಬ್ಯಾಂಕುಗಳು ದೇಶದ ಆರ್ಥಿಕತೆಯಲ್ಲಿ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ - ಶ್ರೀ ಸತೀಶ್ ಮರಾಠೆ,**

ಸಂಯುಕ್ತ ಸಹಕಾರಿ ವತಿಯಿಂದ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು ಹಾಗೂ ವೃತ್ತಿಪರ ನಿರ್ದೇಶಕರುಗಳಿಗಾಗಿ ಎರಡು ದಿನಗಳ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಅಂಕಿತ ವಿಸ್ತಾ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಕ್ರವನ್ನು ಆರ್.ಬಿ.ಐ. ನ ನಿರ್ದೇಶಕರಾದ ಶ್ರೀ ಸತೀಶ್ ಮರಾಠೆಯವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಸಹಕಾರಿ ಬ್ಯಾಂಕುಗಳು ದೇಶದ ಆರ್ಥಿಕತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದು ಶ್ರೀ ಸತೀಶ ಮರಾಠೆರವರು ತಿಳಿಸಿದರು.

ಶ್ರೀ ಸತೀಶ್ ಮರಾಠೆರವರು ನಗದು ರಹಿತ ಸಮಾಜವನ್ನು ಸಾಧಿಸುವ ಕುರಿತು, ಅಪಾಯ ನಿರ್ವಹಣೆ, ಡಿಜಿಟಲೀಕರಣ, ತಂತ್ರಜ್ಞಾನ ಅಳವಡಿಕೆ ಕುರಿತು ಉಪನ್ಯಾಸ ನೀಡಿದರು. ಶ್ರೀಮತಿ ಶೀಲಾ ಬೈಜು, ಮಾನ್ಯ ಸಹಪ್ರಧಾನ ವ್ಯವಸ್ಥಾಪಕರು, ಆರ್.ಬಿ.ಐ. ಬೆಂಗಳೂರು ಇವರು ಪ್ರಸ್ತುತ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆರ್.ಬಿ.ಐ.ನ ಪಾತ್ರದ ಕುರಿತು ಉಪನ್ಯಾಸ ನೀಡಿದರು, ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣ, ನಿವೃತ್ತ ಸಹಪ್ರಧಾನ ವ್ಯವಸ್ಥಾಪಕರು, ಆರ್.ಬಿ.ಐ. ಇವರು, ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿಗಳ ಕುರಿತು ಉಪನ್ಯಾನ ನೀಡಿದರು. ಶ್ರೀ ಸುಬ್ರಮಣ್ಯ ಕುಳೇದ, ಮಾನ್ಯ ತರಬೇತಿದಾರರು, ಇವರು ಗ್ರಾಹಕರ ತೃಪ್ತಿ, ನೌಕರರ ಪ್ರೇರಣೆಯ ಕುರಿತು ಉಪನ್ಯಾಸ ನೀಡಿದರು. ಶ್ರೀ ಸಾಹುಕಾರ, ಪ್ರಾಧ್ಯಾಪಕರು, ಕೆನರಾ ಬ್ಯಾಂಕ್ ಸಿಬ್ಬಂದಿ ತರಬೇತಿ ಕೇಂದ್ರ, ಬೆಂಗಳೂರು ಇವರು ಗುಣಮಟ್ಟ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್.ಎಸ್. ದೇಶಪಾಂಡೆ, ಶ್ರೀ ಎಸ್.ಆರ್.ಲಕ್ಷ್ಮೀಕಾಂತರೆಡ್ಡಿ, ಶ್ರೀ ನಂಜನಗೌಡ ಜಿ, ಶ್ರೀ ವಿಶ್ವನಾಥ ಚ. ಹಿರೇಮಠ ಹಾಗೂ ಶ್ರೀ ಆರ್. ತಿಮ್ಮಯ್ಯಶೆಟ್ಟಿರವರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭಾಗವಹಿಸಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ 15 ಪಟ್ಟಣ ಬ್ಯಾಂಕುಗಳಿಂದ 37 ಅಧ್ಯಕ್ಷರು ಹಾಗೂ ನಿರ್ದೇಶಕರು ಭಾಗವಹಿಸಿದ್ದರು.

# ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ಹಿರಿಯ ಅಧಿಕಾರಿಗಳಿಗಾಗಿ "ಉನ್ನತ ಮಟ್ಟದ" ತರಬೇತಿ ಕಾರ್ಯಕ್ರಮ



**ಬೆಂಗಳೂರು:** ಪಟ್ಟಣ ಸೌಹಾರ್ದ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು/ಹಿರಿಯ ಅಧಿಕಾರಿಗಳಿಗಾಗಿ 7 ಹಾಗೂ 8ನೇ ನವೆಂಬರ್ 2019ರಂದು "ಉನ್ನತ ಮಟ್ಟದ" ತರಬೇತಿ ಕಾರ್ಯಕ್ರಮವನ್ನು ಅಂಕಿತ ವಿಸ್ತಾ, ಗ್ರೀನ್ ವಿಲೇಜ್, ನೆಲಮಂಗಲ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ನೇರವೇರಿಸಿದರು. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಹಲವಾರು ವಿಧಧ ತರಬೇತಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ವಿಶೇಷವಾಗಿ ಪಟ್ಟಣ ಸಹಕಾರ ಬ್ಯಾಂಕುಗಳಿಗಾಗಿ ಉನ್ನತ ಮಟ್ಟದ ತರಬೇತಿಗಳನ್ನು ಆಯೋಜಿಸುತ್ತಾ ಬಂದಿದೆ.

ಸೌಹಾರ್ದ ಪಟ್ಟಣ ಸಹಕಾರ ಬ್ಯಾಂಕುಗಳ ಕಾರ್ಯನಿರ್ವಹಣೆ ಬಗ್ಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ಮೆಚ್ಚುಗೆ ವ್ಯಕ್ತಪಡಿಸುತ್ತಿರುವುದು ನಮಗೆ ಹೆಮ್ಮೆಯ ವಿಷಯ ಎಂದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಶ್ರೀ ಮನೋಹರ ಮಸ್ಕಿ, ಸಂಸ್ಥಾಪಕರು ಸುಕೋ ಬ್ಯಾಂಕ್ ಬಳ್ಳಾರಿ, ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣ, ನಿವೃತ್ತ ಸಹಪ್ರಧಾನ ವ್ಯವಸ್ಥಾಪಕರು, ಆರ್.ಬಿ.ಐ, ಶ್ರೀ ಸುಬ್ರಮಣ್ಯ ಕುಳೇದ, ಮಾನ್ಯ ತರಬೇತಿದಾರರು, ಶ್ರೀ ಸಾಹುಕಾರ, ಸಿಬ್ಬಂದಿ, ಕೆನರಾ ಬ್ಯಾಂಕ್ ತರಬೇತಿ ಕೇಂದ್ರ ಬೆಂಗಳೂರು ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಅಳವಡಿಸಿದ ವಿಷಯಗಳು ಹಾಗೂ ಉಪನ್ಯಾಸ ನೀಡಿದ ವ್ಯಕ್ತಿಗಳ ವಿಷಯ ಮಂಡನೆ ಈ ಬಾರಿ ತುಂಬಾ ತೃಪ್ತಿಕರವಾಗಿತ್ತು ಎಂದು ಶಿಬಿರಾರ್ಥಿಗಳು ಅಭಿಪ್ರಾಯ ವ್ಯಕ್ತಪಡಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ 14 ಪಟ್ಟಣ ಬ್ಯಾಂಕುಗಳಿಂದ 28 ಸಿಬ್ಬಂದಿಗಳು ಭಾಗವಹಿಸಿದ್ದರು.

## ಕ್ಲಸ್ಟರ್ ತರಬೇತಿ ಕಾರ್ಯಕ್ರಮಗಳು

**ಬೆಳಗಾವಿ:** ದಿನಾಂಕ 20.11.2019 ರಂದು ಬೆಳಗಾವಿ ಜಿಲ್ಲೆಯ ಉ. ಖಾನಾಪೂರ ಮತ್ತು ಚಿಕಾಲುಗುಡ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಕಾಯ್ದೆ ಕಲಂ 34, ಲೆಕ್ಕಪರಿಶೋಧನೆ ವರದಿ, ಸಾಮಾನ್ಯ ಸಭೆ , ಚುನಾವಣೆ, ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಬಸವೇಶ್ವರ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಉ.ಖಾನಾಪೂರ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 06 ಸೌಹಾರ್ದ ಸಹಕಾರಿಗಳಿಂದ 05 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 21.11.2019 ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಕಾರ್ಯಗಳು, ದಾವಾ ದಾಖಲಾತಿ ಚುನಾವಣೆ, ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ಮಂಜುನಾಥ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಇಲ್ಲಿ ಆಯೋಜಿಸಲಾಗಿತ್ತು.

ದಿನಾಂಕ 22.11.2019 ರಂದು ಬೆಳಗಾವಿ ಜಿಲ್ಲೆಯ ಮಲ್ಲಾಪುರ ಪಿ.ಜಿ., ಘಟಪ್ರಭಾ, ಧೂಪದಾಳ, ಪಾಮಲದಿನ್ನಿ ಗ್ರಾಮದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಕಾರ್ಯಗಳು, ಕಾಯ್ದೆ ಕಲಂ 34, ಲೆಕ್ಕ ಪರಶೋಧನಾ ವರದಿ, ಸಾಮಾನ್ಯ ಸಭೆ, ಆಡಳಿತ ಮಂಡಲಿಯ ಚುನಾವಣೆ, ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಘಟಪ್ರಭಾ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 17 ಸೌಹಾರ್ದ ಸಹಕಾರಿಗಳಿಂದ 18 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 22.11.2019 ರಂದು ಬೆಳಗಾವಿ ಜಿಲ್ಲೆಯ ಸುಣಧೋಳಿ, ಹುಣಶ್ಯಾಳ(ಪಿ.ವೈ), ಕೂಲಗೋಡ, ಯಾದವಾಡ ಗ್ರಾಮದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಕಾರ್ಯಗಳು, ಕಾಯ್ದೆ ಕಲಂ 34, ಲೆಕ್ಕ ಪರಶೋಧನಾ ವರದಿ, ಸಾಮಾನ್ಯ ಸಭೆ, ಆಡಳಿತ ಮಂಡಲಿಯ ಚುನಾವಣೆ, ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಸುಣಧೋಳಿ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 7 ಸೌಹಾರ್ದ ಸಹಕಾರಿಗಳಿಂದ 8 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 22.11.2019 ರಂದು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ದಾವಾ ದಾಖಲಾತಿ, ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ವಿವೇಕಾನಂದ ಸೌಹಾರ್ದ ಸಹಕಾರಿ ನಿ., ಇಲ್ಲಿ ಆಯೋಜಿಸಲಾಗಿತ್ತು.

ದಿನಾಂಕ 23.11.2019 ರಂದು ಬೆಳಗಾವಿ ಜಿಲ್ಲೆಯ ಕೌಜಲಗಿ ಗ್ರಾಮದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿಗಳು, ಕಾಯ್ದೆ ಕಲಂ 34, ಲೆಕ್ಕಪರಿಶೋಧನ ವರದಿ, ಸಾಮಾನ್ಯ ಸಭೆ, ಚುನಾವಣೆ, ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಮಾಳಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೌಜಲಗಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 4 ಸೌಹಾರ್ದ ಸಹಕಾರಿಗಳಿಂದ 04 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 23.11.2019 ರಂದು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿಗಳು, ದಾವಾ ದಾಖಲಾತಿ ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ಆದಿನಾಥ ಸೌಹಾರ್ದ ಸಹಕಾರಿ ನಿ., ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 4 ಸೌಹಾರ್ದ ಸಹಕಾರಿಗಳಿಂದ 04 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 25.11.2019 ರಂದು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿಗಳು, ದಾವಾ ದಾಖಲಾತಿ ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ಹನುಮಾನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಇಲ್ಲಿ ಆಯೋಜಿಸಲಾಗಿತ್ತು.

**ವಿಜಯಪುರ:** ದಿನಾಂಕ 12.11.2019 ರಂದು ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಹೋರ್ತಿಯಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ 05 ಸೌಹಾರ್ದ ಸಹಕಾರಿಗಳಿಂದ 02 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 14.11.2019 ರಂದು ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕಿನ ಜಿಗಜಿಣಗಿಯಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ 05 ಸೌಹಾರ್ದ ಸಹಕಾರಿಗಳಿಂದ 06 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 16.11.2019 ರಂದು ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ 06 ಸೌಹಾರ್ದ ಸಹಕಾರಿಗಳಿಂದ 06 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 22.11.2019 ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಕಾಯ್ದೆ ಕಲಂ 34 ಮಾಹಿತಿ, ಸಾಲ ವಸೂಲಾತಿ, ಜಿ.ಎಸ.ಟಿ. ನೋಂದಣಿ ಹಾಗೂ ಆಡಳಿತ ಮಂಡಲಿ ಚುನಾವಣೆ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಮೂಲ ನಂದೀಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಬಸವನ ಬಾಗೇವಾಡಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 10 ಸೌಹಾರ್ದ ಸಹಕಾರಿಗಳು ಭಾಗವಹಿಸಿದ್ದರು.

**ಧಾರವಾಡ:** ದಿನಾಂಕ 18.11.2019 ರಂದು ಧಾರವಾಡ ಜಿಲ್ಲೆಯ ಹುಬ್ಬಳ್ಳಿ ನಗರದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ದಾವಾ ದಾಖಲಾತಿ, ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಕಾರ್ಯಗಳು, ಆಡಳಿತ ಮಂಡಲಿಯ ಚುನಾವಣೆ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಜಿಲ್ಲಾ ಸಂಪರ್ಕ ಕಛೇರಿ, ಧಾರವಾಡ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 11 ಸೌಹಾರ್ದ ಸಹಕಾರಿಗಳಿಂದ 11 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 19.11.2019 ರಂದು ಧಾರವಾಡ ಜಿಲ್ಲೆಯ ಹುಬ್ಬಳ್ಳಿ ನಗರದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ದಾವಾ ದಾಖಲಾತಿ, ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಕಾರ್ಯಗಳು, ಆಡಳಿತ ಮಂಡಲಿಯ ಚುನಾವಣೆ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಜಿಲ್ಲಾ ಸಂಪರ್ಕ ಕಛೇರಿ, ಧಾರವಾಡ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 11 ಸೌಹಾರ್ದ ಸಹಕಾರಿಗಳಿಂದ 11 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 20.11.2019 ರಂದು ಧಾರವಾಡ ಜಿಲ್ಲೆಯ ಕಲಘಟಗಿ ಗ್ರಾಮದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ದಾವಾ ದಾಖಲಾತಿ, ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಕಾರ್ಯಗಳು, ಆಡಳಿತ ಮಂಡಲಿಯ ಚುನಾವಣೆ, ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಜಿಲ್ಲಾ ಸಂಪರ್ಕ ಕಛೇರಿ, ಧಾರವಾಡ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 06 ಸೌಹಾರ್ದ ಸಹಕಾರಿಗಳಿಂದ 06 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಾಗಲಕೋಟ:** ದಿನಾಂಕ 12.11.2019 ರಂದು ಬಾಗಲಕೋಟ ಜಿಲ್ಲೆಯ ಇಳಕಲ್ ನಗರದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 06 ಸೌಹಾರ್ದ ಸಹಕಾರಿಗಳಿಂದ 08 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 13.11.2019 ರಂದು ಬಾಗಲಕೋಟ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಕ್ಲಸ್ಟರ್ ತರಬೇತಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 10 ಸೌಹಾರ್ದ ಸಹಕಾರಿಗಳಿಂದ 12 ಪ್ರತಿನಿಧಿಗಳು ಭಾಗವಹಿಸಿದ್ದರು.

**ಹಾವೇರಿ:** ದಿನಾಂಕ 21.11.2019 ರಂದು ಹಾವೇರಿ ಜಿಲ್ಲೆಯ ಹಾವೇರಿ ಮತ್ತು ಬ್ಯಾಡಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ದಾವಾ ದಾಖಲಾತಿ, ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಕಾರ್ಯಗಳು, ಆಡಳಿತ ಮಂಡಲಿಯ ಚುನಾವಣೆ, ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಜಿಲ್ಲಾ ಸಂಪರ್ಕ ಕಛೇರಿ, ಹಾವೇರಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 10 ಸೌಹಾರ್ದ ಸಹಕಾರಿಗಳಿಂದ 10 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 25.11.2019 ರಂದು ಹಾವೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಕ್ಲಸ್ಟರ್ ತರಬೇತಿ ಆಯೋಜಿಸಲಾಗಿತ್ತು.

**ಗದಗ:** ದಿನಾಂಕ 25.11.2019 ರಂದು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಜವಾಬ್ದಾರಿಗಳು, ಚುನಾವಣೆ, ದಾವಾ ದಾಖಲಾತಿ ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ವಿಷಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ಶೈಲ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ., ರೋಣ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 09 ಸೌಹಾರ್ದ ಸಹಕಾರಿಗಳಿಂದ 09 ಪ್ರತಿನಿಧಿಗಳು ಭಾಗವಹಿಸಿದ್ದರು.

**ರಾಯಚೂರು:** ದಿನಾಂಕ 13.11.2019 ರಂದು ರಾಯಚೂರು ಜಿಲ್ಲೆಯ ಲಿಂಗಸುಗುರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಕ–ರಿಗಾಗಿ ಕ್ಲಸ್ಟರ್ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಒಟ್ಟು 13 ಸೌಹಾರ್ದ ಸಹಕಾರಿಯಿಂದ 13 ಜನ ಪ್ರತಿನಿಧಿಗಳು ಭಾಗವಹಿಸಿದರು.

ದಿನಾಂಕ 07.11.2019 ರಂದು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಕರಿಗಾಗಿ ಕ್ಲಸ್ಟರ್ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಒಟ್ಟು 11 ಸೌಹಾರ್ದ ಸಹಕಾರಿಯಿಂದ 15 ಜನ ಪ್ರತಿನಿಧಿಗಳು ಭಾಗವಹಿಸಿದರು.

**ದಾವಣಗೆರೆ :** ದಿನಾಂಕ 22.11.2019 ರಂದು ದಾವಣಗೆರೆ ಜಿಲ್ಲೆಯ ಹರಿಹರ ಮರ್ಚೆಂಟ್ಸ್ ಸೌಹಾರ್ದ ಸಹಕಾರಿಯ ಆವರಣದಲ್ಲಿ ಹರಿಹರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಸಹಕಾರಿಯ ಶಾಸನಬದ್ಧ ಜವಾಬ್ದಾರಿಗಳು ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಸದರಿ ಕಾರ್ಯಕ್ರಮದಲ್ಲಿ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್, ಎಂ, ನಾಗರಾಜ್ ರವರು ಉಪಸ್ಥಿತರಿದ್ದರು, ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಉಪಯುಕ್ತ ಮಾಹಿತಿ ನೀಡಿದರು, 09 ಸೌಹಾರ್ದ ಸಹಕಾರಿಗಳಿಂದ 12 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 22.11.2019 ರಂದು ದಾವಣಗೆರೆ ಜಿಲ್ಲೆಯ ಹರಿಹರ ನಗರದ ದಿ ಇಂಡಿಯನ್ ಸೌಹಾರ್ದ ಸಹಕಾರಿ ನಿ,. ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಭಾಗವಹಿಸಿ ನಿರ್ದೇಶಕರ ಜವಬ್ದಾರಿಗಳು ಹಾಗೂ ವ್ಯವಹಾರ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿದರು.

**ಬೆಂಗಳೂರು:** ದಿನಾಂಕ 06.11.2019 ರಂದು ಬೆಂಗಳೂರು ನಗರದ ಬೊಮ್ಮನಹಳ್ಳಿ ಹಾಗೂ ಆನೇಕಲ್ ವಿಧಾನಸಭಾ ಕ್ಷೇತ್ರದ ಸೌಹಾರ್ದ ಸಹಕಾರಿಗಳಿಗಾಗಿ ಶಾಸನಬದ್ಧ ಕಾರ್ಯಗಳು ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ರಾಮ ಸೌಹಾರ್ದ ಸಹಕಾರಿ ನಿ, ಚಂದಾಪುರ ಇಲ್ಲಿ ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ,ಎಂ ರವರು ಉಪಯುಕ್ತ ಮಾಹಿತಿ ನೀಡಿದರು, 09 ಸೌಹಾರ್ದ ಸಹಕಾರಿಗಳಿಂದ 13 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 26.11.2019 ರಂದು ಬೆಂಗಳೂರು ನಗರದ ಪದ್ಮನಾಭನಗರ, ಚಾಮರಾಜಪೇಟೆ ಹಾಗೂ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಸಹಕಾರಿಯ ಶಾಸನಬದ್ಧ ಕಾರ್ಯಗಳು" ವಿಷಯದ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು, ಸದರಿ ತರಬೇತಿಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ,ಎಂ ರವರು ಉಪಯುಕ್ತ ಮಾಹಿತಿ ನೀಡಿದರು, 11 ಸೌಹಾರ್ದ ಸಹಕಾರಿಗಳಿಂದ 12 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಶಿವಮೊಗ್ಗ:** ದಿನಾಂಕ 22.11.2019 ರಂದು ಶಿವಮೊಗ್ಗ ಜಿಲ್ಲೆಯಲ್ಲಿ 2020ರಲ್ಲಿ ಚುನಾವಣೆ ನಡೆಯುವ ಸೌಹಾರ್ದ ಸಹಕಾರಿಗಳಿಗಾಗಿ ಚುನಾವಣೆ ಪ್ರಕ್ರಿಯೆ ಕುರಿತು ಕ್ಲಸ್ಟರ್ ತರಬೇತಿಯನ್ನು ವಿಪ್ರ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ,. ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು, ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎ,ಆರ್, ಪ್ರಸನ್ನಕುಮಾರ್ ರವರು ನೆರವೇರಿಸಿದರು, ಮುಖ್ಯ ಅತಿಥಿಗಳಾಗಿ ಶ್ರೀ ವಿ, ಮಹೇಶ್ವರಪ್ಪ, ಮಾನ್ಯ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಶಿವಮೊಗ್ಗ, ಶ್ರೀಮತಿ ರೇಖಾ ಎಲ್,ಆರ್ ಹಿರಿಯ ಲೆಕ್ಕಪರಿಶೋಧಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಶಿವಮೊಗ್ಗ ಹಾಗೂ ಶ್ರೀ ನಾರಾಯಣ ಹೆಗಡೆ ರವರು ಪ್ರಾಂತೀಯ ವ್ಯವಸ್ಥಾಪಕರು ಬೆಂಗಳೂರು ಪ್ರಾಂತ, ರವರು ಭಾಗವಹಿಸಿದ್ದರು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಉಪಸ್ಥಿತರಿದ್ದರು, 22 ಸೌಹಾರ್ದ ಸಹಕಾರಿಗಳಿಂದ 41 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿಕ್ಕಬಳ್ಳಾಪುರ:** ದಿನಾಂಕ 28.11.2019 ರಂದು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ 2020ರಲ್ಲಿ ಚುನಾವಣೆ ನಡೆಯಲಿರುವ ಸೌಹಾರ್ದ ಸಹಕಾರಿಗಳಿಗಾಗಿ ಚುನಾವಣಾ ಪೂರ್ವ ತರಬೇತಿಯನ್ನು ಚಿಕ್ಕಬಳ್ಳಾಪುರ ಲೆಕ್ಕಪರಿಶೋಧನಾ ಉಪನಿರ್ದೇಶಕರ ಕಛೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು, ಚುನಾವಣೆ ಕುರಿತು ಲೆಕ್ಕಪರಿಶೋಧನಾ ಉಪನಿರ್ದೇಶಕರಾದ ಶ್ರೀಮತಿ ಭಾವನಾ ರವರು ಮಾಹಿತಿ ನೀಡಿದರು, ಚುನಾವಣಾ ಪೂರ್ವ ತಯಾರಿ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ,ಎಸ್ ರವರು ಮಾಹಿತಿ ನೀಡಿದರು, 6 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು

**ಬಳ್ಳಾರಿ:** ಬಳ್ಳಾರಿ ಜಿಲ್ಲೆಯ ಹರಪ್ಪನಹಳ್ಳಿಯಲ್ಲಿ ದಿನಾಂಕ 28.11.2019 ರ ಬೆಳಗ್ಗೆ 10.30ಗಂಟೆಗೆ ನವಜ್ಯೋತಿ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಆಯೋಜಿಸಿದ್ದ 'ಆದಾಯ ತೆರಿಗೆ ಮತ್ತು ಶಾಸನಾತ್ಮಕ ಜವಾಬ್ದಾರಿ' ಕುರಿತಂತೆ ಹರಪ್ಪನಹಳ್ಳಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಕ್ಲಸ್ಟರ್ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 15 ಸೌಹಾರ್ದ ಸಹಕಾರಿಗಳಿಂದ 22 ಪ್ರತಿನಿಧಿಗಳು ಭಾಗವಹಿಸಿದ್ದರು.

ತರಬೇತಿ ಕಾರ್ಯಕ್ರಮದಲ್ಲಿ ಆದಾಯ ತೆರಿಗೆ ವಿಷಯವಾಗಿ ಶ್ರೀ ಬೋರಯ್ಯನವರು ಸಹಕಾರಿಗಳಿಗೆ ಮಾಹಿತಿ ನೀಡಿದರು. ಶ್ರೀ ಜಿ. ನಂಜನಗೌಡ. ಸಂಯುಕ್ತ ಸಹಕಾರಿ ನಿರ್ದೇಶಕರು, ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣವನ್ನು ಮಾಡಿದರು, ಸಾಮಾರೋಪ ಭಾಷಣವನ್ನು ಶ್ರೀ ವಿಶ್ವನಾಥ್ ಚ. ಹಿರೇಮಠರವರು ನಡೆಸಿದರು, ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಜವಾಬ್ದಾರಿಗಳ ಬಗ್ಗೆ ಚಿತ್ರದುರ್ಗ ಮತ್ತು ದಾವಣೆಗೆರೆಯ ಜಿಲ್ಲಾ ಸಂಯೋಜ–ಕರಾದ ಶ್ರೀ ನಟರಾಜ್ ಮಾಹಿತಿ ನೀಡಿದರು. ರವಿಕುಮಾರ್. ಕೆ. ಆರ್. ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು.

# ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮ



**ಬೆಳಗಾವಿ :** ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಎರಡು ದಿನಗಳ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯನ್ನು ದಿನಾಂಕ 28 ಮತ್ತು 29 ನವೆಂಬರ್ 2019 ರಂದು ಹೊಟಲ್ ಸನ್ಮಾನ್, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಬೆಳಗಾವಿ ಜಿಲ್ಲೆ. ಬೆಳಗಾವಿಯ ಮಾನ್ಯ ಜಂಟಿ ನಿರ್ದೇಶಕರಾದ ಶ್ರೀ ಸುರೇಶರಾವ್ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಎಂ.ಕವಟಗಿಮಠ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕಲ್ಲೋಳ್ಳಿ ಇದರ ಅಧ್ಯಕ್ಷರಾದ ಶ್ರೀ ಬಾಳಪ್ಪ ಬೆಳಕೊಡ, ಶ್ರೀ ಸಾಯಿಶ್ಯಾಮ ಸೌಹಾರ್ದ ಸಹಕಾರಿ ನಿ., ಇದರ ಆಧ್ಯಕ್ಷರು ಹಾಗೂ ಬಾರ್ ಅಸೊಸಿಯೇಶನ್ ಕೌನ್ಸಿಲ್, ಬೆಳಗಾವಿ ಇದರ ಉಪಾಧ್ಯಕ್ಷರಾದ ಶ್ರೀ ಸಿ.ಟಿ.ಮಜಿಗೆ, ವಿಕಾಸ ಸೌಹಾರ್ದ ಕೋ–ಆಪ್ ಬ್ಯಾಂಕ್, ಹೊಸಪೇಟ ಇದರ ನಿರ್ದೇಶಕರಾದ ಶ್ರೀ ಅಮೃತ ಜೋಶಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರುಗಳು ಉಪಸ್ಥಿತರಿದ್ದರು.

ಶ್ರೀ ಶ್ರೀಕಾಂತ್ ಬರುವೆ ಇವರು ಎಲ್ಲಾ ಗಣ್ಯ ಮಾನ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡುತ್ತ, ಸಹಕಾರಿ ಸಂಸ್ಥೆಗಳು ಮೂಲಭೂತವಾಗಿ ಕೆಲವು ಅಂಶಗಳನ್ನು ಕಡ್ಡಾಯವಾಗಿ ಪಾಲಿಸಬೇಕು, ಸಿಬ್ಬಂದಿ ನೇಮಕಾತಿಗೆ ಒಂದು ಸಮಿತಿ ರಚನೆಗೊಂಡಿರಬೇಕು, ಸಮಿತಿಯು ಐದು ಸದಸ್ಯರನ್ನು ಒಳಗೊಂಡಿರಬೇಕು. ಆಯ್ಕೆಯಾದ ಸಿಬ್ಬಂದಿಗೆ ನೇಮಕಾತಿ ಪತ್ರವನ್ನು ನೀಡಬೇಕು. ಹೀಗೆ ಕಾನೂನುಗಳನ್ನು ಪಾಲನೆ ಮಾಡುವ ಮೂಲಕ ಕಾರ್ಯನಿರ್ವಹಿಸಿರಿ, ತರಬೇತಿಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಿರಿ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಬಾಳಪ್ಪ ಬೆಳಕೊಡ ಇವರು ಮಾತನಾಡುತ್ತಾ, ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಬೇಕು ಒಂದು ಸಂಸ್ಥೆಯಲ್ಲಿ ಅವ್ಯವಹಾರ ನಡೆದರೆ, ಉಳಿದ ಉತ್ತಮ ಸಂಸ್ಥೆಗಳ ಮೇಲೂ ಸಹಿತ ಕೆಟ್ಟ ಪರಿಣಾಮ ಬೀರುತ್ತದೆ. ಈಗ ಸಹಕಾರ ಸಂಸ್ಥೆಗಳ ನಡುವೆ ಸ್ಪರ್ಧೆ ಇವೆ, ಆದ್ದರಿಂದ ಸಂಸ್ಥೆಗಳು ಕಾಯ್ದೆ, ನಿಯಮಗಳನ್ನು ಪಾಲನೆ ಮಾಡಿ ಉತ್ತಮವಾಗಿ ಬೆಳೆಯುಂತಾಗಲಿ ಎಂದು ಆಶಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಸಿ.ಟಿ. ಮಜಿಗೆ ಇವರು ಮಾತನಾಡುತ್ತಾ ಸಹಕಾರಿ ಸಂಸ್ಥೆಗಳು ಸ್ವಾಯತ್ತತೆ, ಸ್ವಯಂ ನಿಯಂತ್ರಣ ಹೊಂದಿವೆ, ಇವುಗಳಲ್ಲಿ ಸರ್ಕಾರದ ಯಾವುದೇ ಹಸ್ತಕ್ಷೇಪ ಇರುವುದಿಲ್ಲ. ಆದ ಮಾತ್ರಕ್ಕೆ ಸಂಸ್ಥೆಗಳನ್ನು ತಮ್ಮಿಷ್ಟದಂತೆ ನಡೆಸುವಂತಿಲ್ಲ ಕಾನೂನಿನ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ಸಂಯುಕ್ತ ಸಹಕಾರಿಯು ನಿರಂತರವಾಗಿ ಕಾಲಕ್ಕೆ ತಕ್ಕಂತೆ ಸಹಕಾರಿಗಳಿಗೆ ಅನ್ವಯಿಸುವ ವಿಷಯಗಳಿಗನುಗುಣವಾಗಿ ತರಬೇತಿಗಳನ್ನು ಆಯೋಜಿಸಿ ಮಾರ್ಗದರ್ಶನ ನೀಡುತ್ತಾ ಬರುತ್ತಿದೆ. ತಾವುಗಳು ಎಲ್ಲಾ ತರಬೇತಿಗಳಲ್ಲಿ ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆಯಿರಿ ಎಂದು ಕರೆ ನೀಡಿದರು.

ಕಾರ್ಯಕ್ರಮದ ಉದ್ಘಾಟಕರಾದ ಶ್ರೀ ಸುರೇಶರಾವ ಇವರು ಮಾತನಾಡುತ್ತಾ ಭಾರತದಲ್ಲಿ ಸಹಕಾರಿ ಕ್ಷೇತ್ರ ತನ್ನದೇ ಆದ ಛಾಪು ಮೂಡಿಸಿದೆ. ಆದರೆ ಇವತ್ತಿನ ದಿನಮಾನಗಳಲ್ಲಿ ಈ ಕ್ಷೇತ್ರ ನಿಧಾನಗತಿಯಲ್ಲಿ ಸಾಗುತ್ತಿದೆ ಇದರ ವೇಗ ಹೆಚ್ಚಬೇಕು. ಆದ್ದರಿಂದ ಸಹಕಾರಿಗಳು ತಂತ್ರಜ್ಞಾನದ ಬಳಕೆ ಮತ್ತು ಗಣಕೀಕೃತ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಬೇಕು. ಒಳ್ಳೆಯ ಜ್ಞಾನವುಳ್ಳ ಮತ್ತು ಸಾಮರ್ಥ್ಯವುಳ್ಳ ಸಿಬ್ಬಂದಿಗಳನ್ನು ನೇಮಿಸಿಕೊಂಡು ಸಂಸ್ಥೆಗಳನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸಬೇಕು. ಸಹಕಾರಿಗಳಲ್ಲಿ ವೃತ್ತಿಪರತೆ ಇರಲಿ ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಜಗದೀಶ ಕವಟಗಿಮಠ ಇವರು ಸಹಕಾರ ಕ್ಷೇತ್ರದಲ್ಲಿ ಎರಡು ಕಾಯ್ದೆಗಳಿವೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ – 1959 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ – 1997. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ದಲ್ಲಿ ಸರ್ಕಾರದ ಹಸ್ತಕ್ಷೇಪ ಇರುವುದಿಲ್ಲ ಆದರೆ ಇದರ ದುರುಪಯೋಗ ಇತ್ತಿಚಿನ ದಿನಗಳಲ್ಲಿ ತುಂಬಾ ಆಗುತ್ತಿದೆ, ಸ್ವೇಚ್ಛಾಚಾರ ಸಂಸ್ಥೆಗಳಲ್ಲಿ ಅತಿಯಾಗತೊಡಗಿದೆ ಇದರಿಂದ ಸಂಸ್ಥೆಗಳು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸಂಸ್ಥೆಯಲ್ಲಿ ಆಡಳಿತ ಮಂಡಲಿ ಸದಸ್ಯರು ತಮ್ಮ ಹಕ್ಕು ಮತ್ತು ಕರ್ತವ್ಯಗಳನ್ನು ಅರಿತಿರಬೇಕು. ಸಂಸ್ಥೆಯನ್ನು ವ್ಯವಸ್ಥಿತವಾಗಿ ನಡೆಸಬೇಕು. ಸೌಹಾರ್ದ ಸಹಕಾರಿಗಳು ದಾಖಲಿಸುವ 3 ಲಕ್ಷಕ್ಕಿಂತ ಕಡಿಮೆ ಮೊತ್ತದ ದಾವೆಗಳ ವಿಲೇವಾರಿಗಾಗಿ ಮಧ್ಯಸ್ಥಗಾರರ ನೇಮಕವಾಗಲಿದೆ ಇದರಿಂದ ಸಹಕಾರಿಗಳಿಗೆ ಅನುಕೂಲವಾಗಲಿದೆ. ಸಂಸ್ಥೆಗಳು ಸಾಲ ನೀಡುವುದು ಮತ್ತು ಠೇವಣಿ ಸ್ವೀಕರಿಸುವುದಷ್ಟಕ್ಕೆ ಸೀಮಿತವಾಗಿರದೇ ಬೇರೆ ಬೇರೆ ಚಟುವಟಿಕೆಗಳನ್ನು ಸಹ ಅಳವಡಿಸಿಕೊಂಡು ಕಾರ್ಯನಿರ್ವಹಿಸಿರಿ ಎಂದು ಕರೆ ನೀಡಿದರು. ತರಬೇತಿಯಲ್ಲಿ 52 ಸಹಕಾರಿಗಳಿಂದ 90 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ಪ್ರತಿಭಾ ಮಠ, ಸಹಾಯಕಿ, ಬೆಳಗಾವಿ ಪ್ರಾಂತ. ಇವರು ನಿರೂಪಿಸಿದರು. ಶ್ರೀ ಜವಾಹರ ಮುಗ್ಗನವರ, ಜಿಲ್ಲಾ ಸಂಯೋಜಕರು, ಬೆಳಗಾವಿ ಜಿಲ್ಲೆ. ಇವರು ವಂದಿಸಿದರು.

# ಪ್ರವೇಶ ತರಬೇತಿ ಕಾರ್ಯಕ್ರಮಗಳು



**ಬಳ್ಳಾರಿ:** ದಿನಾಂಕ:26.11.2019ರ ಮಂಗಳವಾರ ಬೆಳ್ಳಗ್ಗೆ 11.00 ಗಂಟೆಗೆ ನೂತನ ಸೌಹಾರ್ದ ಸಹಕಾರಿಗಳ ಪ್ರವೇಶ ತರಬೇತಿ ಕಾರ್ಯಕ್ರಮವನ್ನು ಹೊಸಪೇಟೆಯ ಮಲ್ಲಿಗೆ ಹೋಟೆಲ್ ಸಭಾಂಗಣದಲ್ಲಿ ಆಯೋಜಿಸಿದ್ದು ಕಾರ್ಯಕ್ರಮದ ಮೊದಲನೆಯದಾಗಿ ಸಂವಿಧಾನ ದಿನದ ಮಹತ್ವ ಬಗ್ಗೆ ಮತ್ತು ಕ್ಷೀರ ಕ್ರಾಂತೀಯ ಪಿತಾಮಹರಾದ ದಿವಂಗತ ಶ್ರೀ ವರ್ಗಿಸ್ ಕುರಿಯನ್ ಜನ್ಮದಿನವನ್ನು ನೆನೆಯುತ್ತಾ ಬಳ್ಳಾರಿ ಜಿಲ್ಲೆ ನಿರ್ದೇಶಕರಾದ ಶ್ರೀ ವಿಶ್ವನಾಥ್.ಚ. ಹಿರೇಮಠರವರು, ಹೊಸಪೇಟೆ ಉಪವಿಭಾಗದ ಸಹಾಯಕ ನಿಬಂಧಕರಾದ ಶ್ರೀ ಲಿಯಾಕತ್ ಆಲಿರವರು ಕಾರ್ಯಕ್ರಮದ ಉದ್ಘಾಟನೆಯನ್ನು ನೇರವೇರಿಸಿದರು.

ಶ್ರೀಯುತ ಲಿಯಾಕತ್ ಆಲಿ ಇವರು ಸಹಕಾರಿಗಳ ಆಡಳಿತಾತ್ಮಕ ನಿರ್ವಹಣೆಗೆ ಸಂಬಂಧಿಸಿದಂತ್ತೆ ಉಪವಿಧಿಯಲ್ಲಿನ ಉದ್ದೇಶಗಳ ಮಹತ್ವವನ್ನು ತಿಳಿದುಕೊಂಡು ಕಾರ್ಯನಿರ್ವಹಿಸುವುದರ ಉತ್ತಮವಾದದ್ದು, ಸಹಕಾರಿ ಆಡಳಿತ ಮಂಡಳಿ ಹಾಗೂ ಮುಖ್ಯಕಾರ್ಯನಿರ್ವಹಕರು ತಮ್ಮ ಸಹಕಾರಿಯ ಯೋಜನಾ ವರದಿಯ ಬಗ್ಗೆ ಅಧ್ಯಯನವನ್ನು ಮಾಡಿ ಸಹಕಾರಿಯ ಕಾರ್ಯವ್ಯಾಪ್ತಿಗೆ ಅನುಗುಣವಾಗಿ ಠೇವಣಿಯ ಸಂಗ್ರಹವು ಮಾಡುವುದು, ಸಾಲ ನೀಡಬೇಕದಾಗ ತೆಗೆದುಕೊಳ್ಳುವ ಮುಂಜಾಗ್ರತ ಕ್ರಮಗಳಿಂದ ಮುಂದೆಯಾಗುವ ಪರಿಣಾಮಗಳನ್ನು ತಡೆಯಬಹುದಾಗಿರುತ್ತದೆ. ಇದರಿಂದ ಉತ್ತಮ ಸಹಕಾರಿ ಸಂಸ್ಥೆಯಾಗಿ ಬೆಳೆಸಬಹುದು, ನಿಯಮಿತವಾದ ಆಡಳಿತ ಮಂಡಳಿಯ ಸಭೆಯಿಂದ ನಡೆಸುವುದು, ನೋಟಿಸ್ ನೀಡುವ ವಿಧಾನ, ಹೊಸ ಸದಸ್ಯರ ಸೇರ್ಪಡೆ, ಸದಸ್ಯರ ಕರ್ತವ್ಯಗಳು, ಸಹ ಸದಸ್ಯರೊಂದಿಗಿನ ವ್ಯವಹಾರ, ಸದಸ್ಯರೊಂದಿಗಿನ ವ್ಯವಹಾರ, ಆಡಳಿತ ಮಂಡಳಿಯ ರಚನೆ, ಆಡಳಿತ ಮಂಡಳಿಯ ಕಾರ್ಯಗಳು, ಸುತೋಲೆ ಸಭೆಯ ಮಹತ್ವ, ಸಾಮಾನ್ಯ ಸಭೆ, ಸಭೆಗಳ ನಡವಳಿ ಬರೆಯುವಿಕೆ, ಸಹಕಾರಿಯ ಚುನಾವಣೆ ಈ ಎಲ್ಲಾ ವಿಷಯಗಳ ಕುರಿತಂತ್ತೆ ಪೂರ್ಣ ಮಾಹಿತಿಯನ್ನು ನೀಡಿದರು.

ಶ್ರೀಯುತ ವಿಶ್ವನಾಥ್ ಚ. ಹಿರೇಮಠರವರು, ಸಹಕಾರ ಕ್ಷೇತ್ರದ ಪರಿಚಯವನ್ನು ಮಾಡುತ್ತಾ ಕರ್ನಾಟಕದಲ್ಲಿ ಮೊಟ್ಟ ಮೊದಲ ಸಹಕಾರ ಕ್ಷೇತ್ರವು ಕಣಗಿನಾಳದಲ್ಲಿ ಸ್ಥಾಪನೆಯಾಗಿ ಬೆಳೆದು ಬಂದ ಹಾದಿಯ ಜೊತೆಗೆ ದೇಶದ ಇತಿಹಾಸದಲ್ಲಿ ವಿಭಿನ್ನವಾದ, ವಿಶೇಷವಾದ, ಹೊಸದಾದ ಸಹಕಾರ ಕಾಯ್ದೆಯಾದ 'ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997' ರ ಸ್ಥಾಪನೆಯ ನಂತರ ಶಾಸನಬದ್ಧ ಉಸ್ತುವಾರಿ ಸಂಸ್ಥೆಯಾದ ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಳ ನಡೆಸುತ್ತಿರುವ ಕುರಿತಂತ್ತೆ ಸಹಕಾರಿ ಸಂಸ್ಥೆಗಳು ಸ್ವಯತ್ತತೆ – ಸ್ವಯಂ ಆಡಳಿತ – ಸ್ವಯಂ ನಿಯಂತ್ರಣದ ಧ್ಯೇಯ ವಾಕ್ಯವನ್ನು ಅಳವಡಿಸಿಕೊಳ್ಳಬೇಕು. ಹಾಗೂ ಸಹಕಾರಿ ಸಂಸ್ಥೆಗಳು ತಮ್ಮ ನಗದು ವ್ಯವಹಾರವನ್ನು ಮಾಡುವುದರಿಂದ ಹಾಗುವ ಪರಿಣಾಮಗಳನ್ನು ತಿಳಿಸುತ್ತಾ ಕೊನೆಯದಾಗಿ ಆದಾಯ ತೆರಿಗೆಯಿಂದ ಪ್ರಸ್ತುತ ಸನ್ನಿವೇಶದಲ್ಲಿ ಸಹಕಾರಿ ಸಂಸ್ಥೆಗಳು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ಮಧ್ಯಾಹ್ನದ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಕರ್ತವ್ಯಗಳ ಬಗ್ಗೆ, ಉಪವಿಧಿಯ ತಿದ್ದುಪಡಿಗೆ ಸಂಬಂಧಿಸಿದಂತ್ತೆ ಮಾಡಬೇಕಾದ ಕರ್ತವ್ಯಗಳು ಮತ್ತು ಮುಖ್ಯಕಾರ್ಯನಿರ್ವಹಕರ ಕರ್ತವ್ಯಗಳ ಬಗ್ಗೆ ಶ್ರೀ ರವಿಕುಮಾರ್. ಕೆ.ಆರ್. ಜಿಲ್ಲಾ ಸಂಯೋಜಕ, ಬಳ್ಳಾರಿ. ಇವರು ಮಾಹಿತಿ ನೀಡಿದರು. ಸಮಾರೋಪ ಭಾಷಣವನ್ನು ಬಳ್ಳಾರಿ ಜಿಲ್ಲಾ ನಿರ್ದೇಶಕರಾದ ಶ್ರೀ ವಿಶ್ವನಾಥ್.ಚ. ಹಿರೇಮಠರವರು ನಡಿಸಿಕೊಟ್ಟರು ಈ ಕಾರ್ಯಕ್ರಮದಲ್ಲಿ 24 ಸೌಹಾರ್ದ ಸಹಕರಿಗಳ 41 ಪ್ರತಿನಿಧಿಗಳು ಬಾಗವಹಿಸಿದ್ದರು.




**ಕೊಪ್ಪಳ:** ಕೊಪ್ಪಳ ಜಿಲ್ಲೆಯಲ್ಲಿ ನೂತನವಾಗಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳಿಗಾಗಿ ಪ್ರವೇಶ ತರಬೇತಿ ಕಾರ್ಯಕ್ರಮವನ್ನು ದಿನಾಂಕ 29.11.2019 ರ ಶುಕ್ರವಾರದಂದು ಜಿಲ್ಲಾ ಸಂಪರ್ಕ ಕಚೇರಿ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬನ್ನಿಗಿಡ ಕ್ಯಾಂಪ್, ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು.

ಪ್ರವೇಶ ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ, ಪತ್ತಾರ, ಜಿಲ್ಲಾ ಒಕ್ಕೂಟದ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ್, ಶುಕಮುರಿ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಶರಣಪ್ಪಾ ಹ್ಯಾಟಿ, ಕಲಬುರ್ಗಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್.ಹೆಚ್, ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕ್‌ನ ಮಾನ್ಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಿ.ಜಿ.ಜವಳಿ, ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ

ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೀರೇಶ ಹಿರೇಮಠ ರವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸಿ.ಜಿ.ಜವಳಿಯವರು ಸೌಹಾರ್ದ ಸಹಕಾರಿಗಳು ಗುಣಮಟ್ಟ ಸಾಲದ ವಿತರಣೆ, ಮುಖ್ಯಕಾರ್ಯನಿವಾಹಕರು ನಿರ್ವಹಿಸಬೇಕಾದ ಶಾಸನಾತ್ಮಕ ಕರ್ತವ್ಯಗಳು, ಮುಖ್ಯಕಾರ್ಯನಿರ್ವಾಹಕರು ಆಡಳಿತ ಮಂಡಳಿಯ ನಿರ್ದೇಶಕರು, ಸಿಬ್ಬಂದಿಗಳು ಮತ್ತು ಸದಸ್ಯರ ನಡುವೆ ಸಮನ್ವಯ ಕಾಯುವುದರ ಕುರಿತು ಮಾಹಿತಿ ನೀಡಿರರು ಹಾಗೂ ಸೌಹಾರ್ದ ಸಹಕಾರಿಗಳ ಚುನಾವಣೆ, ಕಲಂ 34ರ ಮಾಹಿತಿ, ಸೌಹಾರ್ದ ಸಹಕಾರಿಗಳು ಸಲ್ಲಿಸಬೇಕಾದ ಲೆಕ್ಕಪರಿಶೋಧನಾ ವರದಿ ಹಾಗೂ ವಾರ್ಷಿಕ ಸಾಮಾನ್ಯ ಸಭೆ ಮತ್ತು ಆಡಳಿತ ಮಂಡಳಿಯ ನಡುವಳಿಯ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ಹೆಚ್ ರವರು ಮಾಹಿತಿ ನೀಡಿದರು.

ಮತ್ತೋರ್ವ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ವೀರೇಶ ಹಿರೇಮಠರವರು ಸೌಹಾರ್ದ ಸಹಕಾರಿಗಳು ನಿರ್ವಹಿಸಬೇಕಾದ ಲೆಕ್ಕಪತ್ರಗಳು, ಅಢಾವೆ ಪತ್ರಿಕೆಯ (Balance Sheet), ಲಾಭ–ಹಾನಿ ಪತ್ರಿಕೆಯ ವಿಶ್ಲೇಷಣೆ ಮತ್ತು ಲಾಭ ವಿಂಗಡಣೆಯ ಕುರಿತು ಮಾಹಿತಿ ನೀಡಿದರು.



**ಬೀದರ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಪ್ರಾಂತೀಯ ಕಚೇರಿ ಕಲಬುರಗಿ ವತಿಯಿಂದ ಬೀದರ ಜಿಲ್ಲೆಯ ಹೊಸದಾಗಿ ನೋಂದಣಿಯಾದ ಸೌಹಾರ್ದ ಸಹಕಾರಿಗಳ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕರಿಗಾಗಿ ಒಂದು ದಿನದ ಪ್ರವೇಶ ತರಬೇತಿಯನ್ನು ನಗರದ ಸಂತೋಷ ಫ್ಯಮಲಿ ಹೋಟೆಲ್ ನಲ್ಲಿ ನಡೆಯಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ ಅವರು ನೇರವೆರಿಸಿ ಮಾತನಾಡಿದರು. ಸಹಕಾರಿಗಳು ಗುಣಮಟ್ಟದಿಂದ ಕಾರ್ಯನಿರ್ವಹಿಸ ಬೇಕಾದರೆ ತರಬೇತಿಗಳು ಅಗತ್ಯವಾಗಿದೆ. ಹೊಸದಾಗಿ ನೋಂದಣಿಯಾದ ಸಹಕಾರಿಗಳು ಪ್ರಾರಂಭದ ಹಂತದಲ್ಲಿ ಉತ್ತಮ ಆಡಳಿತ ಮತ್ತು ದಾಖಲಾತಿಗಳನ್ನು ಅಳವಡಿಸಿಕೊಂಡರೆ ಸಹಕಾರಿಯ ಕಾರ್ಯಚಟುವಟಿಕೆ ಹೆಚ್ಚುವ ಮೂಲಕ ಸದಸ್ಯರಿಗೆ ಹೆಚ್ಚಿನ ಸೇವೆಗಳನ್ನು ನೀಡಬಹುದಾಗಿದೆ ಎಂದರು. ಬೀದರ ಜಿಲ್ಲೆಯು ಸಹಕಾರಿಯ ಬೆಳವಣಿಗೆ ಉತ್ತಮವಾಗಿದು ಪ್ರತಿ ವರ್ಷ ಸೌಹಾರ್ದ ಸಹಕಾರಿಗಳ ಸಂಖ್ಯೆ ಹೆಚ್ಚುತ್ತಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇದರ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್ ಅವರು ಮಾತನಾಡಿ ಸೌಹಾರ್ದ ಸಹಕಾರಿಗಳು ತಮ್ಮ ದುಡಿಯುವ ಬಂಡವಾಳವನ್ನು ಹೆಚ್ಚಿಸಿಕೊಂಡು ಸಹಕಾರಿಯ ಸಂಪನ್ಮೂಲ ಕ್ರೂಡಿಕರಿಸಿಕೊಳ್ಳಲು ಸಲಹೆ ನೀಡಿದರು. ನಿರ್ದೇಶಕರಾದ ಶ್ರೀ ರಾಜಶೇಖ ನಾಗಮುರ್ತಿ ಮಾತನಾಡಿ ತರಬೇತಿ ಸಹಕಾರಿಗಳ ಗುಣಮಟ್ಟವನ್ನು ಹೆಚ್ಚಿಸಲು ಸಹಾಯಕವಾಗಲಿದೆ ಇದರ ಸದುಪಯೋಗ ಪಡೆದುಕೊಳ್ಳಲು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ಸಹಕಾರ ರತ್ನ ಪ್ರಶಸ್ತಿ ಪಡೆದ ಸಹಕಾರ ಮಹಾ ಮಹಾಮಂಡಳದ ನಿರ್ದೇಶಕಿಯಾದ ಶ್ರೀಮತಿ ಶಕುಂತಲಾ ಬೆಲ್ದಾಳೆ ಅವರಿಗೆ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದಿಂದ ಆತ್ಮೀಯ ಸನ್ಮಾನ ಮಾಡಲಾಯಿತ್ತು. ಸನ್ಮಾನ ಸ್ವೀಕರಿಸಿ ಮಾತನಾಡಿ ಪ್ರತಿಯೊಂದು ಕ್ಷೇತ್ರದಲ್ಲಿಯು ಪುರುಷರೊಂದಿಗೆ ಸರಿಸಮಾನ ಕಾರ್ಯಗಳನ್ನು ಮಾಡುತ್ತಿದ್ದಾಳೆ ಸಹಕಾರಿರಂಗದಲ್ಲಿ ಹೆಚ್ಚಿನ ಅವಕಾಶಗಳಿದು ಅವುಗಳನ್ನು ಬಳಸಿಕೊಳ್ಳಲು ಸಲಹೆ ನೀಡಿದರು. ಬೀದರ ನಂತಹ ಹಿಂದುಳಿದ ಭಾಗದಿಂದ ಸಹಕಾರ ಕ್ಷೇತ್ರದ ಸೇವೆಯನ್ನು ಗುರುತಿಸಿ ಸಹಕಾರ ರತ್ನ ಪ್ರಶಸ್ತಿ ನೀಡಿರುವುದಕ್ಕೆ ರಾಜ್ಯ ಸರ್ಕಾರಕ್ಕೆ ಮುಖ್ಯ ಮಂತ್ರಿಗಳಿಗೆ, ಸಹಕಾರ ಸಚಿವರಿಗೆ ಸಹಕಾರ ಇಲಾಖೆ ಅಧಿಕಾರಿಗಳಿಗೆ ಧನ್ಯವಾದಗಳು ತಿಳಿಸಿದರು. ನನ್ನನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಅವರಿಗೆ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್ ಅವರಿಗೆ ಬೀದರನ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ವೀರಶಟ್ಟಿ ಇವರು ನಡೆಸಿಕೊಟ್ಟರು.

ಇಂದಿನ ತರಬೇತಿಯಲ್ಲಿ ಸೌಹಾರ್ದ ಕಾಯ್ದೆ ನಿಯಮ, ಮತ್ತು ಸಹಕಾರಿಯ ಬೈಲಾಗಳಲ್ಲಿನ ಅವಕಾಶಗಳು ಮತ್ತು ಅಧ್ಯಕ್ಷರ ಮುಖ್ಯ ಕಾರ್ಯನಿರ್ವಾಹಕರ ಕರ್ತವ್ಯ ಜವಾಬ್ದಾರಿಯ ಕುರಿತು ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ವಿವರವಾಗಿ ಮಾಹಿತಿ ನೀಡಿದರು. ಹೊಸ ಸಹಕಾರಿಗಳ ಸಮಸ್ಯೆಗಳ ಕುರಿತು ಸಂವಾದ ನಡೆಸಿಕೊಟ್ಟರು. ಎರಡನೇ ಅವಧಿಯಲ್ಲಿ ಸಹಕಾರಿಗಳು ನಿರ್ವಹಿಸಬೇಕಾದ ಲೆಕ್ಕಪತ್ರಗಳು ಸಾಲದ ದಾಖಲೆಗಳು ಮತ್ತು ಲೆಕ್ಕಪರಿಶೋಧನೆ ಅಗತ್ಯ ದಾಖಲೆಗಳ ಕುರಿತು ಲೆಕ್ಕಪರಿಶೋಧಕರಾದ ಶ್ರೀ ಸೂರ್ಯಕಾಂತ ತೋರಣ ಇವರು ಮಾಹಿತಿ ನೀಡಿದರು. ಮುಖ್ಯ ಕಾರ್ಯನಿರ್ವಾಹಕರಿಗೆ ಕ್ಯಾಸ್ ಬುಕ್ಕ ಲೆಡ್ಜರ್ ಓಚರ್ ಗಳ ಕುರಿತು ಪ್ರಾಯೋಗಿಕವಾಗಿ ತಿಳಿಸಿಕೊಟ್ಟರು. ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ಜಗನಾಥ ಕರಂಜೆ, ಶ್ರೀ ಶ್ರೀಕಾಂತ ಸ್ವಾಮಿ, ಶ್ರೀ ನಂದಾವಿವೇಕಾನಂದ ಮುಖ್ಯ ಕಾರ್ಯನಿರ್ವಾಹಕಾರದ ಶ್ರೀ ಅಮೃತ ಹೊಸಮನಿ, ಈ ತರಬೇತಿ ಕಾರ್ಯಗಾರದಲ್ಲಿ ಜಿಲ್ಲೆಯ 15 ಸೌಹಾರ್ದ ಸಹಕಾರಿಗಳಿಂದ 34 ಜನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದರು.

# ಜನವರಿ 11 ರಂದು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಸಮಾವೇಶ ಉದ್ಘಾಟನೆಗೆ ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತರಾಮನ್

## - ಶ್ರೀ ರಮೇಶ ವೈದ್ಯ



ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಸಮಸ್ಯೆಗಳಿಗೆ ಪರಿಹಾರವನ್ನು ಪಡೆದುಕೊಳ್ಳುವ ಹಿನ್ನಲೆಯಲ್ಲಿ ದಿನಾಂಕ 11.01.2020 ರಂದು ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಒಂದು ದಿನದ ಸಮಾವೇಶವನ್ನು ಉದ್ಘಾಟನೆ ಮಾಡಿ ಪಟ್ಟಣ ಸಹಕಾರ ಬ್ಯಾಂಕುಗಳ ಪದಾಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಲು ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತರಾಮನ್ ರವರು ಆಗಮಿಸಲಿದ್ದಾರೆ ಎಂದು ಸಹಕಾರ ಭಾರತೀಯ ರಾಷ್ಟ್ರೀಯ ಅಧ್ಯಕ್ಷ ಶ್ರೀ ರಮೇಶ ವೈದ್ಯರವರು ತಿಳಿಸಿದ್ದಾರೆ.

ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಈಗಾಗಲೇ ಸಂಪರ್ಕಿಸಿ ಸಮಕ್ಷಮ ಭೇಟಿ ಆಗಿ ವಿಷಯಗಳನ್ನು ತಿಳಿಸುವ ಹಾಗೂ ಸಮಸ್ಯೆಗಳನ್ನು ಅರಿಯುವ ಕಾರ್ಯಕ್ರಮವನ್ನು ಸಹಕಾರ ಭಾರತೀಯ ರಾಜ್ಯದ ಪದಾಧಿಕಾರಿಗಳು ಕೈಗೊಂಡಿದ್ದಾರೆ. ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳು ಈ ಸಮಾವೇಶದಲ್ಲಿ ಸಕ್ರೀಯವಾಗಿ ಭಾಗವಹಿಸಿ ಸಮಾವೇಶ ಯಶಸ್ಸಿಗೆ ಸಹಕರಿಸಬೇಕೆಂದು ಶ್ರೀಯುತ ರಮೇಶ ವೈದ್ಯರವರು ಹಾಗೂ ಸಹಕಾರ ಭಾರತೀಯ ಪದಾಧಿಕಾರಿಗಳಾದ ಶ್ರೀ ಸತೀಶ್ಚಂದ್ರ, ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಶ್ರೀ ರಾಜಶೇಖರ ಶೀಲವಂತ್ ಇವರುಗಳು ವಿನಂತಿಸಿಕೊಂಡಿದ್ದಾರೆ.

# ಉಡುಪಿಯಲ್ಲಿ ಡಿಸೆಂಬರ 21ಕ್ಕೆ ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ

**ಉಡುಪಿ:** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಆಶ್ರಯದಲ್ಲಿ ದಿನಾಂಕ 21.12.2019ರಂದು ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ ಸೌಹಾರ್ದ ಸ್ಪೂರ್ತಿ – 2019 ನಡೆಯಲಿದೆ. ಸೌಹಾರ್ದ ಇತಿಹಾಸದಲ್ಲಿ ಮೊದಲ ಕಾರ್ಯಕ್ರಮ ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಹಂಗಾರಕಟ್ಟೆ ಚೇತನಾ ಹೈಸ್ಕೂಲ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಜಿಲ್ಲೆಯ 3000ಕ್ಕೂ ಅಧಿಕ ಸಹಕಾರಿಗಳು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಲು 7 ತಾಲ್ಲೂಕುಗಳನ್ನು 7 ವಲಯಗಳನ್ನಾಗಿ ರಚಿಸಿ ಸಹಕಾರಿಯ 7 ಬಣ್ಣಗಳ ಸಮವಸ್ತ್ರ ಧರಿಸಿ, ಸಹಕಾರಿಯ ಧ್ವಜ ಹಿಡಿಸು ಕ್ರೀಡೋತ್ಸವಕ್ಕೆ ಚಾಲನೆ ನೀಡಲಾಗುವುದು. ಕಾರ್ಯಕ್ರಮಕ್ಕೆ ಗೃಹ ಹಾಗೂ ಸಹಕಾರಿ ಸಚಿವರಾದ ಶ್ರೀ ಬಸವರಾಜು ಬೊಮ್ಮಾಯಿ, ಮೀನುಗಾರಿಕೆ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಜಿಲ್ಲೆಯ ಎಲ್ಲಾ ಶಾಸಕರು ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಬೇರೆ ಬೇರೆ ಕಂಪನಿಗಳ ವಸ್ತು ಪ್ರದರ್ಶನ ನಡೆಯಲಿದೆ.

# ಮಂಗಳೂರಿನಲ್ಲಿ ಜನವರಿ 1 ರಂದು ಸೌಹಾರ್ದ ಸಹಕಾರಿ ದಿನಾಚರಣೆ ಅಂಗವಾಗಿ ಸೌಹಾರ್ದ ಸಹಕಾರಿಗಳ ಸಮಾವೇಶ

**ದಕ್ಷಿಣ ಕನ್ನಡ :** ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ದಕ್ಷಿಣ ಕನ್ನಡ ಇದರ ಆಶ್ರಯದಲ್ಲಿ ದಿನಾಂಕ 01.01.2020 ರಂದು ಸೌಹಾರ್ದ ಸಹಕಾರಿಗಳ ಸಮಾವೇಶ ನಡೆಯಲಿದೆ. ಸಮಾವೇಶವು ಮಂಗಳೂರಿನ ಟೌನ್‌ಹಾಲ್‌ನಲ್ಲಿ ನಡೆಯಲಿದೆ. ದಕ್ಷಿಣ ಕನ್ನಡ ಜಿಲ್ಲೆಯ 1000 ಸಾವಿರಕ್ಕೂ ಹೆಚ್ಚಿನ ಸೌಹಾರ್ದ ಸಹಕಾರಿಗಳು ಭಾಗವಹಿಸಲಿದ್ದಾರೆ.

ಸಮಾವೇಶದಲ್ಲಿ ಸೌಹಾರ್ದ ಸಹಕಾರಿ ಸೇರಿದಂತೆ ಸಹಕಾರ ಕ್ಷೇತ್ರಕ್ಕೆ ಅನುಕೂಲವಾಗುವಂತಹ ಸಿಬಿಲ್ ಮಾದರಿಯ ತಂತ್ರಾಂಶವು ಅನಾವರಣಗೊಳ್ಳಲಿದೆ. ಸಮಾವೇಶದಲ್ಲಿ ಗೃಹ ಹಾಗೂ ಸಹಕಾರಿ ಸಚಿವರಾದ ಶ್ರೀ ಬಸವರಾಜು ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಹಾಗೂ ಮೀನುಗಾರಿಕೆ ಸಚಿವ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಜಿಲ್ಲೆಯ ಸಂಸದರಾದ ಶ್ರೀ ನಳೀನ್ ಕುಮಾರ್ ಕಟೀಲು, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ, ಶಾಸಕರು ಹಾಗೂ ಜಿಲ್ಲೆಯ ಹಿರಿಯ ಸಹಕಾರಿಗಳು ಭಾಗವಹಿಸಲಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾವೇಶವನ್ನು ಯಶಸ್ವಿಗೊಳಿಸಲು ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಪ್ರಕಟಣೆ ಮೂಲಕ ಕೋರಿದೆ.

# "ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜಮೆಂಟ ಡಿಪ್ಲೋಮಾ"
## 2ನೇ ತಂಡದ ಪ್ರವೇಶ ಅರ್ಜಿಗಳ ಆಹ್ವಾನ
## ಸೌಹಾರ್ದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಿದ್ಯಾರ್ಥಿಗಳಿಗೆ, ಸಹಕಾರಿಗಳಿಗೆ 6 ತಿಂಗಳ ದೂರ ಶಿಕ್ಷಣ ಕೋರ್ಸ"
## 1ನೇ ಜನವರಿ 2020 ರಿಂದ ಪ್ರಾರಂಭ

## Applications called for 2nd Batch of "Diploma in Cooperation and Banking Management"(DCBM) 6 Months Distance Education Course starts from 1st January 2020

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ 6 ತಿಂಗಳ ದೂರ ಶಿಕ್ಷಣ "ಡಿಪ್ಲೋಮಾ ಇನ್ ಕೋ–ಆಪರೇಶನ್ & ಬ್ಯಾಂಕಿಂಗ ಮೆನೇಜಮೆಂಟ"ನ 2ನೇ ತಂಡದ ಕೋರ್ಸ್‌ನ್ನು ಇದೇ ಜನವರಿ 2020 ರಿಂದ ಪ್ರಾರಂಭಿಸಲಾಗುತ್ತದೆ.

ಈ ಕೋರ್ಸ 6 ತಿಂಗಳು ಅವಧಿಯದ್ದಾಗಿದೆ. 6 ವಿಷಯಗಳಿರುತ್ತವೆ. ಒಂದು ಕೇಸ್‌ಸ್ಟಡಿ ಇರುತ್ತದೆ. ಪ್ರತಿ ವಿಷಯಕ್ಕೆ ತಲಾ 100 ಅಂಕಗಳು, ಕೇಸ್‌ಸ್ಟಡಿಗೆ 40 ಅಂಕಗಳು ಹಾಗೂ ಕಂಟ್ಯಾಕ್ಟ ಕ್ಲಾಸ್‌ಗಳಿಗೆ 60 ಅಂಕಗಳು (ಒಟ್ಟು 100 ಅಂಕಗಳು) ಒಟ್ಟು 700 ಅಂಕಗಳು. ಪ್ರತಿ 2 ತಿಂಗಳಿಗೆ ಒಂದು ಬಾರಿ 2 ದಿನಗಳ ಒಂದು ಕಂಟ್ಯಾಕ್ಟ ಕ್ಲಾಸ್ ನಡೆಸಲಾಗುವುದು. 6 ತಿಂಗಳ ಕೊನೆಯಲ್ಲಿ ಪರೀಕ್ಷೆ ನಡೆಸಲಾಗುವುದು. ನಂತರ ಫಲಿತಾಂಶ ಪ್ರಕಟಿಸಲಾಗುವುದು. ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.

ಈ ಕೋರ್ಸನ್ನು 1997 ರ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು, ವಿದ್ಯಾರ್ಥಿಗಳು, ಸಹಕಾರಿಗಳು ಹಾಗೂ ಯುವಕ ಯುವತಿಯರು ಮಾಡಬಹುದಾಗಿದೆ.

**ಕನಿಷ್ಠ ವಿದ್ಯಾರ್ಹತೆ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಪೂರ್ಣಗೊಂಡಿರಬೇಕು.**

ಕೋರ್ಸ ಫೀ : ರೂ. 5000/–(ಪ್ರವೇಶ ಹಾಗೂ ವ್ಯವಸ್ಥಾಪನಾ ಶುಲ್ಕ ರೂ 2000/– ಕೋರ್ಸ ಮೆಟಿರಿಯಲ್ ರೂ 2000/– ಪರೀಕ್ಷಾ ಫೀ 1000/–) ಅಧ್ಯಯನ ಸಾಹಿತ್ಯ ಕಲಿಕೆ ಹಾಗೂ ಪರೀಕ್ಷೆಗಳನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯ ಆಯ್ಕೆಗೆ ಅವಕಾಶವಿರುತ್ತದೆ. ಅರ್ಜಿಯ ಜೊತೆಗೆ ಕೋರ್ಸ ಫೀರೂ 5,000/– (18% ಜಿಎಸ್‌ಟಿ ರೂ.1170/–) ಗಳು ಸೇರಿದಂತೆ ಒಟ್ಟು ರೂ. 6170/– ನ್ನು ಕಳುಹಿಸುವುದು.

2 ದಿನಗಳ 3 ಕಂಟ್ಯಾಕ್ಟ ತರಗತಿಗಳ ವೆಚ್ಚ ತಲಾ ರೂ 500 ಗಳಂತೆ ಒಟ್ಟು ರೂ 1500/– ಕಂಟ್ಯಾಕ್ಟ ತರಗತಿಗಳನ್ನು ಶಿಬಿರಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮತ್ತು ಸಂಯುಕ್ತ ಸಹಕಾರಿಯು ನಿಗದಿಪಡಿಸುವ ರಾಜ್ಯದ ಇತರೆ ಕೇಂದ್ರಗಳಲ್ಲಿಯೂ ಸಹ ನಡೆಸಲಾಗುವುದು. ಕಂಟ್ಯಾಕ್ಟ ತರಗತಿ ಸಮಯದಲ್ಲಿ ಅಭ್ಯರ್ಥಿಗಳ ಊಟ, ವಸತಿ ವ್ಯವಸ್ಥೆಯನ್ನು ಮಾಡಲಾಗುವುದು. 3 ಕಂಟ್ಯಾಕ್ಟ ತರಗತಿಗಳ ವೆಚ್ಚ ರೂ 1500/– ಪ್ರತೇಕ.

**ಡಿಸೆಂಬರ 31 ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.**

ಅರ್ಜಿ ಫಾರ್ಮ ಹಾಗೂ ಕೋರ್ಸ ವಿವರಣಾ ಪತ್ರ ಪಡೆಯಲು ಸ್ವವಿವರ ಹಾಗೂ ರೂ. 100 ಗಳನ್ನು ಪೋಸ್ಟಲ್ ಆರ್ಡರ್‌ನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಬೆಂಗಳೂರು ಇವರ ಹೆಸರಿಗೆ ಪಡೆದು ಕೇಂದ್ರ ಕಛೇರಿಗೆ ಅಥವಾ ಪ್ರಾಂತೀಯ ಕಛೇರಿಗಳಿಗೆ ಕಳುಹಿಸುವುದು.

ಹೆಚ್ಚಿನ ವಿವರಗಳಿಗೆ ಜಿಲ್ಲಾ ಸಂಪರ್ಕ ವ್ಯಕ್ತಿಗಳ ಹೆಸರುಗಳ ನಂಬರ್‌ಗಳನ್ನು www.souharda.coop ಹಾಗೂ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಕೇಂದ್ರ ಕಛೇರಿ :080–23378375–80, 23474408, 23573291, ಬೆಂಗಳೂರು ಪ್ರಾಂತೀಯ ಕಛೇರಿ: 080–23525546, ಮೈಸೂರು ಪ್ರಾಂತೀಯ ಕಛೇರಿ: 0821–2332299, ಬೆಳಗಾವಿ ಪ್ರಾಂತೀಯ ಕಛೇರಿ: 0831–2401551, ಕಲಬುರಗಿ ಪ್ರಾಂತೀಯ ಕಛೇರಿ: 08472–270222.

ಸಹಿ/–

(ಶರಣಗೌಡ ಜಿ. ಪಾಟೀಲ)

**ವ್ಯವಸ್ಥಾಪಕ ನಿರ್ದೇಶಕರು**

# ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 41(ಸಿ) ರಂತೆ ದಾವೆಗಳನ್ನು ಇತ್ಯರ್ಥಗೊಳಿಸಲು ಸಹಕಾರಿಗಳ ನಿಬಂಧಕರ ಆದೇಶ ಪ್ರತಿ

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)
**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52**

**ವಿಷಯ:** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 41(ಸಿ)ರಂತೆ ದಾವೆಗಳನ್ನು ಇತ್ಯರ್ಥಗೊಳಿಸಲು ಮಧ್ಯಸ್ಥಗಾರರನ್ನು ನೇಮಕ ಮಾಡುವ ಬಗ್ಗೆ.

**ಉಲ್ಲೇಖ:**
1. ಈ ಕಛೇರಿ ಆದೇಶ ಸಂ:ಆರ್‌ಸಿಎಸ್/ಆರ್ ಎಸ್ ಆರ್/ಡಿಎಂಸಿಡಿ-8/04/2003-04, ದಿನಾಂಕ:03.05.2017.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರ ಪ್ರಸ್ತಾವನೆ ಸಂ: ಕರಾಸೌಸಂಸ:ಆ:ದಾಪಂನ್ಯಾ-6:2019-20, ದಿನಾಂಕ:12-08-2019.

<><><><>

**ಪ್ರಸ್ತಾವನೆ:-**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 39ರ ಅವಕಾಶಗಳಿಗೆ ಒಳಪಟ್ಟು ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ದಾಖಲಾಗುವಂತಹ ವಿವಾದಗಳ ಪೈಕಿ ಆರ್ಥಿಕ ವ್ಯವಹಾರಗಳಿಗೆ ಸೀಮಿತವಾದಂತೆ ದಾಖಲಾಗುವ ವಿವಾದಗಳ ಶೀಘ್ರವಿಲೇವಾರಿ ಸಲುವಾಗಿ ಮಧ್ಯಸ್ಥದಾರರನ್ನು ನೇಮಕ ಮಾಡುವಂತೆ ಉಲ್ಲೇಖ(2)ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಪ್ರಸ್ತಾವನೆ ಸಲ್ಲಿಸಿರುತ್ತಾರೆ ಹಾಗೂ ವಕೀಲ ವೃತ್ತಿಯಲ್ಲಿ 05 ವರ್ಷ ಅನುಭವವುಳ್ಳವರನ್ನು ಗೌರವ ಮಧ್ಯಸ್ಥದಾರರನ್ನಾಗಿ ನೇಮಕ ಮಾಡುವಂತೆ ಕೋರಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ರವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ವಕೀಲ ವೃತ್ತಿಯಲ್ಲಿ 05 ವರ್ಷ ಅನುಭವವುಳ್ಳ ವಕೀಲರನ್ನು ಹಾಗೂ ಸಹಕಾರ ಇಲಾಖೆಯ ನಿವೃತ್ತ ಅಧಿಕಾರಿಗಳನ್ನು ಸಹ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997. ಕಲಂ-41(1)(ಸಿ)ರ ಅವಕಾಶದನ್ವಯ ಮಧ್ಯಸ್ಥದಾರರನ್ನಾಗಿ 2019-20 ರಿಂದ 2021-22ನೇ ಸಾಲಿನ ಅವಧಿಗಳಿಗೆ ನೇಮಕ ಮಾಡುವ ಸಲುವಾಗಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**-: ಆದೇಶ :-**

**ಸಂಖ್ಯೆ: ಆರ್‌ಸಿಎಸ್/ಆರ್‌ಎಸ್‌ಆರ್/ಸೌಹಾರ್ದ/ಗೌ.ಮ/135/2019-20** **ದಿನಾಂಕ:08 -11-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಪ್ರಕರಣ 41(1)(ಸಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಶ್ರೀ ಎನ್.ಎಸ್.ಪ್ರಸನ್ನಕುಮಾರ್,ಭಾ.ಆ.ಸೇ, ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು. ಆದ ನಾನು ಸಹಕಾರ ಇಲಾಖೆಯ ನಿವೃತ್ತ ಅಧಿಕಾರಿಗಳನ್ನು ಹಾಗೂ ವಕೀಲರ ವೃತ್ತಿಯಲ್ಲಿ ಐದು ವರ್ಷಗಳ ಅನುಭವ ಹೊಂದಿರುವಂತಹ ವಕೀಲರನ್ನು 2019-20 ರಿಂದ 2021-22 ನೇ ಸಾಲಿನ ಅವಧಿಗೆ ಸೀಮಿತವಾದಂತೆ ಕರ್ನಾಟಕ ಸೌಹಾರ್ದ ಸಹಕಾರಿಗಳ ಅಧಿನಿಯಮ, 1997 ಕಲಂ-39ರ ಅವಕಾಶದಂತೆ ಸಂಬಂಧಪಟ್ಟ ಕಾರ್ಯವ್ಯಾಪ್ತಿ ನಿಬಂಧಕರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇಲ್ಲಿ ದಾಖಲಾಗುವಂತಹ ಆರ್ಥಿಕ ವ್ಯವಹಾರಗಳ ಗರಿಷ್ಠ

03(ಮೂರು) ಲಕ್ಷ ವಿವಾದಿತ ಮೊತ್ತಕ್ಕೆ ಸೀಮಿತವಾದಂತಹ ವಿವಾದಗಳನ್ನು ಇತ್ಯರ್ಥಪಡಿಸುವ ಸಲುವಾಗಿ ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವವರನ್ನು ಆಯಾ ಜಿಲ್ಲೆಯ ಮಧ್ಯಸ್ಥಗಾರರನ್ನಾಗಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಧ್ಯಸ್ಥಗಾರರನ್ನಾಗಿ ನೇಮಕ ಮಾಡಲಾಗಿದೆ.

<u>ಷರತ್ತು ಮತ್ತು ನಿಬಂಧನೆಗಳು:-</u>

1. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಪ್ರಕರಣ 39ರನ್ವಯ ರಾಜ್ಯದ/ಜಿಲ್ಲೆ ಹಾಗೂ ಉಪವಿಭಾಗೀಯ ಕಛೇರಿಗಳಲ್ಲಿ/ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ದಾಖಲಾಗಿರುವ ಹಾಗೂ ದಾಖಲಾಗುವ ಸೌಹಾರ್ದ ಅಧಿನಿಯಮಕ್ಕೆ ಸಂಬಂಧಿಸಿದ ದಾವೆಗಳನ್ನು ಈ ಅಧಿಸೂಚನೆಯ ಅನುಬಂಧದಂತೆ ನೇಮಿಸಲಾದ ಮಧ್ಯಸ್ಥಗಾರರಿಗೆ ಜೇಷ್ಠತೆಯ ಆಧಾರದ ಮೇಲೆ ದಾವೆಗಳನ್ನು ಇತ್ಯರ್ಥಗೊಳಿಸಲು ವಹಿಸತಕ್ಕದ್ದು.
2. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 41(1)(ಬಿ)ರಂತೆ ಅಧಿಕಾರವನ್ನು ಸರ್ಕಾರ ಇಲಾಖೆಯ ವಿವಿಧ ಪ್ರಾಧಿಕಾರಿಗಳಿಗೆ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇದರ ನಿಯಮ 441ರವರುಗಳಿಗೆ ಪ್ರತ್ಯಾಯೋಜಿಸಲಾಗಿರುವ ಆಯಾ ಕಛೇರಿಗಳಲ್ಲಿ ಸೌಹಾರ್ದ ಸಂಸ್ಥೆಗಳು ನಿಬಂಧಕರ ನಾಮಿನಿಗಳಿಗೆ, ಸರ್ಕಾರಕ್ಕೆ ಮತ್ತು ಇತರೆ ವೆಚ್ಚಗಳಿಗೆ ಸಂದಾಯ ಮಾಡಲು ಪ್ರತಿ ದಾವೆ ಮೊತ್ತದ ಮೌಲ್ಯಕ್ಕನುಗುಣವಾಗಿ ದಾವಾ ಶುಲ್ಕ ಮತ್ತು ಸಾದಿಲ್ವಾರು ವೆಚ್ಚವನ್ನು ಜಮಾ ಮಾಡತಕ್ಕದ್ದು.
3. ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದ ದಾವೆಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಪ್ರಕರಣ 41(1) ರಂತೆ ಇತ್ಯರ್ಥಗೊಳಿಸುವುದು ಮತ್ತು ಸೌಹಾರ್ದ ನಾಮಿನಿಗಳಿಗೆ ಅವರು ಇತ್ಯರ್ಥ ಮಾಡುವ ಪ್ರತಿ ಪ್ರಕರಣದಲ್ಲೂ ದಾವಾ ಶುಲ್ಕದ ನಾಲ್ಕನೇ ಮೂರು (3/4) ಭಾಗವನ್ನು ಮಧ್ಯಸ್ಥಗಾರರಿಗೆ ಮತ್ತು ನಾಲ್ಕನೇ ಒಂದು ಭಾಗವನ್ನು ಸರ್ಕಾರಕ್ಕೆ ಜಮಾ ಮಾಡತಕ್ಕದ್ದು.
4. ನೇಮಕಗೊಂಡಿರುವ ಸೌಹಾರ್ದ ಸಹಕಾರಿಗಳ ಮಧ್ಯಸ್ಥಗಾರರು ಸೌಹಾರ್ದ ಸಂಸ್ಥೆಗಳು ದಾಖಲಿಸುವ ದಾವೆಗಳನ್ನು ಸಂಬಂಧಪಟ್ಟ ಆಯಾ ಸೌಹಾರ್ದ ಸಂಸ್ಥೆಗಳ ನೊಂದಾಯಿತ ಕಛೇರಿಗಳಲ್ಲಿ ವಿಚಾರಣೆ ನಡೆಸಿ ಇತ್ಯರ್ಥಪಡಿಸಿ ಆದೇಶಗಳನ್ನು ನೀಡತಕ್ಕದ್ದು.
5. ದಾವೆ ಇತ್ಯರ್ಥ ಮಾಡಿದ ಆದೇಶದ ಮಾಹಿತಿಯ ತಿಳಿವಳಿಕೆ ಪತ್ರವನ್ನು ಉಭಯಪಕ್ಷಗಾರರಿಗೆ ನೋಂದಾಯಿತ ಅಂಚೆ ಮೂಲಕ ಜಾರಿ ಮಾಡುವುದು ಮತ್ತು ಪೂರ್ಣ ಮೂಲ ದಾವಾ ಕಡತಗಳನ್ನು ಸಂಬಂಧಪಟ್ಟ ಸೌಹಾರ್ದ ನಿಬಂಧಕರಿಗೆ ಇತ್ಯರ್ಥಗೊಳಿಸಿದ ಎರಡು ದಿನಗಳೊಳಗಾಗಿ ಸಲ್ಲಿಸತಕ್ಕದ್ದು.
6. ಕರ್ನಾಟಕ ಸರ್ಕಾರ ಮತ್ತು ಸೌಹಾರ್ದ ನಿಬಂಧಕರು ಕಾಲ ಕಾಲಕ್ಕೆ ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲನೆ ಮಾಡತಕ್ಕದ್ದು.

ಈ ಅಧಿಸೂಚನೆಯನ್ನು ನನ್ನ ಸಹಿ ಮತ್ತು ಈ ಕಛೇರಿಯ ಮುದ್ರೆಯೊಂದಿಗೆ ದಿನಾಂಕ:-08-11-2019ರಂದು ಹೊರಡಿಸಿದೆ.

Prasanna

ಎನ್.ಎಸ್.ಪ್ರಸನ್ನ ಕುಮಾರ್ ಭಾ.ಆ.ಸೇ.
ಸಹಕಾರಿಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

ಇವರಿಗೆ

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಈ ಅಧಿಸೂಚನೆ ಹಾಗೂ ಅನುಬಂಧಗಳನ್ನು ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸಿ ಮುದ್ರಿತ 500 ಪ್ರತಿಗಳನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

**ಜಿಲ್ಲಾವಾರು ಮಧ್ಯಸ್ಥಗಾರರ ನೇಮಕಾತಿ ವಿವರಗಳನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಪಡೆಯಬಹುದು.**

## ಸೌಹಾರ್ದ ಸಹಕಾರಿಗಳು ಹಾಗೂ ಕ್ರೆಡಿಟ್ ಸಹಕಾರ ಸಂಸ್ಥೆಗಳಲ್ಲಿ ಅಳವಡಿಸಬಹುದಾದ ಬಡ್ಡಿಯೇತರ ಆದಾಯ ಮೂಲಗಳು

1. ಜನೌಷಧಿ ಕೇಂದ್ರಗಳನ್ನು ತೆರೆಯುವುದು.
2. ವೆಸ್ಟರ್ನ್ ಮನಿ ಟ್ರಾನ್ಸ್‌ಫರ್ ವ್ಯವಹಾರ.
3. ಇ–ಸ್ಟಾಂಪಿಂಗ್ ವ್ಯವಹಾರ.
4. ಸದಸ್ಯರಿಗೆ ಚಿಟ್ ಫಂಡ್ ವ್ಯವಹಾರ ನಡೆಸುವುದು.
5. ಸದಸ್ಯರಿಗೆ ಪಾನ್ ಕಾರ್ಡ್, ಆರೋಗ್ಯ ಕಾರ್ಡ್, ಪಾಸ್ ಪೋರ್ಟ್ ಹಾಗೂ ಹಿರಿಯ ನಾಗರಿಕ ಕಾರ್ಡ್ ಇತ್ಯಾದಿಗಳನ್ನು ಮಾಡಿಸಿಕೊಡುವುದು.
6. ಸದಸ್ಯರ ಆರೋಗ್ಯ ವಿಮೆ ಹಾಗೂ ವಾಹನಗಳ ವಿಮೆ ಮಾಡಿಸಿಕೊಡುವುದು.
7. ಸೋಲಾರ್ ವಿದ್ಯೂತ್ ಅಳವಡಿಕೆ.
8. ಒನ್ ಸ್ವಾಪ್ ಶಾಪ್ ವ್ಯವಹಾರ.
9. ರೇಲ್ವೇ, ಬಸ್ ಹಾಗೂ ವಿಮಾನ ಟಿಕೇಟುಗಳ ಸೇವೆ.
10. ಸದಸ್ಯರಿಂದ ಉತ್ಪಾದಿತ ವಸ್ತುಗಳ ಖರೀದಿ ಮತ್ತು ಮಾರಾಟ
11. ಮೊಬೈಲ್ ರೀಚಾರ್ಜ್, ಸದಸ್ಯರಿಗೆ ಸ್ಥಳೀಯವಾಗಿ ಅನುಕೂಲ ಕಲ್ಪಿಸ ಬಹುದಾದ ಇತರೆ ಚಟುವಟಿಕೆಗಳು.
12. ಪಡಿತರ, ರಸಗೊಬ್ಬರ, ಕೃಷಿ ಉಪಕರಣಗಳ ಮಾರಾಟ.

## ಅಮೃತ ಮಹೋತ್ಸವದ ಸಂಭ್ರಮ – ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್



**ಬೆಲ್ಲದ ಬಾಗೇವಾಡಿ :** ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕು ಪ್ರಾರಂಭವಾಗಿ ದಿನಾಂಕ 25.11.2019ಕ್ಕೆ 75 ವರ್ಷಗಳು ಪೂರ್ಣಗೊಂಡು "ಅಮೃತ ಮಹೋತ್ಸವ" ಆಚರಿಸಿಕೊಂಡಿತು. ಈ ಶುಭ ಸಂದರ್ಭದಲ್ಲಿ ಗ್ರಾಮದ ಹಿರಿಯರು, ಗಣ್ಯರು, ಅಧ್ಯಕ್ಷರು, ಉಪಾಧ್ಯಕ್ಷರು ನಿರ್ದೇಶಕರು ಹಾಗೂ ಸಿಬ್ಬಂದಿಗಳು ಸೇರಿ ಬ್ಯಾಂಕಿನಲ್ಲಿ ಶ್ರೀ ಮಹಾಲಕ್ಷ್ಮೀ ಪೂಜೆಯನ್ನು ನೇರವೆರಿಸುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸದರಿ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಉಮೇಶ ವಿ. ಕತ್ತಿ ಶಾಸಕರು, ಹುಕ್ಕೇರಿ ಮತ ಕ್ಷೇತ್ರ ಹಾಗೂ ಶ್ರೀ ದುರ್ಯೋಧನ ಎಮ್. ಐಹೊಳೆ ಶಾಸಕರು ರಾಯಭಾಗ ಮತ ಕ್ಷೇತ್ರ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿ ಬ್ಯಾಂಕಿನ ಇತಿಹಾಸದ ಬಗ್ಗೆ ಚರ್ಚಿಸಿ ಬ್ಯಾಂಕು ಸ್ಥಾಪನೆಯಾದಾಗಿನಿಂದಲೂ ಸಮಾಜಮುಖಿಯಾಗಿ ಕೆಲಸ ನಿರ್ವಹಿಸುವುದರ ಜೊತೆಗೆ ಗ್ರಾಹಕರಿಗೆ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವದು ಹೆಮ್ಮೆಯ ಸಂಗತಿ ಎನ್ನುತ್ತಾ ಬ್ಯಾಂಕು ಮುಂದಿನ ದಿನಗಳಲ್ಲಿ ಹೊಸ ಹೊಸ ತಂತ್ರಜ್ಞಾನದೊಂದಿಗೆ ಉತ್ತರೋತ್ತರವಾಗಿ ಬೆಳೆದು ರೈತರಿಗೆ, ವ್ಯಾಪಾರಸ್ಥರಿಗೆ ಹಾಗೂ ಯುವಜನರ ಬದುಕಿಗೆ ದಾರಿ ದೀಪವಾಗುವುದರೊಂದಿಗೆ ಶತಮಾನೋತ್ಸವವನ್ನು ಆಚರಿಸಿಕೊಳ್ಳಲಿ ಎಂದು ಆಶಿಸಿದರು. ಇದೇ ಸಂದರ್ಭದಲ್ಲಿ ಬ್ಯಾಂಕಿನ ವತಿಯಿಂದ ವಿಕಲಚೇತನ ಮಕ್ಕಳಿಗೆ ತ್ರಿಚಕ್ರ ಬೈಸಿಕಲ್ ವಿತರಿಸಲಾಯಿತು.

ಬ್ಯಾಂಕು ಜಿಲ್ಲೆಯ ವಿವಿಧ ಗ್ರಾಮ / ಪಟ್ಟಣಗಳಲ್ಲಿ 16 ಶಾಖೆಗಳೊಂದಿಗೆ ಸಂಪೂರ್ಣ ಗಣಕೀಕೃತ ಸೇವೆಯನ್ನು ಸಲ್ಲಿಸುವುದರೊಂದಿಗೆ ಸುಮಾರು 300 ಕೋಟಿಗಳಷ್ಟು ದುಡಿಯುವ ಬಂಡವಾಳ ಹೊಂದಿ ಜಿಲ್ಲೆಯ ಬಡವರ, ಹಿಂದುಳಿದ ವರ್ಗ ಹಾಗೂ ರೈತರಿಗೆ ಉತ್ತಮ ಸೇವೆಯನ್ನು ಸಲ್ಲಿಸುತ್ತಿರುವುದು ಪ್ರಶಂಸನೀಯ ವಿಷಯವಾಗಿದೆ ಮತ್ತು ಬರುವ ದಿನಗಳಲ್ಲಿ ಸದಸ್ಯರ ಅಭಿಪ್ರಾಯದಂತೆ ಅಮೃತ ಮಹೋತ್ಸವ ಸಮಾರಂಭವನ್ನು ಅತೀ ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹನ ಸ. ಮುನ್ನೋಳಿ ಇವರು ಹೇಳಿದರು. ಕೊನೆಯದಾಗಿ ಮಾತನಾಡಿದ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸುಜೀತ ಮ. ಕತ್ತಿ ಇವರು ಬ್ಯಾಂಕಿನ ಈ ಸಾಧನೆಗೆ ಕಾರಣೀಕರ್ತರಾದ ಸಂಸ್ಥೆಯ ಸಂಸ್ಥಾಪಕರಿಗೂ, ಬ್ಯಾಂಕಿನ ಪ್ರಗತಿಗೆ ಮಾರ್ಗದರ್ಶನ ಮಾಡುತ್ತಿರುವ ಸನ್ಮಾನ್ಯ ಶ್ರೀ ಉಮೇಶ ವಿ. ಕತ್ತಿ, ಶಾಸಕರು, ಹುಕ್ಕೇರಿ ಮತಕ್ಷೇತ್ರ ಮತ್ತು ಮಾಜಿ ಸಚಿವರು, ಸನ್ಮಾನ್ಯ ಶ್ರೀ ರಮೇಶ ವಿ. ಕತ್ತಿ, ಅಧ್ಯಕ್ಷರು, ಡಿ.ಸಿ.ಸಿ ಬ್ಯಾಂಕ ಬೆಳಗಾವಿ ಹಾಗೂ ಮಾಜಿ ಸಂಸದರು ಚಿಕ್ಕೋಡಿ ಇವರಿಗೆ ಹಾಗೂ ಎಲ್ಲ ಸದಸ್ಯರಿಗೆ, ಠೇವುದಾರರಿಗೆ, ಹಿತಚಿಂತಕರಿಗೆ, ನಿರ್ದೇಶಕ ಮಂಡಳಿ ಸದಸ್ಯರಿಗೆ ಮತ್ತು ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಎಲ್ಲ ಸಿಬ್ಬಂದಿಯವರಿಗೆ ಬ್ಯಾಂಕಿನ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿದರು.

## ಉದ್ಘಾಟನೆ



**ಉಡುಪಿ** : ಶ್ರೀ ಲಕ್ಷ್ಮೀನಾರಾಯಣ ಸೌಹಾರ್ದ ಸಹಕಾರಿ ನಿ. ಉಡುಪಿ ಇದರ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್. ಕೆ ಇವರು ಉದ್ಘಾಟಿಸಿದರು.



**ಕಾರವಾರ:** ದಿನಾಂಕ 27.11.2019ರಂದು ಸೈಂಟ್ ಮಿಲಾಗ್ರಿಸ್ ಸೌಹಾರ್ದ ಸಹಕಾರಿ ಕಾರವಾರ ಇದರ ಶಿರಸಿ ನಗರ ದೇವಿಕೆರೆಯಲ್ಲಿರುವ ಶಾಖೆಯ ನೂತನ ಕಟ್ಟಡದ ಸ್ಥಳಾಂತರ ಸಮಾರಂಭದ ಉದ್ಘಾಟನಾ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ, ಇವರು ನೆರವೇರಿಸಿದರು.

## ಸ್ನೇಹ ಸಂಪರ್ಕ ಸಭೆ



**ಬೆಂಗಳೂರು** : ದಿನಾಂಕ 24.11.2019 ರಂದು ಜನನಿಧಿ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸದರಿ ಸಹಕಾರಿಯ ಗ್ರಾಹಕರ ಮತ್ತು ಸದಸ್ಯರ ಸ್ನೇಹ ಸಂಪರ್ಕ ಸಭೆಯು ಮದ್ದೂರು ರಸ್ತೆ ಕುಣಿಗಲ್ ನ ದುರ್ಗಾ ಪಾರ್ಟಿ ಹಾಲ್‌ನಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಜನನಿಧಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಜಪ್ಪ ಹೆಚ್.ಎಲ್, ಉಪಾಧ್ಯಕ್ಷರಾದ ಶ್ರೀ ನಾಗರಾಜು ಆರ್. ನಿರ್ದೇಶಕರುಗಳಾದ ಶ್ರೀಮತಿ ಜಯಲಕ್ಷ್ಮೀ, ಶ್ರೀ ಬಿ.ಸಿ. ಕೃಷ್ಣ, ಶ್ರೀ ದಿನೇಶ್ ಎಸ್. ಆರ್, ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಪ್ರತಾಪ ಚಂದ್ರ ಬಿ. ಶೆಟ್ಟಿ, ಸಹಕಾರಿಯ ಸದಸ್ಯರು, ಗ್ರಾಹಕರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



**ಕೊಪ್ಪಳ** : ಶ್ರೀ ಸಿಂಧೂರ ಪತ್ತಿನ ಸೌಹಾರ್ದ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮವು ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಹಿರೇಖೇಡ್ ಗ್ರಾಮದಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ.ರಾಜಶೇಖರ್ ,ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ .ಬಿ.ಪತ್ತಾರ್ ,ಆರ್.ಡಿ.ಸಿ.ಸಿ ಬ್ಯಾಂಕಿನ ಮಾನ್ಯ ಉಪಾಧ್ಯಕ್ಷರಾದ ಶ್ರೀ ಪಂಪಾಪತಿ ಸಾಹುಕಾರರವರು ಉಪಸ್ಥಿತರಿದ್ದರು.

## ಭೇಟಿ



**ಯಾದಗಿರಿ:** ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವೈ.ಟಿ ಪಾಟೀಲ ಇವರು ಶ್ರೀ ರಾಚೋಟಿ ವೀರಣ್ಣ ಸೌಹಾರ್ದ ಸಹಕಾರಿ ನಿ., ಯಾದಗಿರಿ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಯ ಬಗ್ಗೆ ಚರ್ಚಿಸಿ ಮಾರ್ಗದರ್ಶನ ನೀಡಿದರು.

## ಸನ್ಮಾನ



**ಗೌರಿಬಿದನೂರು** : ಸಮೃದ್ಧಿ ಮಹಿಳಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಗಂಗಲಕ್ಷ್ಮಮ್ಮ ಇವರಿಗೆ INTERNATIONAL ACHIEVERS COUNCIL ನಿಂದ DOCTOR OF SOCIAL WORK LIFE TIME AWARD ನೀಡಿ ಗೌರವಿಸಲಾಯಿತು.

# ವ್ಯಕ್ತಿತ್ವ ವಿಕಸನ ಕಾರ್ಯಕ್ರಮ



**ಪುತ್ತೂರು:** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ದರ್ಬೆ ಪುತ್ತೂರು ಇದರ ಸಹಸಂಸ್ಥೆ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.) ಪುತ್ತೂರು ಇದರ ವತಿಯಿಂದ ಜ್ಞಾನದೀಪ ಎಜುಕೇಶನ್ ಚಾರಿಟೇಬಲ್ ಟ್ರಸ್ಟ್ (ರಿ.) ಬೆಳ್ಳಾರೆ, ಇಂಟರ್ಯಾಕ್ಟ್ ಕ್ಲಬ್ ಬೆಳ್ಳಾರೆ ಇದರ ಸಹಭಾಗಿತ್ವದಲ್ಲಿ ಯುವ ಸಬಲೀಕರಣ ಮತ್ತು ವ್ಯಕ್ತಿತ್ವ ವಿಕಸನ ಯೋಜನೆಯಡಿ ಶ್ರೀ ರಾಮಕುಂಜೇಶ್ವರ ಪ್ರೌಢಶಾಲೆಯ ಮುಖ್ಯೋಪಧ್ಯಾಯರಾದ ಶ್ರೀ ಸತೀಶ್ ಭಟ್ ಬಿಳಿನೆಲೆ ಇವರಿಂದ 10ನೇ ತರಗತಿ ಮತ್ತು ಪಿ.ಯು.ಸಿ ವಿದ್ಯಾರ್ಥಿಗಳಿಗೆ "ಪರೀಕ್ಷೆ ಎದುರಿಸುವುದು ಹೇಗೆ" ಎಂಬ ವಿಷಯದ ಕುರಿತು ತರಬೇತಿ ಕಾರ್ಯಕ್ರಮವು ದಿನಾಂಕ 23-11-2019ರಂದ ಜ್ಞಾನದೀಪ ಸಂಸ್ಥೆಯಲ್ಲಿ ಸಭಾಭವನದಲ್ಲಿ ನಡೆಯಿತು

ಕಾರ್ಯಕ್ರಮದ ಉದ್ಘಾಟನೆಯನ್ನು ರೋಟರಿ ಕ್ಲಬ್ ಬೆಳ್ಳಾರೆ ಟೌನ್ ಇದರ ಪೂರ್ವಾಧ್ಯಕ್ಷರಾದ ರೊ। ನವೀನ್ ಕುಮಾರ್ ತಂಬಿನಮಕ್ಕಿ ದೀಪಪ್ರಜ್ವಲನೆ ಮಾಡಿ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿಯಾದ ಶ್ರೀ ದಿನಕರ ನಾಯಕ್ ಟ್ರಸ್ಟ್‌ನ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಹಾಗೂ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದೊಂದಿಗೆ ಶ್ರೇಷ್ಠ ಜೀವನ ನಿರ್ವಹಣೆಯ ಮಹೋನ್ನತ ಗುರಿಯ ಈಡೇರಿಕೆಗೆ ಇಂತಹ ತರಬೇತಿ ಕಾರ್ಯಕ್ರಮಗಳ ಸಂಪೂರ್ಣ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಹೇಳಿ ಶುಭಹಾರೈಸಿದರು.

"ಪರೀಕ್ಷೆ ಎದುರಿಸುವುದು ಹೇಗೆ ?" ಎಂಬ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸತೀಶ್ ಭಟ್ ಬಿಳಿನೆಲೆಯವರು ಉಪನ್ಯಾಸದೊಂದಿಗೆ ವಿವಿಧ ರೀತಿಯ ಕ್ರಿಯಾತ್ಮಕ ಚಟುವಟಿಕೆಗಳೊಂದಿಗೆ ಪ್ರಾಯೋಗಿಕವಾಗಿ ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಜ್ಞಾನದೀಪ ಎಜುಕೇಶನ್ ಚಾರಿಟೇಬಲ್ ಟ್ರಸ್ಟ್‌ನ ನಿರ್ದೇಶಕರಾದ ಶ್ರೀ ಉಮೇಶ್ ಮಣಿಕ್ಕಾರರವರು ಮಾತನಾಡಿ ವಿದ್ಯಾರ್ಥಿಗಳು ಕಾರ್ಯಕ್ರಮದ ಸಂಪೂರ್ಣ ಸದುಪಯೋಗವನ್ನು ಪಡೆದುಕೊಂಡು ಮುಂದಿನ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶವನ್ನು ತರುವುದರ ಮೂಲಕ ಇಂತಹ ತರಬೇತಿ ಕಾರ್ಯಕ್ರಮಕ್ಕೆ ಮತ್ತಷ್ಟು ಔಚಿತ್ಯವನ್ನು ತಂದುಕೊಡಬೇಕು ಎಂದು ಹೇಳಿ ಶುಭಹಾರೈಸಿದರು. ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಬಿಪಿನ್ ಚಂದ್ರ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಜ್ಞಾನದೀಪ ಸಂಸ್ಥೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಬೆಳ್ಳಾರೆ ಶಾಖೆಯ ವ್ಯವಸ್ಥಾಪಕರಾದ ಶ್ರೀ ಶಿವಪ್ರಸಾದ್ ಪೆರುವಾಜೆ ವಂದಿಸಿದರು. ಸಂಸ್ಥೆಯ ಉಪನ್ಯಾಸಕರಾದ ಶ್ರೀ ಗಣೇಶ್ ಕಾರ್ಯಕ್ರಮವನ್ನು ನಿರೂಪಿಸಿದರು.



**ಬೆಳಗಾವಿ:** ಕಿತ್ತೂರ ರಾಣಿ ಚನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೈಲಹೊಂಗಲ ಪ್ರಧಾನ ಕಚೇರಿಯಲ್ಲಿ ದಿನಾಂಕ: 14.11.2019 ರಂದು ಸಹಕಾರ ಸಪ್ತಾಹದ ಸಂದರ್ಭದಲ್ಲಿ ಮಹಿಳಾ ಸೇನೆಯ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಬಂದ ರಾಜ್ಯದ ಹೆಮ್ಮೆಯ ಕುವರಿ ಜ್ಯೋತಿ ಮಹಾಬಳೇಶ್ವರ ಹಂಚಿನಮನಿ ಇವಳನ್ನು ಸಹಕಾರಿಯ ಅಧ್ಯಕ್ಷರಾದ ಡಾ॥ ವ್ಹಿ. ಎಸ್. ಸಾಧುನವರ ಇವರು ರೂ. 10,000/- ಗಳನ್ನು ನಗದು ಪುರಸ್ಕಾರ ನೀಡಿ ಸನ್ಮಾನ ಮಾಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಮಲ್ಲನಾಯ್ಕ ಪಾಟೀಲ, ಮುಖ್ಯಕಾರ್ಯನಿರ್ವಾಹಕರಾದ ಎಮ್ ವ್ಹಿ ಸಾಲಿಮಠ, ಪರಪ್ಪಾ ತಟವಟಿ, ರಾಜು ರಾಮಣ್ಣವರ, ರಾಜು ಹೊಸಮನಿ ಹಾಗೂ ಸಹಕಾರಿಯ ಆಡಳಿತ ಹಾಗೂ ಶಾಖಾ ಸಿಬ್ಬಂದಿ ಮುಂತಾದವರು ಉಪಸ್ಥಿತರಿದ್ದರು.

## ಅಧ್ಯಕ್ಷರು - ಉಪಾಧ್ಯಕ್ಷರ ಆಯ್ಕೆ

### ಶ್ರೀ ಮಾರಿಕಾಂಬ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ



ಶ್ರೀ ಎಸ್ ಜ್ಞಾನೇಶ್ವರ್
ಅಧ್ಯಕ್ಷರು



ಶ್ರೀ ಎನ್.ಎಸ್. ಪ್ರಕಾಶ್
ಉಪಾಧ್ಯಕ್ಷರು



**ತಿಪಟೂರು:** ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿಯ 2020ನೇ ವರ್ಷದ ಕ್ಯಾಲೆಂಡರ್ ಅನ್ನು ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸದಸ್ಯರು ಬಿಡುಗಡೆ ಮಾಡಿದರು.

# ರಾಜ್ಯದ ಸೌಹಾರ್ದ ಸಹಕಾರಿಗಳಿಂದ 66ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ




**ಹುಲ್ಲೋಳಿ:** ಅರಿಹಂತ ಅರ್ಬನ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿಯಲ್ಲಿ 14.11.2019 ರಂದು 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ನಿಮಿತ್ಯವಾಗಿ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಮಣ್ಣಾ ನಾಗಪ್ಪಾ ಗೋಟುರಿ ಇವರು ಸಹಕಾರಿ ಧ್ವಜ ಹಾರಿಸಿ ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಸಹಕಾರ ಸಪ್ತಾಹದ ಬಗ್ಗೆ ಹಾಗೂ ಸೌಹಾರ್ದ ಸಹಕಾರಿಯ ಕಾಯ್ದೆ ಮತ್ತು ಕಾರ್ಯ ಕೆಲಸಗಳ ಬಗ್ಗೆ ಸಮಾಜದ ಕೆಳಮಟ್ಟದ ಜನರಿಗೆ ತಲುಪಿಸಿ ಅದರ ಅರಿವು ಅವರಿಗೆ ಮೂಡಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ನಮ್ಮ ಸಹಕಾರಿಯ ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಹಾಗೂ ಪ್ರಧಾನ ಕಾರ್ಯದರ್ಶಿಯವರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

**ಕಾರವಾರ:** ಜೈ ಶ್ರೀ ಅಂಬೆ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಸದಾಶಿವಗಡ, ಕಾರವಾರ. ಇದರ ಪ್ರಧಾನ ಕಚೇರಿಯಲ್ಲಿ ದಿನಾಂಕ 14.11.2019 ರಂದು 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಆಗಮಿಸಿದ್ದ ಗ್ರಾಮ ಪಂಚಾಯತಿಯ ಸದಸ್ಯರಾದ ಶ್ರೀಮತಿ ರೀನಾ ವಾಯಂಗಣಕರ್ ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ದಿಕ್ಷಾ ಕಲ್ಗುಟಕರ, ಸಹಕಾರಿಯ ಆಡಳಿತ ಮಂಡಳಿಯವರು, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಿಂಗರಾಜ ಕಲ್ಗುಟಕರವರು ಮತ್ತು ಸಹಕಾರಿಯ ಸಿಬ್ಬಂದಿವರ್ಗದವರು ಸೇರಿ ವಿಜೃಂಭನೆಯಿಂದ ನೆರವೇರಿಸಿದರು.





**ಕೊಪ್ಪಳ :** ಶ್ರೀ ಗುರು ಸೃಷ್ಟಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಗಿಣಿಗೇರಾ ಸಹಕಾರಿಯಿಂದ ದಿನಾಂಕ 14–11–2019 ರಂದು ಗುರುವಾರ 66ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಅಂಗವಾಗಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರಾವ್ ಕುಲಕರ್ಣಿ ಇವರುಗಳು ಸಹಕಾರಿಯ ಧ್ವಜಾರೋಹಣ ಮಾಡಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಸಿಬ್ಬಂದಿ ವರ್ಗದವರು ಹಾಗೂ ಪಿಗ್ಮಿ ಸಂಗ್ರಾಹಕರು ಉಪಸ್ಥಿತರಿದ್ದರು. 'ಜೈ ಸಹಕಾರ" ಕಾರ್ಯಕ್ರಮವನ್ನು ಸಂಸ್ಥೆಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶಿವಕುಮಾರ ಏಣಿಗಿ ನೆರವೇರಿಸಿಕೊಟ್ಟರು.



**ಕೊಪ್ಪಳ:** ದಿನಾಂಕ 14.11.2019 ರಂದು ಕನಕದಾಸ ಪತ್ತಿನ ಸೌಹಾರ್ದ ಸಹಕಾರಿ ನಿ, ಹನಮಸಾಗರದ ಕೇಂದ್ರ ಕಛೇರಿಯಲ್ಲಿ ಸಹಕಾರ ಸಪ್ತಾಹ ಪ್ರಯುಕ್ತ ಸಹಕಾರಿಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಡಾ॥ ಬಸವರಾಜ ಅಕ್ಕಿಯವರು ಸಹಕಾರಿಯ ಪಿತಾಮಹ ದಿ॥ ಶ್ರೀ ಸಿದ್ದನಗೌಡ ರಾಮನಗೌಡ ಪಾಟೀಲ ರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವದರ ಜೊತೆಗೆ ಧ್ವಜಾರೋಹಣ ಮಾಡುವುದರ ಮೂಲಕ ಸಹಕಾರ ಸಪ್ತಾಹ ಆಚರಿಸಲಾಯಿತು.

ಕೇಂದ್ರ ಕಛೇರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ದ್ಯಾಮಣ್ಣ ಬಿಂಗಿಯವರು ಮಾತನಾಡಿ ಸಹಕಾರ ಕ್ಷೇತ್ರಕ್ಕೆ ವಿಶೇಷ ಪ್ರೋತ್ಸಾಹ ನೀಡಿದ ಮಾಜಿ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರು ರವರ ಸ್ಮರಣಾರ್ಥ ನವೆಂಬರ 14 ರಂದು ಪ್ರತಿ ವರ್ಷ ಸಹಕಾರ ಸಪ್ತಾಹ ಆಚರಣೆ ಮಾಡಲಾಗುತ್ತದೆ ವಿಶೇಷವಾಗಿ ಈ ವರ್ಷ ಕೊಪ್ಪಳ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳ ಒಕ್ಕೂಟ ಪ್ರಾರಂಭವಾಗಿರುವದರಿಂದ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಶಕ್ತಿ ಬಂದಂತಾಗಿದೆ ಎಂದು ಹೇಳಿದರು.

ಅದೇ ರೀತಿ ಸಪ್ತಾಹದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಅಂದಾನಪ್ಪ ಬಿಂಗಿ ಹಾಗೂ ನಿರ್ದೇಶಕರಾದ ಶ್ರೀ ಭರಮಪ್ಪ ಬಿಂಗಿ, ಶ್ರೀ ಬಸಪ್ಪ ಕಿಲ್ಲೇದ, ಶ್ರೀ ನಾಗರಾಜ ಹಕ್ಕಿ, ಶ್ರೀ ಹನಮಂತಪ್ಪ ಹಕ್ಕಿ, ಶ್ರೀ ಶಿವಪ್ಪ ವಾಲ್ಮೀಕಿ ಹಾಗೂ ಕೇಂದ್ರ ಕಛೇರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ದ್ಯಾಮಣ್ಣ ಬಿಂಗಿ ಶಾಖಾ ವ್ಯವಸ್ಥಾಪಕರಾದ ಅಮೀನಸಾಬ ಕಲಾದಗಿ, ಮುತ್ತಪ್ಪ ಬಿಂಗಿ ಸಿಬ್ಬಂದಿಯವರಾದ ಮಲ್ಲಮ್ಮ ವಡಗೇರಿ, ಶ್ರೀದೇವಿ ಅಂಗಡಿ, ದೊಡ್ಡಪ್ಪ ಕಿಲ್ಲೇದ ಹಾಗೂ ಎಲ್ಲ ಪಿಗ್ಮಿ ಸಂಗ್ರಹಕಾರರು ಹಾಜರಿದ್ದರು.



**ಶಿವಮೊಗ್ಗ:** ಶ್ರೀ ಭಾಂತೇಶ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಶಿಕಾರಿಪುರ ತಾಲ್ಲೂಕು ಶಿವಮೊಗ್ಗ ಜಿಲ್ಲೆ ಇದರ ವತಿಯಿಂದ 66ನೇ ಅಖಿಲ ಭಾರತ ಸಹಕಾರ ಸಪ್ತಾಹ ದಿನಾಚರಣೆಯನ್ನು 14–11–2019 ರಂದು ಅಧ್ಯಕ್ಷರಾದ ಶ್ರೀ ಶಿವಮೂರ್ತಿ ಗುಡ್ಡಳ್ಳಿ ಇವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.



**ಹಾವೇರಿ:** ಶ್ರೀ ಚೆನ್ನೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಣೇಬೆನ್ನೂರು ಸದರಿ ಸಹಕಾರಿಗೆ 66ನೇ ಅಖಿಲ ಭಾರತ ಸಹಕಾರ ಸಪ್ತಾಹ 2019 ಧಾರವಾಡದಲ್ಲಿ ನಡೆದ ಸಮಾವೇಶದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಮತ್ತು ಜಿಲ್ಲಾ ಸಹಕಾರ ಯೂನಿಯನ್ ಸಹಯೋಗದೊಂದಿಗೆ ನಡೆದ ಕಾರ್ಯಕ್ರಮದಲ್ಲಿ 2018–19ನೇ ಸಾಲಿನ ಹಾವೇರಿ ಜಿಲ್ಲೆಯ "ಅತ್ಯುತ್ತಮ ಸಹಕಾರಿ" ಪ್ರಶಸ್ತಿ ದೊರಕಿದೆ.



**ಬಳ್ಳಾರಿ:** ಶ್ರೀ ಶುಭಧನಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ ಸಹಕಾರಿಯಿಂದ 66ನೇ ಅಖಿಲ ಭಾರತ ಸಹಕಾರ ಸಪ್ತಹ ಆಚರಣೆ.

**ಕುಷ್ಟಗಿ:** ಮಂಜುನಾಥ ಪತ್ತಿನ ಸೌಹಾರ್ದ ಸಹಕಾರಿಯಿಂದ 66ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ.




**ವಿಜಯಪುರ:** ದಿನಾಂಕ 14.11.2019 ರಂದು ನವಜೀವನ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯಿಂದ 66ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್.ಕೌಲಗಿ ಇವರು ಧ್ವಜಾರೋಹಣ ಮಾಡುವುದರ ಮೂಲಕ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸಿ.ಆರ್ ಡೋಣುರು, ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕರು ಹಾಗೂ ಸಹಕಾರಿಯ ಸಿಬ್ಬಂದಿಯವರು ಉಪಸ್ಥಿತರಿದ್ದರು.




**ಬಳ್ಳಾರಿ:** ಆರ್.ಡಿ.ಸೋನಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಹೊಸಪೇಟೆಯಲ್ಲಿ 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯನ್ನು ಮಾಡಲಾಯಿತು. ಈ ಸಂಧರ್ಭದಲ್ಲಿ ಸರ್ಕಾರಿ ಶಾಲೆಗಳಿಗೆ ಉಚಿತವಾಗಿ ಪ್ರಥಮ ಚಿಕಿತ್ಸೆ ಪೆಟ್ಟಿಗೆಯನ್ನು ವಿತರಿಸಲಾಯಿತು.



**ರಾಮನಗರ :** ದಿನಾಂಕ 19.11.2019 ರಂದು ರಾಮನಗರ ಜಿಲ್ಲೆಯ ಅವ್ವೆರಹಳ್ಳಿಯಲ್ಲಿ ನಡೆದ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಪರವಾಗಿ ರಾಮನಗರ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಂ ರವರು ಭಾಗವಹಿಸಿದ್ದರು, ಸದರಿ ಕಾರ್ಯಕ್ರಮದಲ್ಲಿ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರು ಹಾಗೂ ರಾಮನಗರ ಜಿಲ್ಲಾ ಸಹಕಾರಿ ಯೂನುಯನ್ ಅಧ್ಯಕ್ಷರಾದ ಶ್ರೀ ಸಿ, ಲಿಂಗರಾಜು ರವರನ್ನು ಸನ್ಮಾನಿಸಲಾಯಿತು.



**ಚಿಕ್ಕೋಡಿ:** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಪ್ರಾಂತೀಯ ಕಛೇರಿ ಬೆಳಗಾವಿ, ಬೆಳಗಾವಿ ಜಿಲ್ಲಾ ಸಹಕಾರ ಯೂನಿಯನ್ ನಿ., ಬೆಳಗಾವಿ ಹಾಗೂ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಇವರುಗಳ ಸಂಯುಕ್ತ ಆಶ್ರಯದಲ್ಲಿ 66ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ – 2019 ಭಾನುವಾರ ದಿನಾಂಕ 17.11.2019 ರಂದು ಮುಂಜಾನೆ 10.30 ಗಂಟೆಗೆ ಚಿಕ್ಕೋಡಿ ಪಟ್ಟಣದ ಸಿ.ಎಲ್.ಇ ಸಂಸ್ಥೆಯ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಜರುಗಿತು. ಸದರಿ ಸಮಾರಂಭಕ್ಕೆ ಉದ್ಘಾಟಕರಾಗಿ ಶ್ರೀ ಮ.ನಿ.ಪ್ರ ಸಂಪಾದನಾ ಮಹಾಸ್ವಾಮಿಗಳು ಸಂಪಾದನಾ ಚರಮೂರ್ತಿಮಠ, ಚಿಕ್ಕೋಡಿ ಹಾಗೂ ಶ್ರೀ ಬಿ.ಡಿ. ಪಾಟೀಲ, ಅಧ್ಯಕ್ಷರು ಜಿಲ್ಲಾ ಸಹಕಾರ ಯೂನಿಯನ್ ನಿ.,, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಹಾಗೂ ಮುಖ್ಯ ಅತಿಥಿಗಳಾಗಿ ಶ್ರೀ ಜಗದೀಶ್ ಎಮ್ ಕವಟಗಿಮಠ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಅತಿಥಿಗಳಾಗಿ ಶ್ರೀ ಜಯಾನಂದ ಬಿ. ಜಾಧವ, ಅಧ್ಯಕ್ಷರು ಶ್ರೀ ಬೀರೇಶ್ವರ ಕೋ–ಆಪ್ ಕ್ರೆಡಿಟ್ ಸೋಸಾಯಿಟಿ ಲಿ., ಯಕ್ಸಂಬಾ (ಮಲ್ಟಿಸ್ಟೇಟ್) ಹಾಗೂ ಶ್ರೀ ಮಹೇಶ್ ಎ. ಭಾತೆ, ಅಧ್ಯಕ್ಷರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕರೋಶಿ, ಶ್ರೀ ಸುರೇಶ್ ಸಿ. ಶೆಟ್ಟಿ, ಉಪಾಧ್ಯಕ್ಷರು, ಶ್ರೀ ಮಹಾತ್ಮಾ ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಿಪ್ಪಾಣಿ ಹಾಗೂ ನಿರ್ದೇಶಕರಾದ ಶ್ರೀ ಗುರುನಾಥ ಕಂಕಣವಾಡಿ ಹಾಗೂ ಶ್ರೀ ಪ್ರವೀಣ ಕಾಂಬಳೆ ಮತ್ತು ಉಪನ್ಯಾಸಕರಾಗಿ, ಶ್ರೀ ಶಂಕರ ಕರಬಸನ್ನವರ, ಸಹಕಾರ ಸಂಘಗಳ ಅಭಿವೃದ್ಧಿ ಅಧಿಕಾರಿ, ಬೆಳಗಾವಿ ಉಪಸ್ಥಿತರಿದ್ದರು ಹಾಗೂ ಬೆಳಗಾವಿ ಜಿಲ್ಲಾ ಸಹಕಾರ ಯೂನಿಯನ್ ಸಿ.ಇ.ಓ ಶ್ರೀ ಎಸ್. ವ್ಹಿ ಹಿರೇಮಠ ಸ್ವಾಗತಿಸಿ, ಶ್ರೀ ಎಸ್. ಬಿ. ಹಜಾರೆ ನಿರೂಪಿಸಿ ವಂದಿಸಿದರು. ಈ ಸಂದರ್ಭದಲ್ಲಿ ಚಿಕ್ಕೋಡಿ ಹಾಗೂ ನಿಪ್ಪಾಣಿ ತಾಲ್ಲೂಕಿನ ಸಹಕಾರಿ ಸಂಸ್ಥೆಗಳ ಸಿ.ಇ.ಓ ಹಾಗೂ ಆಡಳಿತ ಮಂಡಲಿ ಸದಸ್ಯರು ಉಪಸ್ಥಿತರಿದ್ದರು

## 4ನೇ ವಾರ್ಷಿಕೋತ್ಸವ



**ಕೊಪ್ಪಳ:** ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ,. ಗಿಣಿಗೇರಿ, ಕೊಪ್ಪಳ ಸಹಕಾರಿಯ 4ನೇ ವಾರ್ಷಿಕೊತ್ಸವವನ್ನು ದಿನಾಂಕ 23.11.2019 ಶನಿವಾರದಂದು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಬೊಮ್ಮಣ್ಣ ಅಕ್ಕಸಾಲಿಗರು, ರವಿಕುಮಾರ ಗೊಡೆಕಾರ, ಶರಣಪ್ಪ ಶಿಲವಂತರು, ಸಂತೊಷ ದೇಶಪಾಂಡೆ ಉಪಸ್ಥಿತರಿದ್ದರು. ಕಾರ್ಯಕ್ರಮವು ಸಹಕಾರ ಗೀತೆಯೊಂದಿಗೆ ಪ್ರಾರಂಭವಾಯಿತು. ಈ ಸಂಗೀತವನ್ನು ಶ್ರೀ ಶರಣಪ್ಪ ಹ್ಯಾಟಿಯವರು ಹಾಡಿದರು. ಸಹಕಾರಿ ನಿರ್ದೇಶಕರಾದ ಪುಟ್ಟಪ್ಪ ವಾರದ ಅವರು ಕಾರ್ಯಕ್ರಮದ ಸ್ವಾಗತ ಕೋರಿದರು ಹಾಗೂ ಜ್ಯೋತಿ ಬೆಳಗಿಸಿ, ಕೇಕ್ ಕತ್ತರಿಸಿ, ಸಿಹಿ ಹಂಚುವದರ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು. ಸಹಕಾರಿ ನಿರ್ದೇಶಕರಾದ ಡಾ॥ ಬಸವರಾಜ ಪಿ. ಎಮ್ ಸಹಕಾರಿಯ ಪ್ರಾಸ್ತವಿಕ ನುಡಿದರು. ವೆಂಕಟೇಶ ಪೂಜಾರ ಇವರು ವಂದಿಸಿದರು.

## ಸನ್ಮಾನ



**ಬೆಳಗಾವಿ:** ಶ್ರೀ ಆಂಜನೇಯ ಸಂಕಲ್ಪ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಉದಯಕುಮಾರ ವಾಸುದೇವಪ್ಪ ಸೋಮನಟ್ಟಿ ಇವರಿಗೆ ಸಿರಿಗನ್ನಡ ರಾಷ್ಟ್ರೀಯ ಪ್ರತಿಷ್ಠಾನ(ರಿ) ಬೆಂಗಳೂರು – ಬೆಳಗಾವಿ ಇವರ ವತಿಯಿಂದ ನೀಡುವ 2019ರ ಸಹಕಾರ ರತ್ನ ಪ್ರಶಸ್ತಿಯನ್ನು ರವೀಂದ್ರ ಕಲಾಕ್ಷೇತ್ರ ಬೆಂಗಳೂರಿನಲ್ಲಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ದಿವ್ಯ ಸಾನಿದ್ಯ ಶ್ರೀ ಮ.ನಿ.ಸ್ವ ಪ್ರಭು ಚನ್ನಬಸವ ಮಹಾಸ್ವಾಮಿಗಳು ಮೋಟಗಿಮಠ, ಅಥಣಿ ಹಾಗೂ ಸಚಿವರಾದ ಶ್ರೀಮತಿ ಶಶಿಕಲಾ ಜೊಲ್ಲೆ, ಮುಂತಾದವರು ಉಪಸ್ಥಿತರಿದ್ದರು.

# ಬೀದರ ಸೌಹಾರ್ದ ಸಹಕಾರಿ ನಿಯೋಗ – ಸಹಕಾರಿ ಅಧ್ಯಯನಕ್ಕಾಗಿ ನೇಪಾಳಕ್ಕೆ ಭೇಟಿ



ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ವತಿಯಿಂದ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾದ್ಯಮ ಮಹಾಮಂಡಳ ಅಧ್ಯಕ್ಷರು ಹಾಗೂ ಬೀದರ ಒಕ್ಕೂಟ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್ ಅವರ ನೇತೃತ್ವದಲ್ಲಿ ಬೀದರ ಒಕ್ಕೂಟದ 9 ಜನ ನಿರ್ದೇಶಕರ ತಂಡ ನೇಪಾಳ ರಾಷ್ಟ್ರದ ಸಹಕಾರಿ ಕಾರ್ಯಚಟುವಟಿಕೆಯ ಕುರಿತು ಅಧ್ಯಯನ ಪ್ರವಾಸ ಕೈಗೊಳ್ಳಲಾಯಿತ್ತು. ನೇಪಾಳ ರಾಷ್ಟ್ರದ ಅಧ್ಯಯನ ಪ್ರವಾಸವನ್ನು ಸುಚನಾ ಚೌತಾರಿ ಸಂಚಾರಿ ಸಹಕಾರಿ ನಿ., ಕಾಠ್ಮಂಡು ಇದರ ನಿರ್ದೇಶಕಿ ಶ್ರೀಮತಿ ರಮಿಲಾ ಶ್ರೇತಾ ಅವರ ಮಾರ್ಗದರ್ಶನದಲ್ಲಿ ನಡೆಸಲಾಯಿತ್ತು. ಕಾಠ್ಮಂಡು ಮಹಾನಗರದ ಪ್ರತಿಷ್ಠಿತ ಸಹಕಾರಿ ಸಂಸ್ಥೆಗಳಾದ ಸುಚನಾ ಚೌತಾರಿ ಸಂಚಾರಿ ಸಹಕಾರಿ ನಿ., ಕಾಠ್ಮಂಡು, ಉಪಲಬ್ಧಿ ಬಹುಉದೇಶಿ ಸಹಕಾರಿ ಸಂಸ್ಥೆ, ಹಾಗೂ ಯುನಿಫಿಕೇಸನ್ ಸೇವಿಂಗ್ ಕ್ರೇಡಿಟ್ ಕೋ–ಆಪರೇಟಿವ್ ಲಿ., ಕಾಠ್ಮಂಡು, ಭೇಟಿ ನೀಡಿ ಉಪಲಬ್ದಿ ಬಹುಉದೇಶಿ ಸಹಕಾರಿ ಸಂಸ್ಥೆಯ ಕಛೇರಿಯಲ್ಲಿ ಅಧ್ಯಯನ ನಿಯೋಗಕ್ಕೆ ಆತ್ಮೀಯ ಸ್ವಾಗತ ನೀಡಿ ಭರಮಾಡಿಕೊಳ್ಳಲಾಯಿತ್ತು. ಅಧ್ಯಯನ ತಂಡದ ಕುರಿತು ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ನುಡಿದರು ಹಾಗೂ ನೇಪಾಳ ಸಹಕಾರಿಗಳ ಪರಿಚಯ ಮಾಡಿಕೊಟ್ಟರು. ಕರ್ನಾಟಕದ ನಿಯೋಗದ ಪರಿಚಯ ಹಾಗೂ ಭಾರತದಲ್ಲಿನ ಸಹಕಾರಿಯ ವ್ಯವಸ್ಥೆ ಮತ್ತು ಕಾರ್ಯಚಟುವಟಿಕೆಯ ಕರ್ನಾಟಕದ ಸೌಹಾರ್ದ ಕಾಯ್ದೆಯ ಕುರಿತು ನೇಪಾಳ ಸಹಕಾರಿಗಳಿಗೆ ಶ್ರೀ ಗುರುನಾಥ ಜ್ಯಾಂತಿಕರ ಮಾಹಿತಿ ನೀಡಿದರು. ನೇಪಾಳ ಸಹಕಾರಿ ಕಾಯ್ದೆ ಮತ್ತು ಸೂಚನಾ ಚೌತಾರಿ ಸಂಚಾರ ಕೋ–ಆಪರೇಟಿವ್ ಲಿ ಕಾಠ್ಮಂಡು ಕುರಿತು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿಪಿನ್ ಶರ್ಮಾ ಮಿಶ್ರಾ ಅವರು ವಿವರಿಸಿದರು. ಮುಖ್ಯವಾಗಿ ರಾಷ್ಟ್ರದ ಸಹಕಾರಿಗಳ ಪ್ರತಿಯೊಂದು ಸುದ್ದಿಯನ್ನು ಸಹಕಾರಿ ಸದಸ್ಯರಿಗೆ ತಲುಪಿಸುವ ಕಾರ್ಯ ಸೂಚನಾ ಚೌತಾರಿ ಸಂಚಾರ ಕೋ–ಆಪರೇಟಿವ್ ಮಾಡುತ್ತಿದೆ ಎಂದು ನುಡಿದರು. ಸಹಕಾರಿಗಳಿಗೆ ವಿಪುಲ ಅವಕಾಶಗಳಿದು ಈ ಮೂಲಕ ನೇಪಾಳ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಸಾಧಿಸುತ್ತಿದೆ ಎಂದರು. ಸಹಕಾರಿ ವ್ಯವಸ್ಥೆಯಲ್ಲಿಯ ಬಹುಉದ್ದೇಶಿ ಉದ್ದೇಶವನ್ನು ಹೊಂದಿ ಕಾರ್ಯನಿರ್ವಹಿಸುತ್ತಿರುವ ಉಪಲಬ್ದಿ ಬಹುಉದೇಶಿ ಸಹಕಾರಿ ಸಂಸ್ಥೆ ಲಿ., ಅಧ್ಯಕ್ಷರಾದ ಶ್ರೀ ದೇವರಾಜ ಶರ್ಮಾ ಅವರು ಮಾತನಾಡಿ ನಮ್ಮ ಸಹಕಾರಿಯ ಸದಸ್ಯರಿಗೆ ಅನುಕುಲವಾಗುವ ಉಪಯೋಗಕ್ಕೆ ಅವಶ್ಯಕ ವಸ್ತುಗಳನ್ನು ಸಹಕಾರಿಯ ಮೂಲಕ ಮಾರಾಟ ಮಾಡಲಾಗುವುದು. ಇದರಿಂದ ಸಹಕಾರಿಗೆ ವ್ಯವಹಾರವಾಗಿ ಲಾಭ ಬರುತ್ತದೆ ಎಂದರು. ನಮ್ಮ ಸಹಕಾರಿಗೆ ಅಧ್ಯಯನಕ್ಕೆ ಬಂದಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.

ನೇಪಾಳ ಸಹಕಾರಿ ಯುನಿಯನ್ ಸದಸ್ಯರಾದ ಶ್ರೀ ಅವುಲೇ ದುಯಿ ಮಾತನಾಡಿ ನೇಪಾಳ ರಾಷ್ಟ್ರದಲ್ಲಿ ಒಟ್ಟು 77 ಜಿಲ್ಲೆಗಳು ಇದ್ದು ಅದರಲ್ಲಿ 68 ಜಿಲ್ಲೆಗಳಲ್ಲಿ ಜಿಲ್ಲಾ ಯುನಿಯನ್ ಕಾರ್ಯನಿರ್ವಹಿಸುತ್ತಿವೆ ಉಳಿದ ಜಿಲ್ಲೆಗಳಲ್ಲಿ ಜಿಲ್ಲಾ ಯುನಿಯನ್ ಗಳನ್ನು ಸ್ಥಾಪಿಸಲಾಗುವುದು ಎಂದರು ನಮ್ಮ ಸಹಕಾರಿ ಕಾಯ್ದೆಯಲ್ಲಿ ತರಬೇತಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ ಅಲ್ಲದೆ ಪ್ರಾಥಮಿಕ ಸಹಕಾರಿಗಳು ಉಳಿತಾಯ ಮತ್ತು ಪತ್ತಿನ ಉದ್ದೇಶವೇ ಮುಖ್ಯವಾಗಿದೆ ಎಂದು ನುಡಿದರು. ನೇಪಾಳ ಸರ್ಕಾರವು ಸಹಕಾರಿಯ ಒಟ್ಟು ನಿವ್ವಳ ಲಾಭದಲ್ಲಿ ಮಹಾನಗರಗಳಿಗೆ ಶೇ. 20% ಮತ್ತು ನಗರ ಪ್ರದೇಶಗಳಿಗೆ 10% ಆದಾಯ ತೆರಿಗೆ ನೀಡಬೇಕಾಗಿರುತ್ತದೆ. ಗ್ರಾಮೀಣ ಭಾಗದ ಸಹಕಾರಿಗಳಿಗೆ ಇದರಿಂದ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಿದರು. ಚರ್ಚೆಯಲ್ಲಿ ಸೂಚನಾ ಚೌತಾರಿ ಸಂಚಾರ ಕೋ–ಆಪರೇಟಿವ್ ಲಿ., ಪ್ರಧಾನ ಸಂಪಾದಕರಾದ ಶ್ರೀ ಪುರುಷೋತ್ಮ ದಹಲೆ, ಸಂಚಾಲಕರಾದ ಶ್ರೀ ಚಂದ್ರಪ್ರಸಾದ ಡಕಲೆ ಸಿಬ್ಬಂದಿಗಳು ಉಪಸ್ಥಿತರಿದರು.

ಉಳಿತಾಯ ಮತ್ತು ಪತ್ತಿನ ಉದ್ದೇಶವನ್ನು ಹೊಂದಿರುವ ಯುನಿಫಿಕೇಶನ್ ಕೋ–ಆಪರೇಟಿವ್ ಲಿ., ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಯ ಮಾಹಿತಿಯನ್ನು ಅಧ್ಯಕ್ಷರಾದ ಕಮಲ್ ರಾಜ ಅವರು ವಿವರಿಸಿದರು ಸಹಕಾರಿಯ ಮುಖ್ಯ ಉದ್ದೇಶ ಎಂದರೆ ಸದಸ್ಯರಲ್ಲಿ ಉಳಿತಾಯ ಮಾಡುವುದಾಗಿದೆ ಸಹಕಾರಿಯ ಸಾಲಗಳು ಸಕಾಲದಲ್ಲಿ ಸದಸ್ಯರು ಮರುಪಾವತಿ ಮಾಡುವುದರಿಂದ ಉತ್ತಮ ಲಾಭದಲ್ಲಿದೆ ಎಂದರು. ಇದೇ ಸಂದರ್ಭದಲ್ಲಿ ಸಹಕಾರಿಯ ಸಿಬ್ಬಂದಿಗಳು ಹಾಜರಿದ್ದು ನಿಯೋಗದ ಸದಸ್ಯರಿಗೆ ಆತ್ಮೀಯ ಸ್ವಾಗತ ಕೋರಿ ಪರಸ್ಪರ ಮಾಹಿತಿ ವಿನಿಮಯ ಮಾಡಿದರು.

ಅಧ್ಯಯನದ ಪ್ರವಾಸದಲ್ಲಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇದರ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್, ನಿರ್ದೇಶಕರಾದ ಶ್ರೀ ಶಿವಾನಂದ ಮಂಠಾಳಕರ್, ಶ್ರೀ ಸತೀಶ್ ಪಾಟೀಲ್, ಶ್ರೀ ಜಗನಾಥ ಕರಂಜೆ, ಶ್ರೀ ಶಿವಬಸಪ್ಪ ಚನ್ನಮಲ್ಲೆ, ಶ್ರೀ ಸಂಜಯ ಕ್ಯಾಸಾ, ಶ್ರೀ ಶ್ರೀಕಾಂತ ಸ್ವಾಮಿ, ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕರಾದ ಅಮೃತ ಹೊಸಮನಿ ನಿಯೋಗದಲ್ಲಿದರು.

# ಸಹಕಾರಿ ಸಂಸ್ಥೆಗಳಲ್ಲಿ ಗಣಕೀಕರಣ ಮತ್ತು ತಂತ್ರಜ್ಞಾನ ಅಳವಡಿಕೆಯ ಮೂಲಕ ವಿತ್ತೀಯ ಒಳಗೊಳ್ಳುವಿಕೆಯ ಸಾಧನೆಯ ಪ್ರಯತ್ನಗಳು

– ಯಶವಂತ ಡೋಂಗ್ರೆ

**(66 ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭ ದಿನಾಂಕ 20 ನವೆಂಬರ್ 2019ರಂದು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ನಡೆದ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಶ್ರೀ ಯಶವಂತ ಡೋಂಗ್ರೆಯವರು ನೀಡಿದ ಉಪನ್ಯಾಸ.)**

ಅಭಿವೃದ್ಧಿಯ ಪ್ರಕ್ರಿಯೆಯು ಸಮಾಜದ ಎಲ್ಲ ಸ್ಥರಗಳನ್ನೂ ಒಳಗೊಂಡಿರಬೇಕೆಂಬ ನಿಲುವು (ಇನ್ಕ್ಲುಸಿವ್ ಡೆವೆಲಪ್‌ಮೆಂಟ್) ಈಗ ಅತ್ಯಂತ ಚಾಲ್ತಿಯಲ್ಲಿರುವ ಅಭಿವೃದ್ಧಿಯ ಪರಿಕಲ್ಪನೆಯಾಗಿದೆ. ಈ ಪರಿಕಲ್ಪನೆ ಅತ್ಯಂತ ವಿಶಾಲವಾದುದಾಗಿದ್ದು, ಅಭಿವೃದ್ಧಿ ಎನ್ನುವುದನ್ನು ಕೇವಲ ಆರ್ಥಿಕ ಅಭಿವೃದ್ಧಿ ಎಂದೋ, ಕೇವಲ ಮನುಷ್ಯರ ಅಭಿವೃದ್ಧಿ ಎಂದೋ ಅರ್ಥೈಸುವುದಾಗಿರದೆ, ಪಶು, ಪ್ರಾಣಿಗಳು, ನೆಲ, ಜಲ, ಅರಣ್ಯ, ವಾಯು ಹೀಗೆ ಎಲ್ಲದರ ರಕ್ಷಣೆ, ಬೆಳವಣಿಗೆ ಮತ್ತು ಶ್ರೇಯೋಭಿವೃದ್ಧಿಯನ್ನು ಒಳಗೊಂಡಿದೆ. ಈ ಅರ್ಥದಲ್ಲಿ ನೋಡಿದಾಗ 'ವಿತ್ತೀಯಒಳಗೊಳ್ಳುವಿಕೆ' (ಫಿನಾನ್ಷಿಯಲ್/ಎಕೊನೊಮಿಕ್‌ಇನ್ಕ್ಲೂಶನ್) ಎನ್ನುವುದು ಒಟ್ಟಾರೆ ಇನ್ಕ್ಲುಸಿವ್ ಡೆವೆಲೊಪ್‌ಮೆಂಟ್ ನ ಒಂದು ಪ್ರಮುಖ ಭಾಗವಾಗಿದೆ.

**ವಿತ್ತೀಯ ಸೇರ್ಪಡೆಯ ಪರಿಕಲ್ಪನೆ :** ಆರ್ಥಿಕ ವ್ಯವಸ್ಥೆಯಲ್ಲಿ ಲಭ್ಯವಿರುವ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಸೇವೆಯಿಂದ ವಂಚಿತರಾಗಿರುವ ಮತ್ತು ಆರ್ಥಿಕವಾಗಿ ಹಿಂದಿಳಿದಿರುವ ಜನರಿಗೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಿ ಅವರುಗಳು ಅಗತ್ಯ ಹಣಕಾಸು ಪರಿಕರಗಳನ್ನು ಹೊಂದಿಸಿಕೊಂಡು ತಮ್ಮ ದಿನನಿತ್ಯದ ಮತು ಔದ್ಯೋಗಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಅನುವುಮಾಡಿಕೊಡುವ ಪ್ರಕ್ರಿಯೆಯನ್ನು ವಿತ್ತೀಯ ಸೇರ್ಪಡೆ ಎನ್ನಬಹುದು. ಪ್ರಸ್ತುತ ನಮ್ಮ ದೇಶದ ಜನಸಂಖ್ಯೆಯ ಸುಮಾರು ಶೇಕಡ 35 ರಷ್ಟು ಜನರಿಗೆ ಮಾತ್ರ ಬ್ಯಾಂಕಿಂಗ್ ಸೇವೆಗಳು ಸಭ್ಯವಿದ್ದು, ಈ ಸೇವೆಯಿಂದ ವಂಚಿತರಾದವರ ಸಂಖ್ಯೆ ಸುಮಾರು 130 ಮಿಲಿಯನ್‌ಗಳೆಂದು ಅಂದಾಜು ಮಾಡಲಾಗಿದೆ. ಅಂತೆಯೇ ವಿತ್ತೀಯ ಸೇರ್ಪಡೆಗೆ ದೊಡ್ಡ ಅವಕಾಶವಿದೆ ಮತ್ತು ಈ ಪ್ರಕ್ರಿಯೆಗೆ ಬೇಡಿಕೆ (ಡಿಮ್ಯಾಂಡ್) ಮತ್ತು ಸರಬರಾಜು (ಸಪ್ಲೈ) ಈ ಎರಡು ಮುಖವೂ ಇದೆ.

ಪಾರಂಪರಿಕ ಬ್ಯಾಂಕಿಂಗ್ ಸೇವೆಯಿಂದ ದೇಶದ ಬಹುಭಾಗ ಜನರು ಹೊರಗಿರುವ ಪರಿಸ್ಥಿತಿಯನ್ನು ಎರಡು ದೃಷ್ಟಿಯಿಂದ ನೋಡಬಹುದು. ಮೊದಲನೇಯದಾಗಿ ಈ ಜನರಿಗೆ ನಿಲುಕುವ ರೀತಿಯಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ಅಭಿವೃದ್ಧಿ ಪಡಿಸಿ ಅವರುಗಳನ್ನು ಆರ್ಥಿಕ ಮುಖ್ಯವಾಹಿನಿಗೆ ತರುವ ಕರ್ತವ್ಯದ ಆಯಾಮವಾದರೆ, ಎರಡನೆಯದು ಬ್ಯಾಂಕಿಂಗ್ ಸಂಸ್ಥೆಗಳಿಗೆ ಹೊಸಮಾರುಕಟ್ಟೆಯನ್ನು, ಈ ವರೆಗೆ ತಲುಪಲು ಪ್ರಯತ್ನಿಸದಿರುವ ಮತ್ತು ಹಾಲಿ ಲಭ್ಯವಿರುವ ಮಾರುಕಟ್ಟೆಗಿಂತ ಬಹುಪಾಲು ವಿಸ್ತಾರವಾಗಿರುವ ಮಾರುಕಟ್ಟೆಯ ಅನ್ವೇಶಣೆಗೆ ಇರುವ ಮತ್ತು ಈ ಮೂಲಕ ಬ್ಯಾಂಕಿಂಗ್ ಸಂಸ್ಥೆಗಳ ಅಗಾಧ ಬಳವಣಿಗೆ ಸಾಧ್ಯವೆನ್ನುವ ದೃಷ್ಟಿಕೋನ. ಅಂತೆಯೇ ವಿತ್ತೀಯ ಸೇರ್ಪಡೆಯ ಪ್ರಕ್ರಿಯೆ ಕೇವಲ ಸಾಮಾನ್ಯಜನರ ಒಳಿತನ್ನು ಸಾಧ್ಯವಾಗಿಸುವುದಲ್ಲದೆ, ಹಣಕಾಸು ಸಂಸ್ಥೆಗಳ ಅಭಿವೃದ್ಧಿಯನ್ನೂ ಸಾಧ್ಯವಾಗಿಸುವ ಪ್ರಕ್ರಿಯೆಯಾಗಿದೆ ಎನ್ನಬಹುದು.

ಯಾವುದೇ ವ್ಯಕ್ತಿಗೆ ಸ್ವತ್ತುಗಳನ್ನು ಪಡೆದುಕೊಳ್ಳಲು, ಔದ್ಯೋಗಿಕ ಹೂಡಿಕೆಗಳನ್ನು ಮಾಡಲು ಮತ್ತು ಅದಕ್ಕಿಂತ ಮೂಲಭೂತ ಅಗತ್ಯಗಳಾದ ಶಿಕ್ಷಣ, ಆರೋಗ್ಯ ಸೇವೆ ಮುಂತಾದುವುಗಳನ್ನು ಪಡೆಯಲು ಹಣಕಾಸು ಬಹು ಅಗತ್ಯ. ಆದರೆ ಈ ಹಣಕಾಸಿನ ನೆರವನ್ನು ನಿಗದಿತ ಸಂಸ್ಥೆಗಳಿಂದ ಪಡೆಯಬೇಕಾದರೆ ನಿರ್ದಿಷ್ಟ ಪ್ರಮಾಣದ ಸ್ವತ್ತುಗಳು ಅಥವ ಇತರ ಯಾವುದೇ–ರೀತಿಯ ಗ್ಯಾರಂಟಿಯ (ಕೊಲಾಟರಲ್) ಅಗತ್ಯವಿರುತ್ತದೆ. ಆದರೆ–ಅಂಚಿನಲ್ಲಿರುವ (ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದಿಳಿದಿರುವ, ಬಡವರಾದ, ಅಶಿಕ್ಷಿತರಾದ) ಜನರಿಗೆ ಈ ಗ್ಯಾರಂಟಿಯನ್ನು ನೀಡುವ ಸಾಮರ್ಥ್ಯವಿರುವುದಿಲ್ಲ. ಆದುದರಿಂದ ಅವರುಗಳು ಬ್ಯಾಂಕಿಂಗ್ ಸೇವೆಗಳಿಂದ ವಂಚಿತರಾಗುತ್ತಾರೆ ಮತ್ತುತಮ್ಮ ಬಡತನದ ವರ್ತುಲದಿಂದ ಹೊರ ಬರುವ ಒಂದು ಉತ್ತಮ ಮಾರ್ಗ ಅವರಿಗೆ ದೊರೆಯದಂತಾಗುತ್ತದೆ. ಇದನ್ನು ಸಾಧ್ಯವಾಗಿಸುವುದುಯವುದೇ ಅಭಿವೃದ್ಧಿ ಶೀಲ ದೇಶದತುರ್ತು ಅಗತ್ಯಗಳಲ್ಲೊಂದು. ಅಂತೆಯೇ ಈ ದಿಕ್ಕಿನಲ್ಲಿ ನಮ್ಮದೇಶವೂ ಹಲವು ಉಪಕ್ರಮಗಳನ್ನು ಆರಂಭಿಸಿದೆ. ಒಂದೆಡೆಯಿಂದ ಸರಕಾರಿ ಕಾರ್ಯಕ್ರಮಗಳೂ ಇನ್ನೊಂದೆಡೆಯಿಂದ ಬ್ಯಾಂಕಿಂಗ್ ಸಂಸ್ಥೆಗಳೇ ರೂಪಿಸುತ್ತಿರುವ ಯೋಜನೆಗಳು ಜಾರಿಯಲ್ಲಿರುವಂತೆಯೇ ಹಲವು ರೀತಿಯ ಸ್ವಯಂ ಸೇವಾ ಸಂಸ್ಥೆಗಳು, ಸ್ವಸಹಾಯ ಕಾರ್ಯಕ್ರಮಗಳೂ ಚಾಲ್ತಿಯಲ್ಲಿವೆ. ಇವುಗಳಲ್ಲಿ ಸಹಕಾರ ಸಂಘಗಳ ಪಾತ್ರ ಮತ್ತು ಅವುಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ಮನವರಿಕೆಮಾಡಿಕೊಳ್ಳುವುದು ಬಹು ಅಗತ್ಯ.

**ಸಹಕಾರ ಸಂಘಗಳ ಪಾತ್ರ :** ಸಹಕಾರ ಸಂಘಗಳು ಜನರು ತಮ್ಮ ಅಗತ್ಯಗಳಿಗಾಗಿ ತಾವೇ ಸ್ವಯಂ ಸ್ಫೂರ್ತಿಯಿಂದ ಆರಂಭಿಸುವ ಸಂಸ್ಥೆಗಳು. ನಗರ, ಗ್ರಾಮಗಳೆಂಬ ಭೇದವಿಲ್ಲದೆ, ಸಾಮಾನ್ಯ ಜನರು ತಮ್ಮ ಸಾಮಾನ್ಯ ಅಗತ್ಯಗಳ ಪೂರೈಕೆಗಾಗಿ ಸಹಕಾರ ಸಂಘಗಳನ್ನು ದಟ್ಟತಕೊಳ್ಳುತ್ತಾರೆ. ಆದುದರಿಂದ ಎಲ್ಲ ಸಾಮಾನ್ಯ ಜನರು ಅರ್ಥ ವ್ಯವಸ್ಥೆಯ ಮುಖ್ಯ ವಾಹಿನಿಗೆ ಬರಲು ಸಹಾಯಕ ವಾಗುವ ಸಂಸ್ಥೆಗಳಲ್ಲಿ ಸಹಜವಾಗಿಯೇ ಸಹಕಾರ ಸಂಘಗಳು ಮೊದಲಿಗರಾಗಬೇಕು. ವಿತ್ತೀಯ ಸೇರ್ಪಡೆಯ ಪ್ರಕ್ರಿಯೆಯಲ್ಲಿಯೂ ಇವುಗಳ ಪಾತ್ರ ಪ್ರಧಾನವಾಗಿರಬೇಕಾಗಿದೆ. ಆದರೆ ಈ ಬಗೆಗೆ ಹೆಚ್ಚು ವಸ್ತುನಿಷ್ಠ ವಿಶ್ಲೇಷಣೆ ಮಡುವುದೊಳ್ಳೆಯದು. ಅಂತೆಯೇ ವಿತ್ತೀಯ ಸೇರ್ಪಡೆಯ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಸಹಕಾರ ಸಂಸ್ಥೆಗಳ ಶಕ್ತಿ (ಸ್ಟ್ರೆಂತ್) ಮತ್ತು ಮಿತಿಗಳನ್ನು (ವೀಕ್‌ನೆಸ್) ಪರಿಶೀಲಿಸೋಣ.

**ಶಕ್ತಿ:** ವಿತ್ತೀಯ ಸೇರ್ಪಡೆಯನ್ನು ಸಾಧ್ಯವಾಗಿಸುವಲ್ಲಿ ಸಹಕಾರ ಸಂಘಗಳಿಗೆ ಖಂಡಿತವಾಗಿಯೂ ಅಗತ್ಯ ಶಕ್ತಿ ಇದೆ. ಇದನ್ನು ಈ ಕೆಳಗಿನ ಅಂಶಗಳ ಮೂಲಕ ಶೃತಪಡಿಸಬಹುದು.

ಅ. ಸಹಕಾರ ಸಂಘಗಳು ದೇಶದ ಎಲ್ಲ ಭಾಗಗಳಲ್ಲಿ ಹರಡಿರುವ ಏಕಮಾತ್ರ ಆರ್ಥಿಕ ಸಂಸ್ಥೆಗಳು. ಯಾವ ಬ್ಯಾಂಕಿಂಗ್ ಸಂಸ್ಥೆಯೂ

ತಲುಪದಿರುವ ಕುಗ್ರಾಮಗಳನ್ನೂ ತಲುಪಿರುವ ಸಹಕಾರ ಸಂಸ್ಥೆಗಳು ಸಆಮಾನ್ಯ ಜನರಿಗೆ ತೀರ ಹತ್ತಿರದ ಸಂಸ್ಥೆಗಳು.

ಆ. ಬ್ಯಾಂಕಿಂಗ್ ಮತ್ತು ಇತರೆ ಹಣಕಾಸು ಸೇವೆಗಳಲ್ಲಿ ಸಹಕಾರ ಸಂಘಗಳು ಈಗಾಗಲೇ ಅಪಾರ 'ಅನುಭವ ಹೊಂದಿವೆ. ನಗರ ಪ್ರದೇಶಗಳಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ವಿಸ್ತೃತವಾಗಿ ಹರಡಿದ್ದರೆ ಗ್ರಾಮೀಣ ಪ್ರದೇಶಗಳಲ್ಲಿ 1,50,000ಕ್ಕೂ ಹೆಚ್ಚಿನ ಕೃಷಿ ಪತ್ತಿನ ಸಹಕಾರ ಸಂಘಗಳು ಇದ್ದು ಎಲ್ಲ ರೀತಿಯ ಜನರನ್ನು ತಲುಪುವ ಶಕ್ತಿ ಇದೆ

ಇ. ಸಹಕಾಸ ಸಂಘಗಳು ಕಡಿಮೆ ವೆಚ್ಚದಲ್ಲಿ ವ್ಯವಹಾರ ನಿರ್ವಹಿಸುವ ಸಂಸ್ಥೆಗಳಾಗಿರುವುದರಿಂದ, ಸಾಮಾನ್ಯಜನರಿಗೆ ನಿಲುಕುವ ದರಗಳಲ್ಲಿ ಹಣ–ಕಾಸಿನ ಸೇವೆಗಳನ್ನು ಒದಗಿಸುವ ಸಾಮರ್ಥ್ಯ ಹೊಂದಿವೆ.

ಈ. ಸಹಕಾರ ಸಂಸ್ಥೆಗಳು ಜನಸಾಮಾನ್ಯರ ಸಂಸ್ಥೆಗಳು. ಸಹಜವಾಗಿಯೇತಮ್ಮ ಸದಸ್ಯ ಸಮುದಾಯದ ಬೇಕುಬೇಡಗಳನ್ನು ಅರಿಯುವ ಶಕ್ತಿ ಬೇರೆಲ್ಲ ಸಂಸ್ಥೆಗಳಿಗಿಂತ ಸಹಕಾರೀ ಸಂಸ್ಥೆಗಳಿಗೆ ಹೆಚ್ಚಿರುತ್ತದೆ.

ಉ. ಎಲ್ಲಕ್ಕಿಂತ ಮುಖ್ಯವಾದಅಂಶವೆಂದರೆ, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿರುವ ಜನರಿಗೆ ಬ್ಯಾಂಕುಗಳು ಮತ್ತು ಸರಕಾರೀ ಸಂಸ್ಥೆಗಳಿಗೆ ಭೇಟಿನೀಡುವಲ್ಲಿ ಇರುವ ಹಿಂಜರಿಕೆ, ಭಯ, ಸಹಕಾರಸಂಘಗಳಿಗೆ ಹೋಗುವಾಗ ಕಾಣುವುದಿಲ್ಲ. ಸಹಕಾರ ಸಂಘಗಳೊಂದಿಗೆ ಈ ಜನ ಹೆಚ್ಚು ಸುಲಭವಾಗಿ ಹೊಂದಿಕೊಳ್ಳಬಲ್ಲರು.

**ಮಿತಿ :** ಮೇಲಿನ ಎಲ್ಲಾ ಶಕ್ತಿಗಳಿದ್ದರೂ ವಿತ್ತೀಯ ಸೇರ್ಪಡೆಯನ್ನು ಸಾಧ್ಯವಾಗಿಸುವಲ್ಲಿ ಸಹಕಾರ ಸಂಘಗಳಿಗೆ ಕೆಲವು ಪ್ರಮುಖ ಮಿತಿಗಳಿವೆ.

ಅ. ಸಹಕಾರ ಸಂಘಗಳು ದೊಡ್ಡ ಸಂಖ್ಯೆಯಲ್ಲಿದ್ದರೂ, ಅವುಗಳಲ್ಲಿ ಸಾಕಷ್ಟು ದೊಡ್ಡ ಸಂಖ್ಯೆಯ ಸಂಘಗಳು ಆರ್ಥಿಕ ಕ್ಷಮತೆ ಹೊಂದಿಲ್ಲ. ಹೆಸರಿಗೆ ಮಾತ್ರ ಸಂಘವಿದ್ದು ಯಾವುದೇ ಚಟುವಟಿಕೆ ನಡೆಯದಿರುವ ಉದಾಹರಣೆಗಳೂ ದೊಡ್ಡಸಂಖ್ಯೆಯಲ್ಲಿರುವುದು ವಾಸ್ತವ

ಆ. ಸಹಕಾರ ಸಂಘಗಳು ಪೂರ್ಣ ಸ್ವಾತಂತ್ರ ಮತ್ತು ಸ್ವಂತ ನೆಲೆಯಲ್ಲಿ ಸದೃಢ ವ್ಯವಹಾರ ಹೊಂದಿಲ್ಲದಿರುವುದು ಇನ್ನೊಂದು ಮಿತಿ. ಒಂದೆಡೆ ಸರಕಾರದ ಮೇಲೆ ಅವಲಂಬನೆ ಇನ್ನೊಂದೆಡೆ ಸರಕಾರದ ಅನಗತ್ಯ ನಿಯಂತ್ರಣ ಇವೆರಡೂ ಸಹಕಾರ ಸಂಘಗಳ ಸಾಧ್ಯತೆಯನ್ನು ಮೊಟಕು ಮಾಡುತ್ತಿವೆ

ಇ. ವಿತ್ತೀಯ ಸೇರ್ಪಡೆದೊಡ್ಡ ಸಂಖ್ಯೆಯ, ಆದರೆ ಆರ್ಥಿಕವಾಗಿ ಸದೃಢವಾಗಿಲ್ಲದ ಜನರಿಗೆ ಹಣಕಾಸಿನ ನೆರವು ಒದಗಿಸುವ ದೊಡ್ಡ ಜವಾಬ್ದಾ–ರಿಯ ಕೆಲಸ. ಈ ಜವಾಬ್ದಾರಿಯನ್ನು ನಿರ್ವಹಿಸಲು ಹೊಸ ಸಾಧ್ಯತೆಗಳ ಅನ್ವೇಶಣೆ (ಇನ್ನೊವೇಶನ್) ಮತ್ತು ಕಾರ್ಯಕ್ಷಮತೆ (ಪ್ರೊಫೆಶನಲಿಸಂ) ಅಗತ್ಯ. ತಂತ್ರಜ್ಞಾನದ ಅಳವಡಿಕೆ ಮತ್ತು ಗಣಕೀಕರಣದ ಪ್ರಕ್ರಿಯೆಯನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಗೊಳಿಸುವುದೂ ತುರ್ತು ಅಗತ್ಯ. ಆದರೆ ಈ ಎರಡೂ ನಿಟ್ಟಿನಲ್ಲಿ ಸಹಕಾರ ಸಂಘಗಳು ಹಿಂದುಳಿದಿರುವುದು ದೊಡ್ಡ ಮಿತಿಯಾಗಿದೆ

ಈ. ಸಹಕಾರ ಸಂಘಗಳಲ್ಲಿ ಸದ್ಯರ ಭಾಗವಹಿಸುವಿಕೆಯ ಕೊರತೆ ನಮ್ಮ ದೇಶದ ಎಲ್ಲ ರೀತಿಯ ಸಹಕಾರ ಸಂಘಗಳ ದೊಡ್ಡ ಸಮಸ್ಯೆ. ಸದಸ್ಯರು ಸಂಘದ ವ್ಯವಹಾರ ಮತ್ತು ಆಡಳಿತ ಇವೆರಡರಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದಾಗ ಮಾತ್ರ ಸಹಕಾರ ಸಂಘಗಳಿಗೆ ನಿಜವಾದ ಅಸ್ತಿತ್ವವಿರುತ್ತದೆ. ಅದರೆ ಸಧ್ಯದ ಪರಿಸ್ಥಿತಿಯನ್ನು ಗಮನಿಸಿದಾಗ ಈ ನಿಟ್ಟಿನಲ್ಲಿಯೂ ನಮ್ಮ ಸಹಕಾರಿ ಕ್ಷೇತ್ರ ಹಿಂದುಳಿದಿದೆ ಎನ್ನಬೇಕಾಗಿದೆ.

ಉ. ಸದಸ್ಯರ ಅಗತ್ಯಗಳ ಆಧಾರದಲ್ಲಿ ವ್ಯವಹಾರವನ್ನು (ನೀಡ್ ಬೇಸ್ಡ ಬಿಸಿನೆಸ್) ಸಂಘಟಿಸುವ ಬದಲಿಗೆ ಮಾರುಕಟ್ಟೆ ಅಗತ್ಯಗಳ ಆಧಾರದಲ್ಲಿ ವ್ಯವಹಾರವನ್ನು ಸಂಘಟಿಸುವತ್ತ ಹೆಚ್ಚಿನ ಸಹಕಾರ ಸಂಘಗಳು ಒಲವು ತೋರುತ್ತಿರುವುದು ನಮ್ಮ ಸಹಕಾರ ಸಂಘಗಳ ಇನ್ನೊಂದು ಮಿತಿ. ಆದುದ–ರಿಂದಲೇ ಇತರೆ ಹಣಕಾಸು ಸಂಸ್ಥೆಗಳಂತೆಯೇ ಬಹಳಷ್ಟು ಸಹಕಾರ ಸಂಘಗಳೂ ಕೂಡ ಸ್ಥಿತಿವಂತರಿಗೇ ಅನುಕೂಲ ಒದಗಿಸುವ ಮಿತಿಯನ್ನು ಹೊಂದಿವೆ.

**ತಂತ್ರಜ್ಞಾನ ಮತ್ತುಗಣಕೀಕರಣ (ಟೆಕ್ನಾಲಜಿ ಮತ್ತು ಡಿಜಿಟಲೈಜೇಶನ್) :** ಸಹಕಾರ ಸಂಸ್ಥೆಗಳು ವಿತ್ತೀಯ ಸೇರ್ಪಡೆಯನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ತಂತ್ರಜ್ಞಾನದ ಅಳವಡಿಕೆ ಮತ್ತು ಗಣಕೀಕರಣ ಒಂದು ಪ್ರಮುಖ ಹೆಜ್ಜೆಯಾಗಿದೆ. ಯಾವುದೇ ಸದಸ್ಯ/ಗ್ರಾಹಕನಿಗೆ ಉತ್ತಮ ಮಟ್ಟದ ಸೇವೆಯನ್ನುಕ್ಲುಪ್ತ ಸಮಯದಲ್ಲಿ, ಕೈಗೆಟಕುವುದರದಲ್ಲಿ ನೀಡಬೇಕೆಂದಾದರೆ, ಈ ಎರಡೂ ಅತ್ಯಗತ್ಯ. ಒಂದು ಸಹಕಾರಿ ಸಂಘವು ಬ್ಯಾಂಕಿಂಗ್, ಚಿಲ್ಲರೆ ವ್ಯಾಪಾರ, ಮಾರಾಟ, ಉತ್ಪಾದನೆ ಹೀಗೆ ಯಾವುದೇ ಸೇವೆಯನ್ನು ನೀಡುವುದಾದರೂ ತಂತ್ರಜ್ಞಾನದ ಅಳವಡಿಕೆ ಬೇಕಾಗುತ್ತದೆ. ಹೊಸ ತಂತ್ರಜ್ಞಾನಗಳು ಇಂದು ಎಲ್ಲ ಕ್ಷೇತ್ರಕ್ಕೂ ಲಭ್ಯವಿದ್ದು, ಸೇವೆಯ ಒಟ್ಟಾರೆ ಗುಣಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಗುವುದರಿಂದ, ಸಹಕಾರ ಸಂಘಗಳು ಹಂತಹಂತವಾಗಿಇಂತಹತಂತ್ರಜ್ಞಾನವನ್ನುತಮ್ಮ ವ್ಯವಹಾರದಲ್ಲಿ ಅಳವಡಿಸಿಕೊಳ್ಳಬೇಕಿದೆ. ಉದಾಹರಣೆಗೆ ಮೊಬೈಲ್ ತಂತ್ರಜ್ಞಾನವು ಬಹತೇಕ ಎಲ್ಲರೂ ಉಪಯೋಗಿಸುವ ಸಾಧನವಾಗಿರುವುದರಿಂದ, ಈ ತಂತ್ರಜ್ಞಾನವನ್ನು ಸದಸ್ಯರ ವಿವಿಧ ಅಗತ್ಯಗಳ ಪೂರೈಕೆಗಾಗಿ ಬಳಸುವ ಕುರಿತು ಸಹಕಾರ ಸಂಘಗಳು ಗಂಭೀರವಾಗಿ ಪ್ರಯತ್ನಿಸಬೇಕಿದೆ. ಹೀಗೆಯೇ ಕಛೇರಿ ಕೆಲಸಗಳಲ್ಲಿ ಪೂರ್ಣವಾಗಿ ಇ–ಗೌರ್ನೆನ್ಸ್ ಬಳಸುವುದು, ತಂತ್ರಜ್ಞಾನ ಆಧಾರಿತ ಪ್ಯಾಕಿಂಗ್, ದಾಸ್ತಾನು, ರಕ್ಷಣೆ ಹೀಗೆ ಪ್ರತಿಯೊಂದು ಚಟುವಟಿಕೆಗೂ ತಂತ್ರಜ್ಞಾನದ ಸಹಾಯ ಪಡೆಯತ್ತಾ ಬಂದರೆ ಸಹಕಾರ ಸಂಘಗಳ ಕಾರ್ಯಕ್ಷಮತೆ ಹೆಚ್ಚುತ್ತದೆ ಹಾಗು ಸದಸ್ಯರಿಗೆಉತ್ತಮ ಸೇವೆ ದೊರೆಯುತ್ತದೆ.

ಗಣಕೀಕರಣವು ಇನ್ನೊಂದು ಪ್ರಮುಖ ಅಗತ್ಯ. ಆನ್‌ಲೈನ್ ಸೇವೆಗಳನ್ನು ಒದಗಿಸುವುದು, ಎಲ್ಲ ಪಾವತಿಗಳನ್ನು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ನಡೆಸುವುದು, ದಿನನಿತ್ಯದ ಸಂವಹನಕ್ಕೆ ಎಲೆಕ್ಟ್ರಾನಿಕ್ ಮಾಧ್ಯಮವನ್ನು ಉಪಯೋಗಿಸುವುದು, ಸಾಧ್ಯವಾದ ಕಡೆಯಲ್ಲಿ ಗ್ರಾಹಕರು/ಸದಸ್ಯರು ಮನೆಯಲ್ಲಿ ಕುಳಿತೇ ಸಂಘದೊಡನಿನ ತಮ್ಮ ಕೆಲಸಗಳನ್ನು ನಡೆಸುವಂತೆ ಗಣಕೀಕೃತ ವ್ಯವಸ್ಥೆ ಜಾರಿಮಾಡುವುದು, ಹೀಗೆ ಡಿಜಿಟಲ್ ಮಾಧ್ಯಮದ ಮೂಲಕ ಉತ್ತಮ ಹಾಗು ಸುರಕ್ಷಿತ ಸೇವೆ ಒದಗಿಸಲು ಸಹಕಾರಿ ಸಂಘಗಳು ಪ್ರಯತ್ನಿಸಬಹುದು.

ತಂತ್ರಜ್ಞಾನ ಮತ್ತು ಗಣಕೀಕರಣಗಳು ಸಹಕಾರಿ ಸಂಘದ ಕಾರ್ಯಭಾರದಲ್ಲಿ ಪರಾರದರ್ಷಕತೆ ಮತ್ತು ಉತ್ತರ ದಾಯಿತ್ವವನ್ನು ಹೆಚ್ಚಿಸುತ್ತವೆ. ಇದರಿಂದಾಗಿ ಸಂಘದ ಸದಸ್ಯರಿಗೆ ಸಂಘದ ಮೇಲಿನ ಭರವಸೆ, ನಂಬಿಕೆ ಹೆಚ್ಚುತ್ತದೆ. ಇವುಗಳಿಂದಾಗಿ ಸಹಜವಾಗಿಯೇ ಸಂಘದ ಸೇವೆಗಳನ್ನು ಪಡೆಯುವ ಸದಸ್ಯರ ಸಂಖ್ಯೆಯೂ ಹೆಚ್ಚುತ್ತದೆ ಮತ್ತು ಸಂಘದ ಆರ್ಥಿಕ ಶಕ್ತಿಯೂ ಬಲವಾಗುತ್ತದೆ.

ಆದುದರಿಂದಲೇ ತಂತ್ರಜ್ಞಾನದ ಅಳವಡಿಕೆ ಹಾಗೂ ಗಣಕೀಕರಣಗಳು ಸಹಕಾರಿ ಸಂಘಗಳು ಗ್ರಾಮೀಣ ಪರಿಸರದ, ಹೆಚ್ಚಿನ ವಿದ್ಯಾಭ್ಯಾಸವಿಲ್ಲದೆ, ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಸಾಮಾನ್ಯ ಸದಸ್ಯ/ಗ್ರಾಹಕನಿಗೂ ಸೇವೆಗಳನ್ನು ತಲುಪಿಸಲು ಮತ್ತು ಇದರಿಂದಾಗಿ ವಿತ್ತೀಯ ಒಳಗೊಳ್ಳುವಿಕೆಯನ್ನು ಸಾಧ್ಯವಾಗಿಸಲು ಅನುಕೂಲಕರವಾಗುತ್ತದೆ.

# ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಸೇರ್ಪಡೆ, ತಂತ್ರಜ್ಞಾನ ಹಾಗೂ ಡಿಜಿಟಲೈಜೇಷನ್ ಅಳವಡಿಸುವುದು

# Financial Inclusion, Technology Adoption and Digitalisation through Cooperatives.

– ಶ್ರೀಮತಿ ಸವಿತಾ ಎನ್. ಇ

**ಪೀಠಿಕೆ :**

**ಹಳೆ ಸೂರ್ಯ ಹಳೆ ಚಂದ್ರ ಹಳೆ ಭೂಮಿ ಹಳೆ ನೀರು।ಹಳೆ ಹಿಮಾಚಲ ಗಂಗೆ ಹಳೆ ಚಂಶಚರಿತೆ॥**

**ಹಳೆಯಯವಿವು ನೀನಿದರೂಳಾವುದನು ಕಳೆದೀಯೋ।ಹಳೆದು ಹೊಸತರೊಳದು? ಮಂಕುತಿಮ್ಮ**

ಕಗ್ಗವೇ ಸಾರುವಂತೆ ಇವೆಲ್ಲವು ಹಳೆಯವೇ ಆದರೆ ಇವುಗಳನ್ನು ಹೊಸತರಲ್ಲಿ ನೋಡು ಮಂಕ್ಕುತಿಮ್ಮ ಎಂದು ಡಿವಿಜಿಯವರು ಹೇಳಿದಂತಯೇ ಸಹಕಾರ ಚಳುವಳಿಗಳ ಅನುಭವದ ಆಧಾರದ ಸಹಕಾರಿ ಮೌಲ್ಯಗಳನ್ನು ಸಹಕಾರಿ ತತ್ವಗಳನ್ನಾಗಿ ರೂಪಿಸಿದ ನಂತರ ಈ ತತ್ವಗಳನ್ನು ಅಧ್ಯಯನ ಮಾಡಿ ನಂತರ ಇಡೀ ವಿಶ್ವಕ್ಕೆ ಅನುಕರಣೆಯಾಗುವಂತೆ ವಿಶ್ವದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಹಕಾರಿಗಳ ಕಾರ್ಯಾಚರಣೆಗೆ, ಯಶಸ್ಸಿಗೆ, ಪ್ರಗತಿಗೆ ತತ್ವಗಳೇ ಅಡಿಪಾಯ. ಈ ತತ್ವಗಳ ಆಧಾರದಲ್ಲಿ ಸಹಕಾರ ಸಂಸ್ಥೆಗಳಲ್ಲಿ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿವೆಯಾದರೂ ಇದರೊಂದಿಗೆ ತಂತ್ರಜ್ಞಾನ ಹಾಗೂ ಡಿಜಿಟಲೈಜೇಷನ್ ಅಳವಡಿಸುವುದರಿಂದ ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಹಾಗೂ ಸರಳೀಕರಣ ಹಾಗೂ ಶೀಘ್ರವಾಗಿ ಸೇವೆ ಒದಗಿಸಬಹುದಾಗಿದೆ. ಅಲ್ಲದೆ ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಸೇರ್ಪಯಿಂದ ಅಭಿವೃದ್ಧಿಯೆಡೆಗೆ ಮುನ್ನಡೆಯುವ ಅತ್ಯಅಗತ್ಯವಿದ್ದು, ಸಹಕಾರಿ ಸಂಸ್ಥೆಗಳಲ್ಲಿ ಡಿಜಟಲೀಕರಣ ಹಾಗೂ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಹಾಗೂ ಅನಿವಾರ್ಯ ಇಂದಿನದಾಗಿದೆ.

ಭಾರತದ ಮಾಜಿ ರಾಷ್ಟ್ರಪತಿ ಡಾ.ಪ್ರಣಬ್ ಮುಖರ್ಜಿಯವರು "ನಮ್ಮ ರಾಷ್ಟ್ರದ ಆರ್ಥಿಕ–ಸಾಮಾಜಿಕ ಬೆಳವಣಿಗೆಗೆ ಸಹಕಾರವೇ ಬುನಾದಿಯಾಗಿದೆ. ಸಹಕಾರ ತತ್ವ, ಶಿಕ್ಷಣ, ಆಹಾರ ಭದ್ರತೆ, ಉದ್ಯೋಗ ಸೃಷ್ಟಿ, ಆರೋಗ್ಯ ರಕ್ಷಣೆಗೂ ಅಪೂರ್ವ ಕೊಡುಗೆ ನೀಡಬಲ್ಲವು" ಎಂದು ರಾಷ್ಟ್ರೀಯ ಸಹಕಾರಿ ಕಾರ್ಯಕ್ರಮದಲ್ಲಿ ಹೇಳಿರುವ ಮಾತುಗಳು ಸಹಕಾರ ಕ್ಷೇತ್ರದ ಗಟ್ಟಿತನದ ಮಹತ್ವವನ್ನು ಸೂಚಿಸುತ್ತವೆ.

ಸಹಕಾರಿಗಳ ಕ್ಷೇತ್ರ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿವೆಯಾದರೂ ಇದರೊಂದಿಗೆ ತಂತ್ರಜ್ಞಾನ ಹಾಗೂ ಡಿಜಿಟಲೈಜೇಷನ್ ಅಳವಡಿಸುಕೊಳ್ಳುವಿಕೆಯಲ್ಲಿ ಹಿಂದುಳಿದವರ ಕ್ಷೇತ್ರ. ಸಹಕಾರ ಸಂಸ್ಥೆಗಳು ಸಾಮಾಜಿಕ ಬದ್ಧತೆಯನ್ನು ಹೊಂದಿರುವ ವ್ಯಾವಹಾರಿಕ ಸಂಸ್ಥೆಗಳಾಗಿದ್ದು, ಸದಸ್ಯರ ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಇವುಗಳ ಉದ್ದೇಶವಾಗಿದೆ. ಪ್ರಸ್ತುತ 30 ಕೋಟಿಗೂ ಹೆಚ್ಚು ಮಾನವ ಸಂಪನ್ಮೂಲವನ್ನು ಹೊಂದಿರುವ ಈ ಕ್ಷೇತ್ರದಲ್ಲಿ 6 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು. ನೂರಕ್ಕೆ ನೂರರಷ್ಟು ಗ್ರಾಮೀಣ ಕಾರ್ಯವ್ಯಾಪ್ತಿಯನ್ನು ಹೊಂದಿವೆ. ಸ್ಥಳೀಯವಾಗಿ ಎಲ್ಲರನ್ನೂ ಮತ್ತು ಎಲ್ಲವನ್ನೂ ಒಳಗೊಂಡ ಅಭಿವೃದ್ಧಿಯನ್ನು ಸಾಧಿಸಲು ಸಹಕಾರ ಕ್ಷೇತ್ರಕ್ಕಿಂತ ಪರ್ಯಾಯ ಕ್ಷೇತ್ರ ಇನ್ನೊಂದಿಲ್ಲ. ಹೊಸ ಆರ್ಥಿಕ ನೀತಿ, ತೀವ್ರ ಪೈಪೋಟಿಗಳ ನಡುವೆಯು, ಗ್ರಾಮೀಣ ಸಾಲ ಪೂರೈಕೆಯನ್ನು ಯಶಸ್ವಿಯಾಗಿ ನಿರ್ವಹಿಸುವ ಕಾರ್ಯವು ಸಹಕಾರಿ ಸಂಸ್ಥೆಗಳಿಂದ ಮಾತ್ರ ಸಾಧ್ಯವೆಂಬುದನ್ನು ಈಗಾಗಲೇ ಸಾಬೀತುಪಡಿಸಲಾಗಿದೆ. ಸಹಕಾರಿಗಳಿಗೆ ಸಾಲದ ಶೇ.95ರಷ್ಟು ಹಣ ನಬಾರ್ಡ್, ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಬ್ಯಾಂಕುಗಳಿಂದಹಳ್ಳಿಗಳಿಗೆ ಬರುತ್ತದೆ. ಹಾಲು ಉತ್ಪಾದಕರಿಗೆ ವಾರಕೊಮ್ಮೆ ನೀಡುವ ಹಣ ನಗರದಿಂದ ಹಳ್ಳಿಗೆ ಬರುತ್ತದೆ. ಸ್ವ–ಸಹಾಯ ಗುಂಪುಗಳಿಗೆ ನೀಡುತ್ತಿರುವ ಸಾಲ ಸೌಲಭ್ಯದ ಹಣ ನಗರದಿಂದ ಹಳ್ಳಿಗಳ ಮೂಲೆ ಮೂಲೆಗೆ ಬರುತ್ತದೆ. ಈ ವ್ಯವಸ್ಥೆಗೆ ಅಗತ್ಯವಿರುವ ಸ್ಥಳೀಯ ವಿದ್ಯಮಾನ ಹಾಗೂ ಜನರ ನಾಡಿಮಿಡಿತವನ್ನು ಚೆನ್ನಾಗಿ ತಿಳಿದಿರುವ ಸ್ಥಳೀಯ ನೆಟ್‌ವರ್ಕ್ ಸಹಕಾರಿ ವಲಯ ಎಂದು ಮತ್ತೊಮ್ಮೆ ಸಾಭಿತು ಪಡಿಸುತ್ತಿದೆ.

**ವಿಷಯ ಪ್ರಸ್ತಾವನೆ :**

ಹೊಸಚಿಗುರು ಹಳೆಬೇರು ಕೂಡಿರಲು ಮರ ಸೊಬಗು ಎಂಬಂತೆ ಇತ್ತೀಚಿನ ದಿನಗಳಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ವ್ಯವಹಾರದಲ್ಲಿ ತಂತ್ರಜ್ಞಾನ ಹಾಗೂ ಡಿಜಿಟಲೈಜೇಷನ್ ನೂತನ Tech- digit ನ ಕ್ರಾಂತಿಯ ಅಲೆನ್ನೇ ಎಬ್ಬಿಸಿವೆ. ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ವ್ಯವಸ್ಥೆಯು ನಗದು ರೂಪದಿಂದ ಡಿಜಿಟಲ್ ಹಣಕ್ಕೆ ಬದಲಾವಣೆಯಾಗುವ ಸಮಯ ಹಾಗೂ ಸೂಕ್ತ ಕ್ರಮವಿಡುವ ಅಗತ್ಯವಿದೆ. ಸಹಕಾರಿ ಸಂಸ್ಥೆಗಳಲ್ಲಿ ಎಲ್ಲ ರೀತಿಯ ನಗದು ವ್ಯವಹಾರಗಳು ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್, ಗೂಗಲ್ ಪೇ, ಪೇಟೈಮ್, ಆರ್‌ಟಿಜಿಎಸ್, ಫಂಡ್ ಟ್ರಾನ್ಸ್‌ಫರ್ ಅಥವಾ ಆನ್‌ಲೈನ್ ವ್ಯವಹಾರ ಹಾಗೂ ಖರೀದಿಗಳ ಮುಖಾಂತರವೇ ನಡೆಯುತ್ತವೆ. ಬಿಲ್‌ಗಳ ಪಾವತಿ ಇರಬಹುದು, ದಿನನಿತ್ಯ ಉಪಯೋಗಿಸುವ ವಸ್ತುಗಳ–ಪದಾರ್ಥಗಳ ಖರೀದಿ ಇರಬಹುದು, ಪ್ರಯಾಣಿಸು ವಾಹನಗಳದರ ಇರಬಹುದು ಇತರೇ ಯಾವುದೇನಗದು ವ್ಯವಹಾರವಿದ್ದರೂ ತಾಂತ್ರಿಕತೆಯನ್ನು ಬಳಸಿ ಅಥವಾ ಡಿಜಿಟಲ್ ವ್ಯವಹಾರದ ಮೂಲಕವೇ ನಡೆಯುತ್ತಿವೆ. ಕೆಲವು ಸಹಕಾರಿ ಸಂಸ್ಥೆಗಳಲ್ಲಿ ತಂತ್ರಜ್ಞಾನ ಹಾಗೂ ಡಿಜಿಟಲೈಜೇಷನ್ ಅಳವಡಿಸಿಕೊಂಡು ನಗದು ವ್ಯವಹಾರ ನಡೆಸುವುದರಿಂದ ಡಿಜಿಟಲ್ ಬ್ಯಾಂಕಿಂಗ್‌ಇದೆ ಎಂಬ ಹೆಗ್ಗಳಿಕೆ ನಮ್ಮ ಕೆಲವು ಸಹಕಾರಿ ಸಂಸ್ಥೆಗಳದ್ದಾಗಿದೆ.

ಸಹಕಾರಿಗಳು ಕೂಡಾ ಡಿಜಿಟಲ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಪೂರಕವಾದ ವಾತಾವರಣ ಕಂಡುಬರುತ್ತಿದೆ.ಈ ಬಗ್ಗೆ 2017–18ರ ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾಪವಾಗಿರುವಂತೆ ದೇಶದ 63 ಸಾವಿರ ಪ್ಯಾಕ್ಸ್‌ಗಳನ್ನು ಮತ್ತು

ಜಿಲ್ಲಾ ಬ್ಯಾಂಕುಗಳನ್ನು 3 ವರ್ಷಗಳಲ್ಲಿ ಸಂಪೂರ್ಣ ಗಣಕೀಕರಣಗೊಳಿಸಲು ನಬಾರ್ಡ್ ಮೂಲಕ ರೂ.1900 ಕೋಟಿ ಆರ್ಥಿಕ ನೆರವನ್ನು 2017-18ರ ಕೇಂದ್ರ ಬಜೆಟ್‌ನಲ್ಲಿ ಒದಗಿಸಲಾಗಿದೆ. ಪ್ಯಾಕ್ಸ್‌ಗಳಲ್ಲಿ Micro ATM ಗಳು ಬರಲಿವೆ. ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳಲ್ಲಿ ಸ್ವೈಪಿಂಗ್ ಮೆಷಿನ್ ಸ್ಥಾಪಿಸಲಾಗುತ್ತದೆ.ನಬಾರ್ಡ್ ಸಹಯೋಗದಲ್ಲಿ ಗ್ರಾಮೀಣ ಹಾಗೂ ಸ್ಥಳೀಯ ಬ್ಯಾಂಕುಗಳ ಮೂಲಕ 4.32 ಕೋಟಿ ರುಪೇ ಡೆಬಿಟ್ ಕಾರ್ಡ್ ವಿತರಿಸಲು ನಿರ್ಧರಿಸಲಾಗಿದೆ.2017-18ರ ಕೇಂದ್ರ ಬಜೆಟ್‌ನಲ್ಲಿ ಗ್ರಾಮ, ಉಪನಗರಗಳಲ್ಲಿ ಡಿಜಿಟಲ್ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಲಾಗಿದೆ.

**ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಸೇರ್ಪಡೆ ಎಂದರೇನು ?**

ಸಹಕಾರಿ ಸಂಸ್ಥೆಗಳಲ್ಲಿ ವ್ಯವಹಾರ ನಡೆಸಬಲ್ಲ ಸದಸ್ಯರುಗಳಿಗೆ ಕಡಿಮೆ ಆದಾಯದ ವರ್ಗದವರಿಗೂ ಸಹ ಕೈಗೆಟಕುವ ದರದಲ್ಲಿ, ಸಕಾಲದಲ್ಲಿ, ಸರಳೀಕೃತವಾಗಿ ಮತ್ತು ಅಗತ್ಯವಾದ ಆರ್ಥಿಕ ಸೇವೆಗಳಿಗೆ ಉಚಿತ ಪ್ರವೇಶ ಹಾಗೂ ಲಭ್ಯತೆಯನ್ನು ಕಲ್ಪಿಸುವ ಪ್ರಕ್ರಿಯೆಯೇ "ಆರ್ಥಿಕ ಸೇರ್ಪಡೆ".

**ಉದಾಹರಣೆಗೆ :** ಹಾಲು ಉತ್ಪಾದ ಸಂಘಗಳಲ್ಲಿ ಆದಾಯದ ಹೊಸ ಮೂಲವನ್ನು ದೊರಕಿಸಿಕೊಡಲು ಮತ್ತು ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ ನೀಡಲು ರಾಜ್ಯದಲ್ಲಿ ಕೆ.ಎಂ.ಎಫ್. ಮತ್ತು 14 ಹಾಲು ಉತ್ಪಾದಕರ ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿವೆ. "ಹೈನುಗಾರಿಕೆ ಇರುವ ಮನೆಗಳಲ್ಲಿ... ಯಾರೂ ಉಪವಾಸ ಮಲಗುವುದಿಲ್ಲ. ದಿನದ ಅಥವಾ ವಾರದ ಆದಾಯ ಇರುವ ಯಾವ ರೈತನಿಗೂ... ಸಾಲ ಹೊರೆ ಎನಿಸುವುದಿಲ್ಲ" ಎಂದು ಹೇಳಿರುವ ಡಾ॥ ವರ್ಗೀಸ್ ಕುರಿಯನ್‌ರವರ ಮಾತುಗಳು ಸಹಕಾರಿ ಸಂಸ್ಥೆಗಳು ಆರ್ಥಿಕ ಸೇರ್ಪಡೆ ಮಹತ್ತರ ಪಾತ್ರವನ್ನು ವಹಿಸಬಲ್ಲವು ಎಂಬುದನ್ನು ಸ್ಪಷ್ಟಪಡಿಸುತ್ತವೆ.

**ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಸೇರ್ಪಡೆ ಉದ್ದೇಶ :**

ಭಾರತ ಅತ್ಯಧಿಕ ಜನ ಸಂಖ್ಯೆಯುಳ್ಳ ಬೃಹತ್ ರಾಷ್ಟ್ರವಾಗಿದ್ದು, ಶೇಕಡ 60% ಕ್ಕಿಂತಲೂ ಹೆಚ್ಚು ಜನ ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿದ್ದಾರೆ.ಅಲ್ಲದೆ ಸಹಕಾರಿ ಸಂಸ್ಥೆಗಳಿಂದ ಜನ ಸಾಮಾನ್ಯರಿಗೆ ವೇಗ ಸರಳವಾಗಿ ತಲುವುದರಿಂದ ಹಾಗೂ ಭಾರತ ದೇಶವು 1950ನೇ ಇಸವಿಯಿಂದಲೂ ದೀರ್ಘಕಾಲೀನವಾಗಿ ಆರ್ಥಿಕ ಸ್ವಾವಲಂಬನೆಗೆ ಗ್ರಾಮಗಳ ಉದ್ಧಾರ, ಉನ್ನತಿ ಹಾಗೂ ಸಮಾಜದ ಸರ್ವತೋಮುಖ ಬೆಳವಣಿಗೆಯೇ ಮೂಲ ಮಂತ್ರ ಉದೇಶವಾಗಿಸಿಕೊಂಡು ಭಾರತ ದೇಶದ ಘನ ಸರಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ಸುಮಾರು ಆರು ದಶಕಗಳಿಗಿಂತಲೂ ಮೊದಲು ಆರ್ಥಿಕ ಸೇರ್ಪಡೆ ಎಂಬ ಕಲ್ಪನೆ ಇಲ್ಲದಿರುವಾಗಲೇ ಎಲ್ಲ ವರ್ಗದ ಜನರಿಗೆ ಆರ್ಥಿಕ ಸೇವಾ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಸೇರ್ಪಡೆ ಉದ್ದೇಶವನ್ನು ಯೋಜಿಸಿ ಬಡತನ ನಿರ್ಮೂಲನದ ಶಕ್ತಿಯುತ ಅಸ್ತ್ರವಾಗಿ ಕೆಲಸ ಮಾಡುವ ಮಹತ್ವ ಉದ್ದೇಶ ಹೊಂದಿದೆ.

**ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಸೇರ್ಪಡೆ ಅನುಕೂಲ ಮತ್ತು ಅವಶ್ಯಕತೆ**

ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಸೇರ್ಪಡೆಯ ಅವಶ್ಯಕತೆ ಹೆಚ್ಚಾಗಿದೆ ಅಲ್ಲದೆ ಅದ ಅನುಕೂಲಗಳು ಸಹ ಸಹಕಾರಿಯ ಪೂರಕವಾಗಿವೆ. ಅವುಗಳಲ್ಲಿ ಸಹಕಾರ ಕ್ಷೇತ್ರದ ಆರ್ಥಿಕ ಸಂಸ್ಥೆಗಳನ್ನು ಗಮನದಲ್ಲಿರಿಸಿಕೊಂಡು ತಕ್ಕ ಆರ್ಥಿಕ ಸಂಸ್ಥೆಗಳ ಸ್ಥಾಪನೆ. ದೇಶೀಯ ಬೃಹತ್ ಬ್ಯಾಂಕುಗಳ ರಾಷ್ಟ್ರೀಕರಣ, ಹಳ್ಳಿ-ಪಟ್ಟಣ ಪ್ರದೇಶದ ಸಾರ್ವಜನಿಕರಿಗೆ ಬ್ಯಾಂಕುಗಳ ಸೇವಾ ಸೌಲಭ್ಯಗಳನ್ನು ಪೂರೈಸಲು ಬ್ಯಾಂಕ್ ಯೋಜನೆಯ ಪರಿಚಯ. ಗ್ರಾಮೀಣ ಬ್ಯಾಂಕ್ ಸ್ಥಾಪನೆ & ಎಲ್ಲ ತರಹದ ಬ್ಯಾಂಕ್ ಹಾಗೂ ಸಹಕಾರಿ ಸಂಸ್ಥೆಗಳು ಕಡ್ಡಾಯವಾಗಿ ಆದ್ಯತೆ ಮೇರೆಗೆ ಸಮಾಜದ ಎಲ್ಲಾ ವರ್ಗದವರಿಗೆ ಅಗತ್ಯ ಸಾಲ ಕಲ್ಪಿಸಲು ಅವಶ್ಯಕವಾಗಿದೆ. ಭಾರತ ದೇಶದ 6 ಲಕ್ಷ ಹಳ್ಳಿಗಳಿಗೆ ಬ್ಯಾಂಕುಗಳ ಹಾಗೂ ಸಹಕಾರಿ ಸಂಸ್ಥೆಗಳ ಆರ್ಥಿಕ ಸೇವೆ ಲಭ್ಯವಾಗಲು "ಸೇವಾ ವ್ಯಾಪ್ತಿಯ ಸಾಮೀಪ್ಯ" ಹಾಗೂ "ಗ್ರಾಮಗಳ ದತ್ತು ಸ್ವೀಕಾರ" ದಂತಹ ಯೋಜನೆಗಳನ್ನು ಹಳ್ಳಿ ಹಾಗೂ ಪಟ್ಟಣ ಗ್ರಾಮೀಣ ಬ್ಯಾಂಕ್ ಹಾಗೂ ಸಹಕಾರ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲು ಅವಶ್ಯಕವಾಗಿ ಸಹಕಾರಿಗಳಲ್ಲಿ ಆರ್ಥಿಕ ಸೇರ್ಪಡೆಯಾಗಬೇಕಿದೆ. ಬ್ಯಾಂಕೋದ್ಯಮದಲ್ಲಿ ತೊಡಗಿರುವ ಪಟ್ಟಣ ಸಹಕಾರ ಬ್ಯಾಂಕುಗಳು ಗಣಕೀಕರಣ, ಕೋರ್ ಬ್ಯಾಂಕಿಂಗ್ ಮೊದಲಾದವುಗಳನ್ನು ಅಳವಡಿಸಿಕೊಂಡು ಸ್ಪರ್ಧಾತ್ಮಕವಾಗಿ ಅತ್ಯುತ್ತಮ ಸೇವೆಗಳನ್ನು ಗ್ರಾಹಕರಿಗೆ ಒದಗಿಸುತ್ತಿವೆ. ವೈ. ಹೆಚ್. ಮಾಲೇಗಾಂವ್ ಸಮಿತಿಯು ರಿಸರ್ವ್ ಬ್ಯಾಂಕಿಗೆ ನೀಡಿರುವ ವರದಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಜನಸಾಮಾನ್ಯರಿಗೆ ಬ್ಯಾಂಕಿಂಗ್ ಸೌಲಭ್ಯ ನೀಡುವಲ್ಲಿ ಉಪಯುಕ್ತ ಪಾತ್ರ ವಹಿಸುತ್ತಿವೆ. ಎಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲವೋ ಅಲ್ಲಿ ಪಟ್ಟಣ ಸಹಕಾರಿ ಬ್ಯಾಂಕಿಂಗ್ ಆರಂಭವಾಗಬೇಕು ಎಂದು ತಿಳಿಸಿರುವುದು ಆರ್ಥಿಕ ಸೇರ್ಪಡೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಮಹತ್ತತೆಯನ್ನು ಸೂಚಿಸುತ್ತದೆ.

**ಆರ್ಥಿಕ ಸೇರ್ಪಡೆಯಿಂದ ಸಹಕಾರಿ ಸಂಸ್ಥೆಗಳಲ್ಲಿ ಬ್ಯಾಂಕಿಂಗ್ ಪ್ರಗತಿ**

ಭಾರತದಲ್ಲಿ ಸುಮಾರು 1969 ರಿಂದೀಚೆಗೆ ಬ್ಯಾಂಕಿಂಗ್ ಕ್ಷೇತ್ರ ಶೀಘ್ರ ಪ್ರಗತಿ ಸಾಧಿಸಿದೆ. 89110 ಬ್ಯಾಂಕು ಶಾಖೆಗಳನ್ನು ತೆರೆಯಲಾಗಿದ್ದು, ಅದರಲ್ಲಿ 33225 ಶಾಖೆಗಳು ಗ್ರಾಮೀಣ ಪ್ರದೇಶದಲ್ಲಿ ಹಾಗೂ 22419 ಶಾಖೆಗಳು ಅರೆನಗರ ಪ್ರದೇಶಗಳಲ್ಲಿ ಪ್ರಾರಂಭವಾಗಿವೆ. ಈ ಜಾಲಬಂಧ (Network) ಕಾರ್ಯಕ್ರಮದಿಂದ 1969ರಲ್ಲಿ 65000 ಜನಸಂಖ್ಯೆಗೆ ಒಂದು ಬ್ಯಾಂಕ್ ಲಭ್ಯವಿದ್ದದ್ದು, 2011ರಲ್ಲಿ 14000 ಜನಸಂಖ್ಯೆಗೆ ಒಂದು ಬ್ಯಾಂಕ್ ಲಭ್ಯವಾಗುವ ಪ್ರಗತಿ ಸಾಧಿಸಿದೆ.ಇದಲ್ಲದೆ, ಬ್ಯಾಂಕುಗಳು 74505 ಎ.ಟಿ.ಎಂಗಳನ್ನು ಸ್ಥಾಪಿಸಿವೆ. (ಬ್ಯಾಂಕಿನ ಶಾಖೆಯಿಂದ ಹೊರಗೆ 33776 ಹಾಗೂ ಬ್ಯಾಂಕಿಗೆ ಹೊಂದಿಕೊಂಡು 40729).ಇವು ವಾರದ ಏಳೂ ದಿನಗಳು ಹಾಗೂ ದಿನದ 24 ಗಂಟೆಗಳೂ ತಡೆರಹಿತ ಸೇವೆಯನ್ನು ಒದಗಿಸುವ "ರೋಬೋಟ್ ಕ್ಯಾಷಿಯರುಗಳು" ಅಥವಾ 'ನಗದು ವಿತರಿಸುವ ಸ್ವಯಂಚಾಲಿತ ಯಂತ್ರಗಳಾಗಿ' ಕಾರ್ಯವೆಸಗುತ್ತವೆ.ದೇಶದ 203 ಮಿಲಿಯನ್ ಜನರು ಗ್ರಾಮೀಣ ಪ್ರದೇಶಗಳಲ್ಲಿದ್ದಾರೆ. NSSO (2003ನೇ ವರ್ಷದ ಸಮೀಕ್ಷೆಯ ಪ್ರಕಾರ) 89.3 ಮಿಲಿಯನ್ ರೈತಾಪಿ ಜನರಲ್ಲಿ 45.9 ಮಿಲಿಯನ್ ಜನರಿಗೆ (51.4%) ಆರ್ಥಿಕ ಸಂಸ್ಥೆಗಳಿಂದಾಗಲೀ ಅಥವಾ ಇತರ ಸೇವಾ ಮೂಲಗಳಿಂದಾಗಲೀ ಸಾಲ ಅಲಭ್ಯ.ಆರ್ಥಿಕ ಸೇರ್ಪಡೆಯಿಂದ ಹೊರಗಿರುವವರಲ್ಲಿ ಸಣ್ಣ ಹಾಗೂ ಅತಿ ಸಣ್ಣ ರೈತರು, ಭೂರಹಿತ ಕಾರ್ಮಿಕರು, ಮೌಖಿಕ ಗೇಣಿದಾರರು, ಅಸಂಘಟಿತ ಕ್ಷೇತ್ರದ ಸ್ವ-ಉದ್ಯೋಗಿಗಳು, ನಗರದ ಕೊಳಚೆ ಪ್ರದೇಶವಾಸಿಗಳು, ಅಲ್ಪ ಸಂಖ್ಯಾತ ಅಲೆಮಾರಿ ಜನಾಂಗ, ಸಾಮಾಜಿಕ ತೆಕ್ಕೆಯಿಂದ ಹೊರಗಿರುವ ಗುಂಪುಗಳು, ಹಿರಿಯ ನಾಗರಿಕರು ಹಾಗೂ ಮಹಿಳೆಯರು ಸೇರಿದ್ದಾರೆ.

ಆರ್ಥಿಕ ಸೇರ್ಪಡೆ ಕಾರ್ಯಕ್ರಮವು ಸರಳ ಬ್ಯಾಂಕಿಂಗ್ ವ್ಯವಹಾರದ ಲಕ್ಷಣಗಳನ್ನು ಮೀರಿದ ಸಾಧ್ಯತೆ ಹೊಂದಿದೆ. ಗ್ರಾಮೀಣ ಭಾರತದ

ಬದಲಾವಣೆಗೆ ಸಾಕ್ಷಿಯಾಗಿದೆ.ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ, ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆ ಮತ್ತು ಅಟಲ್ ಪಿಂಚಣಿ ಯೋಜನೆಗಳಲ್ಲಿ ಈಗಾಗಲೇ 10 ಕೋಟಿಗೂ ಹೆಚ್ಚು ಜನ ತೊಡಗಿಸಿಕೊಂಡಿದ್ದಾರೆ. ಆರ್ಥಿಕ ಸೇರ್ಪಡೆಯ ಮುಖ್ಯ C.R.I.S.P. ಅಂದರೆ ಸಾಲ ವಿತರಣೆ, ಹಣ ಪಾವತಿ, ವಿಮೆ, ಉಳಿತಾಯ ಮತ್ತು ಪಿಂಚಣಿ ಮುಂತಾದ ಐದು ರೀತಿಯ ಹಣಕಾಸು ಸೌಲಭ್ಯಗಳನ್ನು ಸ್ವಸಹಾಯ ಗುಂಪುಗಳ ಮೂಲಕವೂ ಸಹ ಪಡೆದುಕೊಳ್ಳಲು ಸಾಧ್ಯವಾಗುತ್ತಿದೆ.

ಭಾರತ ಸರಕಾರ ಒಂದು ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಸೇರ್ಪಡೆ ಯೋಜನೆ ಸಿದ್ಧಪಡಿಸಿದ್ದು ಅದರನ್ವಯ ವಿವಿಧ ರಾಜ್ಯಗಳ ಕೃಷಿಕ ಮತ್ತು ಕೃಷಿಕರಲ್ಲದ (ಸಾಗುವಳಿದಾರರ ಮತ್ತು ಸಾಗುವಳಿದಾರರಲ್ಲದ) ಸುಮಾರು 55.7 ಮಿಲಿಯನ್ ಆರ್ಥಿಕ ಸೇರ್ಪಡೆಯಿಂದ ಹೊರಗುಳಿಯಲ್ಪಟ್ಟ ಜನರಲ್ಲಿ ಕನಿಷ್ಠ 50 ಪ್ರತಿಶತ ಜನರಿಗೆ 2012 ರ ವೇಳೆಗೆ ವಾಣಿಜ್ಯ ಬ್ಯಾಂಕುಗಳ ಮತ್ತು ಗ್ರಾಮೀಣ ಬ್ಯಾಂಕುಗಳ – ಗ್ರಾಮೀಣ ಮತ್ತು ಅರೆಪಟ್ಟಣ ಶಾಖೆಗಳ ಮೂಲಕ ಬಹುವ್ಯಾಪಿ ಆರ್ಥಿಕ ಸೇವೆಗಳನ್ನು ಪೂರೈಸುವ ಗುರಿ ಹೊಂದಲಾಗಿದೆ. ಉಳಿದ ಜನರನ್ನು 2015ರ ಒಳಗೆ ಸೇರ್ಪಡೆಗೊಳಿಸುವ ಗುರಿ ಇದೆ. ಪ್ರತೀ ಬ್ಯಾಂಕು ಶಾಖೆಯ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು ಜನಸಂಖ್ಯೆ ಇರುವ ಗ್ರಾಮೀಣ ಮತ್ತು ಅರೆ ಪಟ್ಟಣ ಪ್ರದೇಶಗಳನ್ನೊಳಗೊಂಡ ಜಿಲ್ಲೆಗಳನ್ನು ಆರ್.ಬಿ.ಐ ಗುರುತಿಸಿದೆ. 2000 ಜನಸಂಖ್ಯೆಗಿಂತ ಹೆಚ್ಚು ಜನರಿರುವ ಬ್ಯಾಂಕ್ ರಹಿತ ಗ್ರಾಮೀಣ ಪ್ರದೇಶಗಳನ್ನು ಪತ್ತೆ ಮಾಡುವ ಜವಾಬ್ದಾರಿಯನ್ನು ಆಯಾ ರಾಜ್ಯದ ರಾಜ್ಯ ಮಟ್ಟದ ಸಮಾಲೋಚನಾ ಸಮಿತಿ ಹಾಗೂ ಜಿಲ್ಲಾ ಮಟ್ಟದ ಸಮಾಲೋಚನಾ ಸಮಿತಿಗಳಿಗೆ ವಹಿಸಿದ್ದು, ಅಂತಹ ಗ್ರಾಮಗಳಿಗೆ ಶಾಖೆಗಳ ಮೂಲಕವಾಗಲೀ ವ್ಯವಹಾರ ಪ್ರತಿನಿಧಿಗಳ ಮೂಲಕವಾಗಲೀ ಅಥವಾ ಇನ್ನಿತರ ಮಾರ್ಗೋಪಾಯಗಳ ಮೂಲಕವಾಗಲೀ ಬ್ಯಾಂಕಿನ ಸೇವೆಗಳನ್ನು ಒದಗಿಸುವಂತೆ ಆರ್.ಬಿ.ಐ ಯು ಜಿಲ್ಲಾ ಆದ್ಯತೆ ಮೇರೆಗೆ ಕೆಲವುಬ್ಯಾಂಕುಗಳಿಗೆ ಸೂಚನೆ ನೀಡಿದೆ. ಈ ದಿಸೆಯಲ್ಲಿ ಬ್ಯಾಂಕುಗಳು ಇಂತಹ 2000ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ 73000 ಬ್ಯಾಂಕ್ ಸೌಲಭ್ಯವಿಲ್ಲದ ಪ್ರದೇಶಗಳನ್ನು ಗುರುತಿಸಿವೆ.

### ಸಹಕಾರಿ ಸಂಸ್ಥೆಗಳಲ್ಲಿ ತಂತ್ರಜ್ಞಾನ ಹಾಗೂ ಡಿಜಿಟಲೈಜೇಷನ್ ಅಳವಡಿಸುವ ಉದ್ದೇಶ

ಸಹಕಾರಿ ಸಂಸ್ಥೆಗಳಲ್ಲಿ ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಗೆ ಬದಲಾದರೆ ನಗದು ವ್ಯವಹಾರಕ್ಕೆ ಬೇಡಿಕೆ ಕಡಿಮೆಯಾಗುತ್ತದೆ ಮತ್ತು ಹಣದ ಸಂಗ್ರಹವೂ ಕಡಿಮೆಯಾಗುತ್ತದೆ. ಇದರಿಂದ ಬ್ಯಾಂಕ್‌ಗಳಲ್ಲಿ ಹೆಚ್ಚಿನ ಹಣ ಉಳಿದು ಉಳಿತಾಯಕ್ಕೆ ಅವಕಾಶವಾಗುತ್ತದೆ. ಇದರಿಂದಾಗಿ ಹಣಕಾಸು ವಹಿವಾಟು ಪಾರದರ್ಶಕವಾಗಿರುತ್ತದೆ. ಎಲ್ಲ ವಹಿವಾಟುಗಳನ್ನು ಸುಲಭವಾಗಿ ಕಂಡುಹಿಡಿಯಬಹುದು. ಜನರ ಹಣ ಬ್ಯಾಂಕುಗಳಲ್ಲಿ ಸುರಕ್ಷಿತವಾಗಿರುತ್ತದೆ. ಸರ್ಕಾರಕ್ಕೆ ಹಣದ ಚಲಾವಣೆ ಬಗ್ಗೆ ಮಾಹಿತಿ ದೊರಕುತ್ತಿರುತ್ತದೆ.ಡಿಜಿಟಲ್ ಆರ್ಥಿಕತೆ ಬ್ಯಾಂಕಿಂಗ್‌ಸಹಕಾರಿ ಸಂಸ್ಥೆಗಳಲ್ಲಿ ಮಹತ್ವದ ತಿರುವು ಪಡೆದಿದೆ.

**ಸಹಕಾರಿ ಸಂಸ್ಥೆಗಳಲ್ಲಿ ತಂತ್ರಜ್ಞಾನ ಹಾಗೂ ಡಿಜಿಟಲೈಜೇಷನ್ ಅಳವಡಿಸಬಹುದಾದ ಸೌಲಭ್ಯಗಳು :** ಕ್ಯಾಸ್ ಲೆಸ್ ವ್ಯವಹಾರ, RTGS ಮತ್ತು ಒಇಈಖಿ ಮೂಲಕ ಎಲ್ಲ ವರ್ಗಗಳ ಜನರು ಹಣ ವರ್ಗಾವಣೆ, ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆ, ಎಟಿಎಂ ಮತ್ತು ಪಿಓಎಸ್ ರುಪೇ ಕಾರ್ಡ್‌ಗಳ ಮೂಲಕ ವ್ಯವಹಾರ, ಬಯೋ–ಮೆಟ್ರಿಕ್ ಎಟಿಎಂ, Common Application Software (C.A.S.) ಮತ್ತು ನೇರ ಪ್ರಯೋಜನ ವರ್ಗಾವಣೆ (ಡಿಬಿಟಿ), ಬ್ಯಾಂಕಿಂಗ್ ವ್ಯವಸ್ಥೆಗಳ ಸೌಲಭ್ಯವನ್ನು ಸಹಕಾರಿ ಸಂಸ್ಥೆಗಳಿಂದ ಒದಗಿಸಿದಂತಾಗುತ್ತದೆ.

**ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಸೇಪಡೆ ಹಾಗೂ ತಾಂತ್ರಿಕತೆ & ಡಿಜಿಟಲೈಜೇಷನ್ ಅಳವಡಿಕೆಗೆ ಇರುವ ಅಡೆತಡೆಗಳು:** ನಮ್ಮ ದೇಶವು ಹೆಚ್ಚು ಹಳ್ಳಿಗಳನ್ನು ಹೊಂದಿರುವುದರಿಂದ ಮತ್ತು ನಗದು ರಹಿತ ವ್ಯವಹಾರಗಳಿಗೆ ಅವಶ್ಯಕವಾದ ಇಂಟರ್‌ನೆಟ್ ಸೇವೆಗಳು ಗ್ರಾಮೀಣ ಪ್ರದೇಶಗಳಲ್ಲಿ ಲಭ್ಯವಿಲ್ಲದ ಕಾರಣ ನಗದು ರಹಿತ ಅರ್ಥವ್ಯವಸ್ಥೆಗೆ ಹಿನ್ನಡೆ ಉಂಟಾಗಬಹುದು. ಆನ್‌ಲೈನ್ ವ್ಯವಹಾರಗಳು ಮೊಬೈಲ್ ಮತ್ತು ಇಂಟರ್‌ನೆಟ್‌ಗಳನ್ನೆ ಹೆಚ್ಚು ಅವಲಂಬಿಸಿರುವುದರಿಂದ ಮತ್ತು ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡಗಳನ್ನು ಬಳಸುವ ಕನಿಷ್ಠ ತಿಳುವಳಿಕೆ ಗ್ರಾಮೀಣ ಜನರಿಗೆ ಇಲ್ಲದಿರುವ ಕಾರಣ ಈ ಆರ್ಥಿಕ ಅನಕ್ಷರತೆಯು ಕೂಡ ದೊಡ್ಡ ಸಮಸ್ಯೆಯಾಗಿದೆ. ಗ್ರಾಮೀಣ ಭಾಗದ ಜನರು ಜನ್–ಧನ್ ಖಾತೆಗಳ ಪಾಲೆ ಹೆಚ್ಚು ಇವುಗಳಲ್ಲಿ ಬಹಳಷ್ಟು ಖಾತೆಗಳು ಈಗಲೂ ಕೂಡ ಕ್ರಿಯಾಶೀಲವಿಲ್ಲದ ಕಾರಣ ಅಂತಹ ಖಾತೆಗಳನ್ನು ಹೊಂದಿರುವ ಜನರನ್ನು ಮನವೊಲಿಸುವುದು ಸಾಹಸದ ಸಂಗತಿ. ಡಿಜಿಟಲ್ ವ್ಯವಹಾರಗಳು ಸ್ವಲ್ಪ ಹೆಚ್ಚು ಸಮಯವನ್ನು ಬಳಸುವುದರಿಂದ ನಮಗೆಲ್ಲರಿಗೂ ತಾಳ್ಮೆಯ ಅವಶ್ಯಕತೆ ಇದೆ.ಕಾರ್ಡ್‌ಗಳ ಬಳಕೆಯಿಂದ ಶುಲ್ಕ ಭಯ ಇದರ ಬಗ್ಗೆ ತಿಳುವಳಿಕೆ ಇಲ್ಲದಿರುವುದು, ಮೊಬೈಲ್ ವ್ಯಾಲೆಟ್‌ಗಳ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುವುದು(ಅಪ್‌ಡೇಟ್) ಇಲ್ಲದಿರುವುದು.

**ಸಹಕಾರಿ ಸಂಸ್ಥೆಗಳಲ್ಲಿ ತಂತ್ರಜ್ಞಾನ ಹಾಗೂ ಡಿಜಿಟಲೈಜೇಷನ್ ಅಳವಡಿಸುವುದರಿಂದ ಅನುಕೂಲಗಳು :** ಈಗಾಗಲೇ ಕೆಲವು ದೇಶಗಳಲ್ಲಿ "ಅತ್ಯಲ್ಪ ಹಣದ ಆರ್ಥಿಕತೆ" ಚಾಲ್ತಿಯಲ್ಲಿದೆ. ಇಂದು ಒಂದು ಕ್ಯಾಶಲೆಸ್ ಬಸ್ಸು, ಕಾರು, ಟ್ರೇನುಗಳಲ್ಲಿ ನಗದು ಹಣವನ್ನು ಸ್ವೀಕರಿಸುವುದು ಕ್ರಮೇಣ ಕಡಿಮೆಯಾಗಿದೆ. ವೇಗವಾಗಿ ನಗದುರಹಿತವಾಗಿ ಹಣಪಾವತಿಸುವ ವ್ಯವಸ್ಥೆಯನ್ನು ಜಾರಿಗೆ ತಂದು ದಕ್ಷತೆಯನ್ನು ಹೆಚ್ಚಿಸಿಕೊಂಡು ಆಡಳಿತ ನಡೆಸುತ್ತಿವೆ. ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಅಭಿವೃದ್ಧಿ ಗಣನೀಯವಾಗಿ ವೃದ್ಧಿಯಾಗಿದೆ.ಜನ ಕಲ್ಯಾಣ ಬ್ಯಾಂಕಿಂಗ್ ಸೇವೆಗಳು, (ಉದಾ ಎಲ್‌ಪಿಜಿ ಬಳಕೆದಾರರ ಸಬ್ಸಿಡಿ). ದರೋಡೆಕೋರರು ಬ್ಯಾಂಕ್ ಕಡೆ ತಲೆ ಹಾಕಿ ಮಲಗುವುದಿಲ್ಲ. ಏಕೆಂದರೆ ಎಷ್ಟು ಕಷ್ಟಪಟ್ಟು ದರೋಡೆ ಮಾಡಿದರು ಕ್ಯಾಷ್ ಸಿಗುವುದಿಲ್ಲ.ಆನ್‌ಲೈನ್ ಮೂಲಕ ಪಾವತಿಸಿದರೆ ರಿಯಾಯಿತಿಗಳು (ಉದಾ: ಸಾರ್ವಜನಿಕ ವಿಮಾ ಕಂಪನಿಗಳಲ್ಲಿ ಪೋರ್ಟಲ್‌ಗಳ ಮೂಲಕ ಹೊಸ ಪಾಲಿಸಿ ಖರೀದಿಸಿದರೆ ಅಥವಾ ಕಂತು ತುಂಬಿದರೆ ಶೇ.10ರವರೆಗೂ ರಿಯಾಯಿತಿ ದೊರೆಯಲಿದೆ.), ಡಿಜಿಟಲ್ ವ್ಯವಸ್ಥೆಯ ಮೂಲಕ ಪಾರದರ್ಶಕ ಆಡಳಿತ ನೀಡಲು ಆದ್ಯತೆ ನೀಡಲಾಗಿದೆ. ಸಹಕಾರಿ ಸಂಸ್ಥೆಗಳಲ್ಲಿ ಎಲ್ಲ ವ್ಯವಹಾರಗಳಿಗೂ ಒಂದು ಸಾಫ್ಟ್‌ವೇರ್ ಸಾಧ್ಯವಿದೆ. Reporting System ಸುಲಭವಾಗುತ್ತದೆ. Support, Service, Cost Effective ಸಾಧ್ಯವಾಗುತ್ತದೆ. ಯುವಜನತೆಗೆ ವೃತ್ತಿಯ ಅವಕಾಶಗಳನ್ನು ಕಲ್ಪಿಸಲು ಸಾಧ್ಯವಾಗುತ್ತಿದೆ. ಆರ್ಥಿಕ ಸೇರ್ಪಡೆಯು ಹೆಚ್ಚು ಉದ್ಯೋಗ ಒದಗಿಸಿ ಅರ್ಥವ್ಯವಸ್ಥೆಯ ಬೆಳವಣಿಗೆಗೆ ಪೂರಕವಾಗಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2017-19 RNI NO. KARBIL-2004/18001/Pages 36



ಮೇಕ್ ಇನ್ ಇಂಡಿಯಾದ ಉದ್ದೇಶವನ್ನು ಬಲಗೊಳಿಸಲಿದೆ, ಬ್ಯಾಂಕಿಂಗ್ ವಲಯದ ವಿಕಾಸದ ಜೊತೆಗೆ ಸರ್ಕಾರಿ ಸೇವೆಗಳ ವಿತರಣೆ, ಸಮಾಜದ ಕೊನೆಯ ವ್ಯಕ್ತಿಯೂ ಸಾರ್ವತ್ರಿಕವಾಗಿ ಎಲ್ಲಾ ಸೇವೆಗಳು ಮತ್ತು ಸವಲತ್ತುಗಳು ದೊರಕುವಂತಾಗುವವು. ಭ್ರಷ್ಟಾಚಾರವಿಲ್ಲದೆ ಹೆಚ್ಚಿನ ಸಾಮರ್ಥ್ಯವನ್ನು ಸಾಧಿಸಬಹುದು, ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾವಣೆಗೊಳ್ಳುವುದರಿಂದ ಹೆಚ್ಚಿನ ಪಾರದರ್ಶಕತೆಯನ್ನು ಕಾಯ್ದುಕೊಳ್ಳಬಹುದು. ಹಣವನ್ನು ಫಲಾನುಭವಿಯು ಯಾವ ಅಡ್ಡಿ ಆತಂಕವಿಲ್ಲದೆ ಪಡೆದುಕೊಳ್ಳುವುದರಿಂದ ಭ್ರಷ್ಟಾಚಾರದ ಪ್ರಮಾಣ ಇಳಿಮುಖವಾಗುವುದು. ಎಲ್ಲರನ್ನೂ, ಎಲ್ಲವನ್ನೂ ಒಳಗೊಂಡು... ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಸಹಕಾರ ಸಂಸ್ಥೆಗಳು ಎಲ್ಲ ರೀತಿಯಲ್ಲೂ ಸಮರ್ಥವಾಗಿವೆ.

### ಉಪ ಸಂಹಾರ

ಪ್ರಜಾಪ್ರಭುತ್ವವು ಸಮಾಜದಲ್ಲಿ ಆಳವಾಗಿ ಬೇರು ಬಿಡಬೇಕೆಂದರೆ ಅಲ್ಲಿನ ಅಭಿವೃದ್ಧಿಯು ಎಲ್ಲರನ್ನು ಒಳಗೊಳ್ಳುವಂತಿರಬೇಕು. ರಾಷ್ಟ್ರೀಯ ಉತ್ಪನ್ನವನ್ನು ಆದರ್ಶ ಗರಿಷ್ಠ ಮಟ್ಟಕ್ಕೆ ಒಯ್ಯುವುದು ಸಾಧ್ಯವಾಗಬೇಕಾದರೆ ಅದರಲ್ಲಿ ಸಮಾಜದ ಎಲ್ಲರೂ ಸಹಭಾಗಿಗಳಾಗಬೇಕು. ಅಭಿವೃದ್ಧಿಯಲ್ಲಿ ಎಲ್ಲರನ್ನೂ ಒಳಗೊಂಡು ಎಲ್ಲರಿಗೂ ಫಲಗಳು ಸಿಗುವಂತಾಗಬೇಕು. ಎಲ್ಲರನ್ನೂ ಮತ್ತು ಎಲ್ಲವನ್ನೂ ಒಳಗೊಂಡ ಅಭಿವೃದ್ಧಿಯಾಗಬೇಕಾದರೆ "ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ" ತುಂಬ ಮುಖ್ಯ. 2020ರ ಹೊತ್ತಿಗೆ ಕರ್ನಾಟಕದ ಎಲ್ಲಾ ಗ್ರಾಮಗಳೂ ನಗದುರಹಿತವಾಗುತ್ತವೆ. ಇದೆಲ್ಲ ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ವ್ಯವಹಾರದಲ್ಲಿ ತಂತ್ರಜ್ಞಾನ ಹಾಗೂ ಡಿಜಿಟಲೈಜೇಷನ್ ಅವಡಿಸಿಕೊಂಡು ಕಾರ್ಯನಿರ್ವಹಿಸುತ್ತಿರುವುದರಿಂದ ಸಾಧ್ಯವಾಗುತ್ತಿದೆ. ಹಲ್ಲಾಡಿ, ಚಂದಗಾಳು, ಶೇರವಾಡ, ಗ್ರಾಮವನ್ನು ಉಡುಪಿ ಜಿಲ್ಲೆಯ ಮೊದಲ ನಗದು ರಹಿತ ಗ್ರಾಮ ಎಂದು ಘೋಷಿಸಲಾಗುತ್ತಿದೆ.

ಈಗಾಗಲೇ ನಾವು ನೋಡುತ್ತಿರುವಂತೆ, ರಸ್ತೆ ಬದಿಯ ವ್ಯಾಪಾರಿಗಳು, ಸಣ್ಣ ವ್ಯಾಪಾರಿಗಳು ಸಹ ಡಿಜಿಟಲ್ ಮೂಲಕ ವ್ಯಾಪಾರ ವಹಿವಾಟು ನಡೆಸುತ್ತಿದ್ದಾರೆ. ಸಾರ್ವಜನಿಕರು ಈಗಾಗಲೇ ನಗದುರಹಿತ ವ್ಯವಸ್ಥೆಗೆ ಹೊಂದಿಕೊಳ್ಳುತ್ತಿರುವುದರಿಂದ ಸಹಕಾರಿಗಳೂ ಕೂಡಾ ಬದಲಾವಣೆಗೆ ಹೊಂದಿಕೊಳ್ಳಬೇಕಾಗುತ್ತದೆ. ಸಹಕಾರಿ ಸಂಸ್ಥೆಗಳನ್ನು ನಮ್ಮ ಅಭಿವೃದ್ಧಿಗಾಗಿ, ನಾವೇ ಸ್ಥಾಪಿಸಿಕೊಂಡಿದ್ದೇವೆ. ಸದಸ್ಯರ ಹಿತಾಸಕ್ತಿ ಮತ್ತು ಸಂಸ್ಥೆಯ ಅಭಿವೃದ್ಧಿ ಪ್ರತಿಯೊಂದು ಸಹಕಾರಿಯ ಪ್ರಮುಖ ಉದ್ದೇಶವಾಗಿದೆ. ಕಡಿಮೆ ಖರ್ಚಿನಲ್ಲಿ, ಕಡಿಮೆ ಸಮಯದಲ್ಲಿ ಸದಸ್ಯರಿಗೆ ಮತ್ತು ಗ್ರಾಹಕರಿಗೆ ಹೆಚ್ಚಿನ ಸೇವೆ ನೀಡುವುದು ಉತ್ತಮ ಆಡಳಿತದ ಲಕ್ಷಣ. ಇದು ತಂತ್ರಜ್ಞಾನದ ಅಳವಡಿಕೆಯಿಂದ ಸಾಧ್ಯವಾಗುತ್ತದೆ. ತಂತ್ರಜ್ಞಾನವು ಎಲ್ಲ ಕ್ಷೇತ್ರಗಳನ್ನು ಆವರಿಸಿಕೊಂಡಿದ್ದು ತಂತ್ರಜ್ಞಾನ ಸಾಕಷ್ಟು ಮುಂದುವರೆದ ಇಂದಿನ ಸಂದರ್ಭದಲ್ಲಿ ಡಿಜಿಟಲ್ ವ್ಯವಸ್ಥೆ ಸಹಕಾರ ಕ್ಷೇತ್ರಕ್ಕೆ ಅಗತ್ಯವಾಗಿದೆ.

ಸಹಕಾರಿಗಳು ಪ್ರಸ್ತುತ ಸದಸ್ಯರಿಂದ ಠೇವಣಿ ಸಂಗ್ರಹಣೆ, ಸಾಲ ನೀಡಿಕೆ, ಬಂಡವಾಳೇತರ ವ್ಯವಹಾರ ಮತ್ತು ಇ-ಸ್ಟಾಂಪಿಂಗ್ ಇತ್ಯಾದಿಗಳನ್ನು ಹೆಚ್ಚಾಗಿ ನಗದಿನ ರೂಪದಲ್ಲಿಯೇ ವ್ಯವಹರಿಸುತ್ತಿರುವುದು ಸರಿಯಷ್ಟೆ. ಮುಂದಿನ ದಿನಗಳಲ್ಲಿ ನಗದು ವ್ಯವಹಾರವನ್ನು ಕಡಿಮೆ ಮಾಡಿ, ಲೆಸ್‌ಕ್ಯಾಷ್ ವ್ಯವಹಾರವನ್ನು ಮಾಡಬೇಕಾದರೆ ಕೋರ್ ಬ್ಯಾಂಕಿಂಗ್ ಸಲ್ಯೂಷನ್ (CBS) ಆಗಿರಬೇಕು. ಇದು ಡಿಜಿಟಲ್ ವ್ಯವಸ್ಥೆಯ ಮೂಲಕ ಸಾಧ್ಯವಿದೆ. ಸಿಬಿಎಸ್ ನಿಂದ Data base ಇರುವ server ಮುಖಾಂತರ ಡೆಬಿಟ್/ಕ್ರೆಡಿಟ್ transaction, online banking ವ್ಯವಹಾರಗಳನ್ನು ನಡೆಸಬಹುದು.

ಹಳ್ಳಿ ಹಾಗೂ ನಗರ ಪ್ರದೇಶಗಳಲ್ಲಿ ಒಂದು ಸಾವಿರ ಜನರಿಗೆ ಸುಮಾರು 60% ರಷ್ಟು ಜನರು ಸ್ಮಾರ್ಟ್‌ಫೋನ್ ಹೊಂದಿದ್ದಾರೆ. ಶೇ.73 ರಷ್ಟು ಜನರು ಮೊಬೈಲ್‌ನಲ್ಲಿ ಅಂತರ್‌ಜಾಲದ ಸೌಲಭ್ಯ ಪಡೆದುಕೊಂಡಿದ್ದಾರೆ. ಇದರಿಂದ ಆರ್ಥಿಕ ವ್ಯವಹಾರ ನಡೆಸುತ್ತಿರುವುದು ನೋಡಿದರೆ ನಗದುರಹಿತ ಆರ್ಥಿಕ ವ್ಯವಸ್ಥೆಯನ್ನು ಹೊಂದಲು ಸಹಕಾರಿಗಳಿಗೆ ಯಾವುದೇ ಸಮಸ್ಯೆಯಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಅಂಶಗಳನ್ನು ಗಮನಿಸಿದರೆ ಎಲ್ಲ ಸಹಕಾರಿ ಸಂಸ್ಥೆಗಳು ಶೀಘ್ರವಾಗಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಆರ್ಥಿಕ ಸೇರ್ಪಡೆಯಲ್ಲಿ ನೂತನ ಕ್ರಾಂತಿಯನ್ನು ಮೂಡಿಸಲು ದಾಪುಗಾಲು ಇಟ್ಟಿವೆ. ಈ ಬೆಳವಣಿಗೆಗಳು ಅರ್ಥವ್ಯವಸ್ಥೆಯಲ್ಲಿ ಸೃಜನಾತ್ಮಕ ಸಾಮರ್ಥ್ಯವನ್ನು ಉಂಟುಮಾಡಲಿವೆ.

ದೇಶದಲ್ಲಿ ಸ್ವಾಯತ್ತ ಸಹಕಾರ ಕಾಯ್ದೆಗಳಡಿಯಲ್ಲಿ ಕರ್ನಾಟಕದಲ್ಲಿ 2001ರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಪ್ರಾರಂಭವಾಗಿ ಉತ್ತಮವಾಗಿ ಹಾಗೂ ಮಾದರಿಯಾಗಿ ಮತ್ತು ಹಳೆಯ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳಿಗೆ ಪ್ರೋತ್ಸಾಹವನ್ನು ನೀಡುವಂತೆ ರಾಜ್ಯದ 4000 ಸೌಹಾರ್ದ ಸಹಕಾರಿಗಳ ಕಾರ್ಯ ಶ್ಲಾಘನೀಯವಾಗಿದೆ. ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿ ಉತ್ತಮ ಉದಾಹರಣೆಯಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ನಾವು ಇಷ್ಟು ದಿನ ಕೈಗಾರಿಕಾ ಕ್ರಾಂತಿ ಹಸಿರು ಕ್ರಾಂತಿಅನ್ನುತ್ತಿದ್ದೆವು ಇಂದು ಪುಸ್ತಕದಿಂದ ಯಂತ್ರಗಳನ್ನು ಕಳಚಿ ತಾಂತ್ರಿಕತೆಯನ್ನು ಡಿಜಿಟೈಲೇಜೆಷನ್ ಅಳವಡಿಸಿ ಆರ್ಥಿಕ ಸೇರ್ಪಡೆಯಲ್ಲಿ ಸಹಕಾರಿ ಸಂಸ್ಥೆಗಳು Tech - digit ನ ಕ್ರಾಂತಿಯನ್ನು ಸಾಧಿಸ ಹೊರಟಿವೆ. ಬನ್ನಿ ಕೈ ಜೋಡಿಸೋಣ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1-ಕೆ-ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ-585102 ದೂ: 08472-270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010